

ಅಖಿಲ ಭಾರತ ಪತ್ರಿಕೆ

ನವೆಂಬರ್ 2024

# ನಿಷ್ಠೆ

ಬೆಲೆ : 15/-



ಫೋಟೊ: ಇಮೇಜಿಂಗ್ ಸಾವಿತ್ರಿ

## ಶ್ರೀ ಅರವಿಂದರ "ಸಾವಿತ್ರಿ"

ಅವಕಾಶದಲ್ಲಿ ಗೋಚರಕೆ ಸಿಗದೆ ವಿಸ್ತಾರವಾಗಿ ಇಲ್ಲಿ
ಇರುವ ಆ ಆತ್ಮದೀ-ಥರದ ಸೂಕ್ಷ್ಮದಾಕಾಶ ದ್ರವ್ಯದಲ್ಲಿ,
ದಿಗ್ದೇಹಿಯಾಗಿ ಜೊತೆ ಶುಭ್ರ ಅಚಲ ನಿರಾಳದ ಮೌನದಲ್ಲಿ
ಸ್ಥೂಲ-ಸೂಕ್ಷ್ಮವದು ಹೊರಗು-ಒಳಗಿನಲಿ ಒಂದಾದ ಹಂತದಲ್ಲಿ

ಪ್ರತ್ಯೇಕವಾಗಿ ತನ್ನಲ್ಲೆ ಹೊಳೆದು ತಾನಲ್ಲಿ ಸ್ಥಿತದ ಕಾಂತಿ,
ದೇದೀಪ್ಯಮಾನ ಶತಕೋಟಿ ಸೂರ್ಯರುಜ್ವಲದ ಶ್ವೇತಕ್ರಾಂತಿ
ಮರ್ತ್ಯ ಲೋಕದಾ ಅಕ್ಷಿಗಳು ಸತತ ಇದ ಸಹಿಸೆ ತಾವಶಕ್ತ
ಅದಕಾಗಿ ಹಿತದ ಕಿರಣದಾ ಗವಸು ಪಾಲಿಸಲು ಜಗವು ಸೂಕ್ತ

ಚೇತನದ ಸಹಜ ಮುಕ್ತ-ಶಕ್ತಿಯದು ಮತ್ತದೋ ಜೊತೆಗೆ ತಾನು
ಪರಮದಾಂತರ್ಯ ಶಕ್ತಿರಾಶಿಯದು ಸಂಘಟಿತವಾಗಿ ಇನ್ನು
ದೇವಚಿಂತನೆಯ ಸ್ಪಂದ-ಸ್ಪಂದವದು ಏಕಾಂತ ತಾಣದಲ್ಲಿ
ಪ್ರಜ್ವಲಿತಗೊಂಡು ಪ್ರಖರಗೊಳ್ಳುತಲಿ ತಪಿಸುತಿಹ ಹಂತದಲ್ಲಿ.

**– ಪುಟ್ಟು ಕುಲಕರ್ಣಿ**
**(ದಳ 1 ರೇಣು 4 ಪುಟ 57)**

**ಅಖಿಲ ಭಾರತ ಪತ್ರಿಕೆ**

**ನವೆಂಬರ್ 2024**

ಸಂಪುಟ: 34 ಸಂಚಿಕೆ: 11


# ಪರಿವಿಡಿ


**ಸಂಪಾದಕರು:**
ಶ್ರೀ ಪುಟ್ಟು ಕುಲಕರ್ಣಿ
ರಾಘವೇಂದ್ರ ಮಠದ ಹಿಂಭಾಗ,
ಗಿಬ್ ಸರ್ಕಲ್, ಹೆರವಟ್ಟ ರಸ್ತೆ,
ಕುಮಟಾ – 581 332.
ಫೋನ್: 9448774920
mayureshwarkp@gmail.com

**ಪರಿಶೀಲನಾ ಸಮಿತಿ:**
ಡಾ॥ ಆರ್.ಕೆ. ಕುಲಕರ್ಣಿ



**ಪ್ರಕಾಶಕರು:**
ಡಾ॥ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು:**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.
ಫೋನ್: 080 – 2244 9882
https://www.sriaurobindo
complex.org/archive.php
http://abp.sirinudi.org

**ಡಿ.ಟಿ.ಪಿ.:**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ:**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.


## ನಿಷ್ಠೆ

ಜಡತ್ವದಲ್ಲಿ ದೈವತ್ವದ ಆವಿಷ್ಕಾರ. – ಶ್ರೀ ಅರವಿಂದರು


**ನಿಷ್ಠೆ (ವಿಧೇಯತೆ) ಎಂದರೇನು?** 2

**ನಿಷ್ಠೆಯು (ವಿಧೇಯತೆಯು) ಸಾಧನೆಗೆ ಸಹಕಾರಿ** 9
ಅನು: ಶ್ರೀಮತಿ ವಿಶಾಲಾಕ್ಷೀ ಸತ್ಯನ್

**ನಿಷ್ಠೆಯ (ವಿಧೇಯತೆಯ) ಸಾಮರ್ಥ್ಯ** 15
**ಅನುಷ್ಠಾನದಲ್ಲಿ ನಿಷ್ಠೆ (ವಿಧೇಯತೆ)** 19
**ನಿಷ್ಠೆಯ (ವಿಧೇಯತೆಯ) ಮಾರ್ಗದಲ್ಲಿ ಅಡೆತಡೆಗಳು** 23
ಅನು: ಡಾ॥ ಮಹಾದೇವ ಸಕ್ರಿ

**ಅನಿಷ್ಠೆಯ (ಅವಿಧೇಯತೆಯ) ಛಾಯೆಗಳು** 31
**ಪರಿಪೂರ್ಣ ನಿಷ್ಠೆಯನ್ನು (ವಿಧೇಯತೆಯನ್ನು) ಹೇಗೆ ಪಡೆಯುವದು?** 38
ಅನು: ಶ್ರೀ ಕಿಶೋರಕುಮಾರ ಕಾಸಾರ

**ಶ್ರೀ ಅರವಿಂದರ 'ಗೀತಾ ಪ್ರಬಂಧಗಳು'** 44
ಅನು: ಜಾಹ್ನವಿ

**ಪ್ರಜ್ಞಾನ, ವಿಜ್ಞಾನ ಮತ್ತು ವಿಜ್ಞಾನ ಘನಸತ್ತೆ** 54
ಅನು: ಶ್ರೀ ಪುಟ್ಟು ಕುಲಕರ್ಣಿ


---

**ಸಂಪಾದಕರ ಟಿಪ್ಪಣಿ:** ಆಧ್ಯಾತ್ಮಿಕ ವಿಕಾಸ ಎನ್ನುವದು ಒಂದು ಸುವ್ಯಾಪ್ತವಾದ ಹಾಗು ಸಂಕೀರ್ಣತೆಯಿಂದ ಕೂಡಿದ ವಿಷಯವಾಗಿದೆ. ಇದು ಹಲವು ಆಯಾಮಗಳನ್ನು ರೂಪಿಸುವ ರೀತಿಯಲ್ಲಿ ರೇಖಾತ್ಮಕವಾಗಿ ವಿಕಾಸಗೊಳ್ಳುತ್ತದೆ. ಆಧ್ಯಾತ್ಮಿಕ ವಿಕಾಸದಲ್ಲಿ ಯಾನ ಮಾಡುತ್ತಿರುವ ಯಾವುದೇ ವ್ಯಕ್ತಿಯು ತನಗೆ ಸೂಕ್ತವಾಗಿರುವ ಆಯಾಮದಲ್ಲಿ ತೊಡಗಿಸಿ–ಕೊಳ್ಳಬಹುದು. ಆದರೆ ಇಲ್ಲಿ ಮಹತ್ವಪೂರ್ಣವಾಗಿರುವ ವಿಷಯವೆಂದರೆ, ಆ ಯಾನದಲ್ಲಿ ಅವನು ಪ್ರಾಮಾಣಿಕನಾಗಿ, ವಿಧೇಯನಾಗಿ ನಿಷ್ಠೆಯಿಂದ ತೊಡಗಿಸಿಕೊಳ್ಳಬೇಕು. ಈ ರೀತಿಯ ತಾದಾತ್ಮ್ಯತೆಯಲ್ಲಿ ಸಮರ್ಪಣಾ ಮನೋಭಾವದಲ್ಲಿ ತೊಡಗಿಸಿಕೊಳ್ಳುವದೇ ಮುಖ್ಯ ಸಂಗತಿಯಾಗಿರುತ್ತದೆ. (ಎಐಎಮ್)

# ನಿಷ್ಠೆ (ವಿಧೇಯತೆ) ಎಂದರೇನು?

**– ಅನು: ಶ್ರೀಮತಿ ವಿಶಾಲಾಕ್ಷೀ ಸತ್ಯನ್, ಬೆಂಗಳೂರು**

**ಪ್ರಾಮಾಣಿಕತೆಯ ಶ್ರೇಣಿಗಳು**

ನಿಮ್ಮ ಶಕ್ತಿಗಳ ಪ್ರಭಾವವನ್ನು ಅಂಗೀಕರಿಸದೆ ದಿವ್ಯದ ಆಡಳಿತಕ್ಕೆ ಮಾತ್ರ ಒಳಗಾಗಿರುವದೇ ಪ್ರಾಮಾಣಿಕತೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/50**

ದಿವ್ಯ ಸತ್ಯವನ್ನು ಮಾತ್ರ ಅಪೇಕ್ಷಿಸುವದು, ದಿವ್ಯ ಮಾತೆಗೆ ಹೆಚ್ಚು ಹೆಚ್ಚು ಶರಣಾಗುವದು ಎಲ್ಲಾ ಸ್ವಂತ ಅಪೇಕ್ಷೆ ಮತ್ತು ಕೋರಿಕೆಗಳನ್ನು ನಿರಾಕರಿಸುವದು ಇವುಗಳೇ ಸಂಪೂರ್ಣ ಪ್ರಾಮಾಣಿಕತೆ ಎಂಬುದರ ಅರ್ಥ. ಆದರೆ ಒಂದೇ ಒಂದು ಅಭೀಪ್ಸೆಯನ್ನು ಮಾತ್ರ ಹೊಂದಿರಬೇಕು. ಅದೇನೆಂದರೆ ದಿವ್ಯಕ್ಕೆ ಜೀವನದಲ್ಲಿಯ ಪ್ರತಿಯೊಂದು ಕಾರ್ಯದ ಸಮರ್ಪಣೆ. ಇದನ್ನು ನಿಮಗೆ ನೀಡಲಾದ ಕಾರ್ಯವೆಂದು ಮಾಡಿ. ಅಹಂಕಾರವು ಮಧ್ಯೆ ಪ್ರವೇಶಿಸದಿರಲಿ. ಇದೇ ದಿವ್ಯ ಜೀವನದ ತಳಹದಿ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/51 – ಶ್ರೀ ಅರವಿಂದರು**

ಪ್ರಾಮಾಣಿಕವಾಗಿರಲು, ತಮ್ಮ ದಿವ್ಯದ ಅಭೀಪ್ಸೆಯಲ್ಲಿ ಸತ್ತೆಯ ಎಲ್ಲಾ ಭಾಗಗಳು ಒಗ್ಗೂಡಿರಬೇಕು – ಒಂದು ಭಾಗವು ಅಂಗೀಕರಿಸುವುದು ಮತ್ತಿತರವು ವಿರೋಧಿಸುವದು ಅಥವಾ ದಂಗೆ ಏಳುವದು ಎಂದಲ್ಲ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/65**

*ಪ್ರಶ್ನೆ: ಪ್ರಿಯ ಶ್ರೀಮಾತೆ, ನಿರ್ದಿಷ್ಟವಾಗಿ ಪ್ರಾಮಾಣಿಕತೆಯ ಅರ್ಥವೇನು?*

ಪ್ರಾಮಾಣಿಕತೆಯ ಹಲವಾರು ಶ್ರೇಣಿಗಳಿವೆ.

... ಮೊದಲನೆಯ ಶ್ರೇಣಿ, ನೋಡಿ, ಉದಾಹರಣೆಗೆ, ತಾವು ಬಹಳ ಶ್ರೇಷ್ಠ ಅಭೀಪ್ಸೆಯನ್ನು ಹೊಂದಿದ್ದು ಆಧ್ಯಾತ್ಮಿಕ ಜೀವನವನ್ನು ಬಯಸುವದಾಗಿ ಘೋಷಿಸಿದರೆನ್ನಿ. ಮತ್ತು ಅದೇ ಸಮಯದಲ್ಲಿ ... ಹೀಗೆ ... ಹೇಳುವದು ... ಅತ್ಯಂತ ಅನಾಗರೀಕವಾಗಿ ಆಧ್ಯಾತ್ಮಿಕ ಜೀವನಕ್ಕೆ ತದ್ವಿರುದ್ಧವಾದ ಕಾರ್ಯದಲ್ಲಿ

ತೊಡಗಿದರೆನ್ನಿ. ಇದು ನಿಜಕ್ಕೂ ಪ್ರಾಮಾಣಿಕತೆಯ ಒಂದು ಶ್ರೇಣಿ. ಅಥವಾ ಅಪ್ರಾಮಾಣಿಕತೆಯ ಒಂದು ಶ್ರೇಣಿ ಎಂದು ಸ್ಪಷ್ಟವಾಗಿ ಹೇಳಬಹುದು.

ಆದರೆ ಎರಡನೆಯ ಶ್ರೇಣಿ ಒಂದು ಇದೆ. ... ಅದು ಹೀಗಿದೆ: ಸತ್ತೆಯಲ್ಲಿಯ ಒಂದು ಭಾಗವು ಅಭೀಪ್ಸೆಯನ್ನು ಹೊಂದಿದೆ. ಅದು ದೋಷಗಳು ಮತ್ತು ಅಪರಿಪೂರ್ಣತೆಗಳಿಂದ ದೂರ ಸರಿಯಲು ಬಯಸುವದಾಗಿ ಹೇಳುತ್ತದೆ, ಹಾಗೆ ಚಿಂತಿಸುತ್ತದೆ ಮತ್ತು ಭಾವಿಸುತ್ತದೆ. ಅದೇ ಸಮಯದಲ್ಲಿ ಇತರ ಭಾಗಗಳು, ಈ ದೋಷಗಳು ಮತ್ತು ಅಪರಿಪೂರ್ಣತೆಗಳನ್ನು ಸೂಕ್ಷ್ಮವಾಗಿ ಮರೆಮಾಚುವವು. ಅವು ಹೊರಹೋಗಲು ಒತ್ತಾಯಿಸಿ ದೂರ ಸರಿಸುವದಿಲ್ಲ. ಇದು ಬಹಳ ಸಾಮಾನ್ಯ.

ಅಂತಿಮವಾಗಿ, ನಾವು ಬಹಳ ದೂರ ಬಂದು ವಿವರಣೆಯನ್ನು ಹೆಚ್ಚು ವಿಸ್ತರಿಸಿದರೆ, ದಿವ್ಯದತ್ತ ಕೇಂದ್ರೀಕೃತವಾದ ಅಭೀಪ್ಸೆಯನ್ನು ವಿರೋಧಿಸುವ ಒಂದೇ ಒಂದು ಭಾಗವಿದ್ದರೂ ನೀನು ಪರಿಪೂರ್ಣವಾಗಿ ಪ್ರಾಮಾಣಿಕನಾಗಿಲ್ಲ ಎಂದೇ ಹೇಳಬಹುದು. ಅಂದರೆ, ಪರಿಪೂರ್ಣ ಪ್ರಾಮಾಣಿಕತೆಯು ಅತ್ಯಂತ ವಿರಳ.

... ಯಾವಾಗ, ಯಾವುದೇ ಕ್ಷಣದಲ್ಲಿ, ಏನೇ ಆದರೂ, ದಿವ್ಯಕ್ಕೆ ಸತ್ತೆಯು ತನ್ನನ್ನು ತಾನು ನೀಡಿದ್ದರೆ ಮತ್ತು ದಿವ್ಯ ಸಂಕಲ್ಪವನ್ನು ಮಾತ್ರ ಅಪೇಕ್ಷಿಸಿದರೆ, ಆಗ, ಸತ್ತೆಯಲ್ಲಿ ಏನೇ ಸಂಭವಿಸುತ್ತಿದ್ದರೂ, ಎಲ್ಲಾ ಕ್ಷಣಗಳಲ್ಲೂ, ಯಾವಾಗಲೂ, “ನಿನ್ನ ಸಂಕಲ್ಪವು ನೆರವೇರುವಂತಾಗಲಿ” ಎಂದು ಇಡೀ ಸತ್ತೆಯು ಪರಿಪೂರ್ಣ ಸುಸಂಗತೆಯಲ್ಲಿ ದಿವ್ಯಕ್ಕೆ ಹೇಳಿ ಅದನ್ನೇ ದಿವ್ಯದಲ್ಲಿ ಸ್ವಪ್ರೇರಿತವಾಗಿ ಅನುಭವಿಸಿದರೆ ಮತ್ತು ಅದು ಪೂರ್ಣ ಹಾಗು ಸಮಗ್ರವಾಗಿದ್ದರೆ ಆಗ ನೀನು ಪ್ರಾಮಾಣಿಕ. ಆದರೆ ಇದು ದೃಢವಾಗುವವರೆಗೂ, ಅದು ಪ್ರಾಮಾಣಿಕತೆಯ ಮಿಶ್ರಣ ಮಾತ್ರ, ಹೆಚ್ಚು ಕಮ್ಮಿ ಮಿಶ್ರಿತವಾಗಿದೆ, ಎಲ್ಲಿಯವರೆಗೆಂದರೆ ಸಂಪೂರ್ಣವಾಗಿ ಅಪ್ರಾಮಾಣಿಕವಾದ ಶ್ರೇಣಿಯವರೆಗೂ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 6/397–98 – ಶ್ರೀಮಾತೆ**

ಬರೀ ಸತ್ಯಸಂಧತೆ ಮಾತ್ರವಲ್ಲ ಪ್ರಾಮಾಣಿಕತೆ: ನೀನು ಏನನ್ನು ಬಹಿರಂಗವಾಗಿ ತೋರ್ಪಡಿಸುವೆಯೋ ಅದನ್ನೇ ಅನುಭವಿಸುವೆ. ನಿನ್ನ ಸಂಕಲ್ಪದಲ್ಲಿ ಶ್ರದ್ಧಾಭರಿತ–ನಾಗಿರುವೆ. ದಿವ್ಯದ ಉಪಕರಣವಾಗುವ ಅಭೀಪ್ಸೆಯನ್ನು ಸಾಧಕನು ಹೊಂದಿರುವನು. ಆತನು ದಿವ್ಯದೊಂದಿಗೆ ಒಂದಾಗಲು ಬಯಸುವನು. ಹೀಗಾಗಿ ಆತನಲ್ಲಿಯ

ಪ್ರಾಮಾಣಿಕತೆಯ ಅರ್ಥವೇನೆಂದರೆ ನಿಜಕ್ಕೂ ಆತನು ತನ್ನ ಅಭೀಪ್ಸೆಯಲ್ಲಿ ಶ್ರದ್ಧೆಯನ್ನು ಹೊಂದಿರುವನು ಮತ್ತು ದಿವ್ಯದ ಹೊರತಾಗಿ ಇತರ ಎಲ್ಲಾ ಸಂಕಲ್ಪ ಮತ್ತು ಪ್ರೇರಣೆಗಳನ್ನು ತಿರಸ್ಕರಿಸುವನು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/50 – ಶ್ರೀ ಅರವಿಂದರು**

**ಮಾನಸಿಕ, ಭಾವನಾತ್ಮಕ ಮತ್ತು ಭೌತಿಕ ಪ್ರಾಮಾಣಿಕತೆ**

*ಪ್ರಶ್ನೆ: ಮಾನಸಿಕ ಪ್ರಾಮಾಣಿಕತೆ, ಭಾವನಾತ್ಮಕ ಪ್ರಾಮಾಣಿಕತೆ ಮತ್ತು ಭೌತಿಕ ಪ್ರಾಮಾಣಿಕತೆ ಎಂಬ ಭಿನ್ನತೆಗಳಿವೆಯೇ?*

ಹಾಗಿದ್ದರೆ ಆ ಪ್ರಾಮಾಣಿಕತೆಗಳ ನಡುವಿನ ವ್ಯತ್ಯಾಸವೇನು?

ಸಹಜವಾಗಿ, ಎಲ್ಲಾ ಕಡೆ ಪ್ರಾಮಾಣಿಕತೆಯ ತತ್ತ್ವವು ಒಂದೇ ಆಗಿದೆ; ಆದರೆ ಸತ್ತೆಯ ಅವಸ್ಥೆಗಳಿಗೆ ಅನುಗುಣವಾಗಿ ಅವುಗಳ ಕಾರ್ಯ ನಿರ್ವಹಣೆಯು ವಿಭಿನ್ನವಾಗಿದೆ.

... ಪರಿಪೂರ್ಣವಾಗಿ ಪ್ರಾಮಾಣಿಕವಾಗಿರಲು ಆದ್ಯತೆ, ಯಾವುದೇ ಅಪೇಕ್ಷೆ, ಯಾವುದೇ ಆಕರ್ಷಣೆ, ಯಾವುದೇ ದ್ವೇಷ, ಯಾವುದೇ ಸಹಾನುಭೂತಿ ಅಥವಾ ವಿಕರ್ಷಣೆ, ವೈರತ್ವ, ಬಾಂಧವ್ಯಗಳನ್ನು ಹೊಂದಿರಬಾರದು. ವಸ್ತುಗಳ ಸಂಪೂರ್ಣ ಸಮಗ್ರ ದರ್ಶನವನ್ನು ಹೊಂದಿರಬೇಕು. ಪ್ರತಿಯೊಂದು ಅದರದರ ಸ್ಥಾನದಲ್ಲಿ ಇರಬೇಕು. ಎಲ್ಲದರ ಕಡೆ ಒಂದೇ ಮನೋಭಾವನೆಯನ್ನು ಹೊಂದಿರಬೇಕು. ಅಂದರೆ ನೈಜ ದರ್ಶನದ ದೃಷ್ಟಿಕೋನ. ಈ ಕಾರ್ಯಕ್ಷಮತೆಯನ್ನು ಅರಿಯಲು ಮಾನವನು ಬಹಳ ಕಷ್ಟಪಡಬೇಕಾಗುವದು. ತನ್ನೊಳಗಿನ ಈ ಎಲ್ಲಾ ವೈರುಧ್ಯಗಳಿಂದ ಹೊರಬರಲು ಮಾನವನು ತನ್ನನ್ನು ತಾನು ದಿವ್ಯತ್ವಕ್ಕೆ ಏರಿಸಿಕೊಳ್ಳಬೇಕೆಂದು ನಿರ್ಧರಿಸಲೇಬೇಕು. ಆಗ ಮಾತ್ರ ಮಾನವನು ಇವುಗಳಿಂದ ಸ್ವತಂತ್ರನಾಗುವನು. ಜೊತೆಗೆ, ತನ್ನೊಳಗೆ ಆತನು ಇವುಗಳನ್ನು ಹೊಂದಿರುವವರೆಗೆ ಪರಿಪೂರ್ಣವಾಗಿ ಪ್ರಾಮಾಣಿಕನಾಗಲು ಸಾಧ್ಯವಿಲ್ಲ. ಹೀಗಾಗಿ ತನ್ನಂತೆ ತಾನೇ, ಮಾನಸಿಕ, ಭಾವನಾತ್ಮಕ ಮತ್ತು ಭೌತಿಕ ಕಾರ್ಯಗಳು ಸಹ ತಪ್ಪು ದಾರಿ ಹಿಡಿಯುವವು. ನಾನು ಭೌತಿಕವನ್ನು ಒತ್ತಿ ಹೇಳುತ್ತಿದ್ದೇನೆ. ಏಕೆಂದರೆ ಇಂದ್ರಿಯಗಳು ಸಹ ವಕ್ರತೆಯನ್ನು ಹೊಂದುವವು. ಆದ್ಯತೆಯನ್ನು ಹೊಂದಿರುವ ಮಾನವನಿಗೆ ಸಮರ್ಪಕವಾದ ದೃಷ್ಟಿಯಿರುವದಿಲ್ಲ, ಆಲಿಸುವಿಕೆಯಿರುವದಿಲ್ಲ, ರುಚಿಯಿರುವದಿಲ್ಲ ಮತ್ತು ಭಾವನೆಯೂ ಸಹ ಇರುವದಿಲ್ಲ. ಕೆಲವು ವಸ್ತುಗಳು

ನಿನಗೆ ಪ್ರಿಯವಾಗಿದ್ದು, ಇತರವು ಅಪ್ರಿಯವಾಗಿದ್ದರೆ, ಕೆಲವು ನಿರ್ದಿಷ್ಟ ವಸ್ತುಗಳಿಂದ ನೀನು ಆಕರ್ಷಿತನಾಗುತ್ತಿದ್ದರೆ ಮತ್ತು ಕೆಲವನ್ನು ದ್ವೇಷಿಸುತ್ತಿದ್ದರೆ ನೀನು ವಸ್ತುಗಳನ್ನು ಅವುಗಳ ನೈಜ ಭಾವದಲ್ಲಿ ನೋಡಲಾರೆ. ಆದರೆ ನಿನ್ನ ಪ್ರತಿಕ್ರಿಯೆ, ನಿನ್ನ ಆದ್ಯತೆ ಅಥವಾ ನಿನ್ನ ವಿಕರ್ಷಣೆಯ ಮೂಲಕ ಅವುಗಳನ್ನು ನೋಡುವೆ. ಸಂವೇದನೆಗಳು, ಭಾವನೆಗಳು ಮತ್ತು ಚಿಂತನೆಗಳ ರೀತಿಯಲ್ಲಿಯೇ ದೋಷಪೂರಿತವಾಗುವವು ಇಂದ್ರಿಯಗಳು. ಆದುದರಿಂದ, ನೀನು ಏನನ್ನು ನೋಡುತ್ತಿರುವೆ, ಏನನ್ನು ಅನುಭವಿಸುತ್ತಿರುವೆ, ಯಾವ ಭಾವನೆಗಳನ್ನು ಹೊಂದಿರುವೆ ಮತ್ತು ಏನು ಯೋಚಿಸುತ್ತಿರುವೆ ಎಂಬುದರ ಬಗ್ಗೆ ಸ್ಪಷ್ಟವಾದ ಅರಿವನ್ನು ಹೊಂದಲು ನೀನು ವಸ್ತುಗಳಿಂದ ಸಂಪೂರ್ಣವಾಗಿ ಬೇರ್ಪಟ್ಟಿರಬೇಕು. ಅವುಗಳಿಗೆ ಅಂಟಿಕೊಂಡಿರಬಾರದು; ನಿಜಕ್ಕೂ ಇದು ಸುಲಭವಾದ ಕೆಲಸವೇನು ಅಲ್ಲ. ಆದರೆ ಹಾಗೆ ಆಗುವವರೆಗೂ ನಿನ್ನ ಗ್ರಹಿಕೆಯು ಪೂರಾ ಸತ್ಯವಾಗಿ ಇರುವದಿಲ್ಲ. ಆದುದರಿಂದ ಅದು ಪ್ರಾಮಾಣಿಕವಲ್ಲ.

... ಇನ್ನೂ ಹೆಚ್ಚು ಸೂಕ್ಷ್ಮವಾದ ಇತರವು ಇವೆ. ಅವುಗಳ ಬಗ್ಗೆ ವಿವೇಚಿಸುವದು ಕಷ್ಟವೆಂದೇ ಹೇಳಬಹುದು. ಉದಾಹರಣೆಗೆ ನೀನು ಸಹಾನುಭೂತಿ ಮತ್ತು ದ್ವೇಷಗಳನ್ನು ಹೊಂದಿರುವವರೆಗೂ, ಸಹಜವಾಗಿ ಮತ್ತು ಸ್ವಾಭಾವಿಕವಾಗಿಯೋ ಎಂಬಂತೆ ಕರುಣಾಪೂರಿತವಾಗಿರುವದರ ಬಗ್ಗೆ ನೀನು ಅನುಕೂಲಕರವಾದ ಗ್ರಹಿಕೆಯನ್ನು ಹೊಂದುವೆ ಮತ್ತು ನೀನು ದ್ವೇಷಿಸುವದರ ಬಗ್ಗೆ ಅನಾನುಕೂಲಕರವಾದ ಗ್ರಹಿಕೆಯನ್ನು ಹೊಂದುವೆ ಮತ್ತೂ ಅಲ್ಲಿಯೂ ಕೂಡ ಪ್ರಾಮಾಣಿಕತೆಯ ಅಭಾವವು ಎದ್ದುಕಾಣುವದು. ಆದರೇನು, ನಿನ್ನನ್ನು ನೀನು ವಂಚಿಸಬಹುದು ಮತ್ತು ನೀನು ಅಪ್ರಾಮಾಣಿಕನಾಗಿರುವೆ ಎಂಬುದನ್ನು ಗ್ರಹಿಸದಿರಬಹುದು. ಹಾಗಾದಾಗ, ಮಾನಸಿಕ ಅಪ್ರಾಮಾಣಿಕತೆಯ ಸಹಯೋಗವೂ ಸಹ ಸಿಗುವದು. ಸತ್ತೆಯ ಭಾಗಗಳು ಮತ್ತು ಸತ್ತೆಯ ಅವಸ್ಥೆಗೆ ಅನುಗುಣವಾಗಿ ಅಲ್ಪ ಸ್ವಲ್ಪ ವಿಭಿನ್ನವಾದ ಅಪ್ರಾಮಾಣಿಕತೆಗಳು ಇವೆ ಎಂಬುದಂತೂ ಸತ್ಯ. ಆದರೆ, ಈ ಅಪ್ರಾಮಾಣಿಕತೆಗಳ ಮೂಲವಂತೂ ಯಾವಾಗಲೂ ಒಂದೇ ತರದ ಚಲನೆಯಾಗಿದೆ. ಅದು ಯಾವಾಗಲೂ ಮೇಲೇಳುವದು ಅಪೇಕ್ಷೆ ಮತ್ತು ಸ್ವಾರ್ಥದ ಅರಸುವಿಕೆಗಳಿಂದ ಅಹಂಕಾರದಿಂದ, ಅಪೇಕ್ಷೆಯಿಂದ ಉಂಟಾಗುವ ಎಲ್ಲಾ ವಿರೂಪಗಳು ಮತ್ತು ಅಹಂಕಾರದಿಂದ ಉಂಟಾಗುವ ಎಲ್ಲಾ ಪರಿಮಿತಿಗಳ ಒಗ್ಗೂಡುವಿಕೆಯಿಂದ.

ನಿಜಕ್ಕೂ, ಅಹಂಕಾರವು ಇರುವವರೆಗೂ ಯಾರಾದರೂ ಪ್ರಾಮಾಣಿಕನಾಗಲು ಶ್ರಮಿಸುತ್ತಿದ್ದರೂ ಆತನು ಪರಿಪೂರ್ಣವಾಗಿ ಪ್ರಾಮಾಣಿಕ ಎಂದು ಹೇಳಲಾಗುವದಿಲ್ಲ. ನೀನು ಅಹಂಕಾರವನ್ನು ದಾಟಿ ಮುಂದೆ ಹೋಗಬೇಕು. ದಿವ್ಯ ಸಂಕಲ್ಪಕ್ಕೆ ನಿನ್ನನ್ನು ನೀನು ಸಂಪೂರ್ಣವಾಗಿ ನೀಡಬೇಕು. ಯಾವುದೇ ಪರಿಮಿತಿಯಿಲ್ಲದೆ ಮತ್ತು ಯಾವುದೇ ಲೆಕ್ಕಾಚಾರವಿಲ್ಲದೆ ಶರಣಾಗಬೇಕು, ಆಗ ನೀನು ಪರಿಪೂರ್ಣವಾಗಿ ಪ್ರಾಮಾಣಿಕನಾಗುವೆ. ಆದರೆ ಅದಕ್ಕಿಂತ ಮೊದಲೇ ಪರಿಪೂರ್ಣವಾಗಿ ಪ್ರಾಮಾಣಿಕನಾಗಲು ಸಾಧ್ಯವಿಲ್ಲ.

... ಜೊತೆಗೆ ಪ್ರಾಮಾಣಿಕವಾಗಿರುವದರಲ್ಲಿ ಅತ್ಯಧಿಕ ಸಂತಸವಿದೆ. ಪ್ರತಿಯೊಂದು ಪ್ರಾಮಾಣಿಕ ಕ್ರಿಯೆಯೂ ತನ್ನೊಳಗೆ ತನ್ನದೇ ಆದ ಬಹುಮಾನವನ್ನು ಹೊಂದಿರುವದು: ಪರಿಶುದ್ಧತೆ ಮತ್ತು ಮೇಲೇರುತ್ತಿರುವ ಅನುಭವ; ಜೊತೆಗೆ ಸುಳ್ಳಿನ ಒಂದೇ ಒಂದು ಸಣ್ಣ ಅಂಶವನ್ನು ತಿರಸ್ಕರಿಸಿದರೂ ಸ್ವಾತಂತ್ರ್ಯವನ್ನು ಪಡೆದ ಅನುಭವವಾಗುವದು.

ಪ್ರಾಮಾಣಿಕತೆಯೇ ಸಂರಕ್ಷಕ, ರಕ್ಷಣೆ, ಮಾರ್ಗದರ್ಶಿ ಮತ್ತು ಅಂತಿಮವಾಗಿ ಪರಿವರ್ತನೆಗೊಳಿಸುವ ಶಕ್ತಿ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 8/397–400 – ಶ್ರೀಮಾತೆ**

## ಪ್ರಾಮಾಣಿಕತೆ ಮತ್ತು ಯೋಗ

*ಪ್ರಾಮಾಣಿಕವಾಗಿರುವದೇ ಪ್ರಶ್ನೆ. ನೀನು ಪ್ರಾಮಾಣಿಕವಾಗಿರದಿದ್ದರೆ, ಯೋಗವನ್ನು ಪ್ರಾರಂಭಿಸಬೇಡ.*

ಬಹುಶಃ, ಎಲ್ಲದಕಿಂತಲೂ ಪ್ರಾಮಾಣಿಕತೆಯೇ ಅತ್ಯಂತ ಕ್ಲಿಷ್ಟಕರವಾದುದು. ಆದರೆ ಅದೇ ಅತ್ಯಂತ ಪರಿಣಾಮಕಾರಿಯಾದುದು ಸಹ.

ನೀನು ಪರಿಪೂರ್ಣ ಪ್ರಾಮಾಣಿಕತೆಯನ್ನು ಹೊಂದಿದ್ದರೆ, ನಿನ್ನ ವಿಜಯವು ನಿಶ್ಚಿತ. ಅದು ಅತ್ಯಂತ ಕಷ್ಟಕರವೆಂದೇ ಹೇಳಬಹುದು. ಪ್ರಾಮಾಣಿಕತೆಯ ಆಂತರ್ಯವೇನೆಂದರೆ, ದಿವ್ಯಕ್ಕೆ ತಾನು ಸೇರಿರಬೇಕು ಎಂಬ ಒಂದೇ ಒಂದು ಸಂಕಲ್ಪ, ದಿವ್ಯಕ್ಕಾಗಿಯೇ ತಾನು ಬದುಕಬೇಕು, ದಿವ್ಯದ ಸಂಕಲ್ಪವೇ ನನ್ನ ಸಂಕಲ್ಪವಾಗಿರಬೇಕು, ದಿವ್ಯದ ಸಂಕಲ್ಪವನ್ನು ಮಾತ್ರ ವ್ಯಕ್ತಪಡಿಸಬೇಕು. ದಿವ್ಯವು ಮಾತ್ರವೇ ನನ್ನ ಶಕ್ತಿಯ ಮೂಲವಾಗಿರಬೇಕು ಎಂಬ ಗುರಿಯನ್ನು ಸತ್ತೆಯ ಎಲ್ಲಾ ಅಂಶಗಳು, ಎಲ್ಲಾ ಚಲನೆಗಳು (ಬಾಹ್ಯವಾಗಲಿ ಅಥವಾ ಆಂತರಿಕವಾದವಾಗಲಿ), ಸತ್ತೆಯ ಎಲ್ಲಾ ಭಾಗಗಳು, ಅವೆಲ್ಲವೂ ಹೊಂದಿರಬೇಕು.

ನಿನ್ನ ಪ್ರಾಮಾಣಿಕತೆಯ ತೀವ್ರತೆಯನ್ನು ಹೆಚ್ಚು ಹೆಚ್ಚು ಸಮರ್ಪಕಗೊಳಿಸದೆ ಇರುವ ಒಂದೇ ಒಂದು ಕ್ಷಣ, ಒಂದೇ ಒಂದು ಗಂಟೆ, ಒಂದೇ ಒಂದು ದಿನವೂ ಇಲ್ಲದಂತೆ ಮಾಡಬೇಕು – ದಿವ್ಯವನ್ನು ಸಂಪೂರ್ಣವಾಗಿ ವಂಚಿಸದೆ ಇರುವಂತೆ ಮಾಡಬೇಕು. ಮೊದಲನೆಯ ಕಾರ್ಯವೇನೆಂದರೆ ತನ್ನನ್ನು ತಾನು ವಂಚಿಸದೆ ಇರುವದು. ದಿವ್ಯವನ್ನು ವಂಚಿಸುವದು ಅಸಾಧ್ಯ ಎಂಬ ವಿಷಯ ಎಲ್ಲರಿಗೂ ಗೊತ್ತಿದೆ; ದಿವ್ಯವನ್ನು ಅತ್ಯಂತ ಬುದ್ಧಿಶಾಲಿಯಾದ ಅಸುರನೂ ಸಹ ವಂಚಿಸಲಾರ. ಆದರೆ ಅದನ್ನು ಅರ್ಥಮಾಡಿಕೊಂಡಿದ್ದರೂ ಸಹ, ಅದರ ಪರಿವೆಯೇ ಇಲ್ಲದೇ ನಿನ್ನನ್ನೇ ನೀನು ವಂಚಿಸಲು ಪ್ರಯತ್ನಿಸುವೆ. ಈ ಕಾರ್ಯವು ಸಹಜವಾಗಿ ಮತ್ತು ತನ್ನಂತೆ ತಾನೇ ಆಗಿಹೋಗುವದು. ನೀನು ಮಾಡುವದೆಲ್ಲದಕ್ಕೂ, ನಿನ್ನ ನುಡಿಗಳಿಗೆ, ನಿನ್ನ ಕ್ರಿಯೆಗಳಿಗೆ ನೀನು ಯಾವಾಗಲೂ ಅನುಕೂಲಕರವಾದ ವಿವರಣೆಯನ್ನು ನೀಡುವೆ. ಪ್ರಾರಂಭದಲ್ಲಿ ಅದೇ ಆಗುವದು. "ಅದು ಇನ್ನೊಬ್ಬರ ದೋಷ" ಎಂದು ಜಗಳವಾಡಿಕೊಂಡು ಹೇಳುವ ಸ್ಪಷ್ಟ ವಿಷಯಗಳ ಬಗ್ಗೆ ನಾನು ಇಲ್ಲಿ ಮಾತನಾಡುತ್ತಿಲ್ಲ. ದಿನನಿತ್ಯದ ಬಹಳ ಚಿಕ್ಕ ಚಿಕ್ಕ ವಿಷಯಗಳ ಬಗ್ಗೆ ಮಾತನಾಡುತ್ತಿರುವೆ.

ದ್ವಾರದ ಬಳಿ ಎಡವಿ ಗಾಯಮಾಡಿಕೊಂಡು ದ್ವಾರವನ್ನು ಒದ್ದ ಮಗುವೊಂದರ ಬಗ್ಗೆಯೂ ನನಗೆ ಗೊತ್ತು! ಇದು ಅದೇ ತರಹ. ಯಾವಾಗಲೂ ದೋಷಪೂರಿತ–ವಾಗಿರುವದು ಮತ್ತೊಬ್ಬನೇ. ನೀನು ಮಗುವಿನ ಅವಸ್ಥೆಯನ್ನು ದಾಟಿ ಹಿರಿಯನಾಗಿದ್ದರೂ ಸಹ, ನೀನು ಸ್ವಲ್ಪ ಬುದ್ಧಿವಂತನಾಗಿದ್ದರೂ, ಅತ್ಯಂತ ಕೆಳಮಟ್ಟದಲ್ಲಿ ಕ್ಷಮಾ ಯಾಚನೆ ಮಾಡುವೆ. ಅಂದರೆ "ಆತನು ಅದನ್ನು ಮಾಡದೆ ಇದ್ದಿದ್ದರೆ ನಾನು ಇದನ್ನು ಮಾಡುತ್ತಿರಲಿಲ್ಲ" ಎಂದು ಹೇಳುವೆ. ಆದರೆ ಅದು ಬೇರೊಂದು ರೀತಿಯಲ್ಲಿ ಇರಬೇಕಾಗಿತ್ತು.

**ಪ್ರಾಮಾಣಿಕವಾಗಿ ಇರುವದು**

ನಾನು ಇದನ್ನೇ ಪ್ರಾಮಾಣಿಕತೆ ಎಂದು ಕರೆಯುವದು. ನೀನು ಯಾರ ಜೊತೆಯಲ್ಲಾದರೂ ಇರುವಾಗ, ಪ್ರಾಮಾಣಿಕವಾಗಿದ್ದರೆ, ಆತನು ಪ್ರಾಮಾಣಿಕ–ವಾಗಿಲ್ಲದಿದ್ದರೂ ಸಹ, ನೀನು ತತ್‌ಕ್ಷಣದಲ್ಲಿ ಪ್ರಾಮಾಣಿಕವಾಗಿ ಪ್ರತಿಕ್ರಿಯಿಸಬೇಕು. ಅತ್ಯಂತ ಸಾಮಾನ್ಯ ಉದಾಹರಣೆಯಾಗಿ ಯಾರಾದರೂ ಕೋಪಗೊಂಡಿರುವವನನ್ನೇ ಅರಿಸಿಕೊಳ್ಳೋಣ. ಪ್ರತಿಕ್ರಿಯೆಯಾಗಿ ನೋವಾಗುವಂತಹುದೇನನ್ನೂ ಹೇಳದೆ, ನೀನು ಸುಮ್ಮನಿದ್ದುಬಿಡು. ಶಾಂತವಾಗಿ ಮೌನವಾಗಿರು. ಕೋಪವೆಂಬ ಸೋಂಕು ನಿನಗೆ

ಅಂಟಿಕೊಳ್ಳುವದಿಲ್ಲ. ಇದು ಸುಲಭವೇ ಎಂದು ನೀನೇ ನಿನ್ನನ್ನು ಪರೀಕ್ಷಿಸಿಕೊಳ್ಳಬೇಕು. ಇದು ಬಹಳ ಸಣ್ಣ ವಿಷಯ, ನೀನು ಪ್ರಾಮಾಣಿಕವಾಗಿರುವೆಯಾ ಎಂದು ಅರಿಯಲು ಇದು ಬಹಳ ಸಣ್ಣ ಪ್ರಾರಂಭ. ನಾನು ಪ್ರತಿಯೊಂದು ಸೋಂಕನ್ನು ಅಂಟಿಸಿಕೊಳ್ಳುವವರ ಬಗ್ಗೆ ಹೇಳುತ್ತಿಲ್ಲ, ಅಪಹಾಸ್ಯ ಮಾಡುವವರ ಬಗ್ಗೆಯೂ ಹೇಳುತ್ತಿಲ್ಲ, ಇತರರಂತೆಯೇ ಕೆಟ್ಟದಾಗಿ ವರ್ತಿಸುವವರ ಬಗ್ಗೆಯೂ ಹೇಳುತ್ತಿಲ್ಲ.

ನಾನು ನಿನಗೆ ಹೇಳುತ್ತಿರುವೆ: ನಿನ್ನ ಸಾಮಾನ್ಯ ವರ್ತನೆಯಲ್ಲಿ ನೀನು ಪ್ರಾಮಾಣಿಕನಾಗಿರಲು ಪ್ರಯತ್ನಿಸುತ್ತಿದ್ದರೂ ನಿನ್ನನ್ನು ನೀನು ಸೂಕ್ಷ್ಮವಾಗಿ ಗಮನಿಸಿದಾಗ, ನಿನ್ನಲ್ಲಿ ನೂರಾರು ಅಪ್ರಾಮಾಣಿಕತೆಗಳು ಇರುವದು ನಿನಗೆ ಗೋಚರಿಸುವದು. ಅದು ಎಷ್ಟು ಕಷ್ಟದ ಸಂಗತಿ ಎಂಬುದು ನಿನಗೆ ತಿಳಿಯುವದು.

ನಾನು ನಿನಗೆ ಹೇಳುತ್ತಿರುವೆ: ನಿನ್ನ ಸತ್ತೆಯ ಎಲ್ಲಾ ಅಂಶಗಳಲ್ಲಿ ನೀನು ಪ್ರಾಮಾಣಿಕನಾಗಿದ್ದರೆ ಅಂದರೆ ನಿನ್ನ ದೇಹದ ಎಲ್ಲಾ ಕಣಗಳು ಪ್ರಾಮಾಣಿಕವಾಗಿದ್ದರೆ ಮತ್ತು ನಿನ್ನ ಇಡೀ ಸತ್ತೆಯು ಸಮಗ್ರವಾಗಿ ದಿವ್ಯತೆಯನ್ನು ಅಪೇಕ್ಷಿಸಿದರೆ, ನೀನು ನಿಜವಾಗಿ ವಿಜಯಿಯಾಗುವೆ ಎಂದು ಘೋಷಿಸಬಹುದು. ನಾನು ಅದನ್ನೇ ಪ್ರಾಮಾಣಿಕತೆ ಎಂದು ಕರೆಯುವದು.

ಎದ್ದುಕಾಣುವ ವಿಷಯಗಳಾದ ನಿನ್ನ ಪ್ರೇರೇಪಣೆಗಳನ್ನು ಅನುಸರಿಸುವಿಕೆ, ನಿನ್ನ ಬುದ್ಧಿ ಚಾಂಚಲ್ಯಗಳ ಬಗ್ಗೆ ನಾನು ಮಾತನಾಡುತ್ತಿಲ್ಲ. ಈ ಪ್ರೇರೇಪಣೆಗಳಿಗೆ ಒಳಗಾಗಿ "ನಾನು ಈಗ ನನಗೆ ಸೇರಿದವನಾಗಿಲ್ಲ, ನಾನು ದಿವ್ಯಕ್ಕೆ ಸೇರಿದವನು; ದಿವ್ಯವೇ ನನ್ನಲ್ಲಿ ಈಗ ಎಲ್ಲಾ ಕೆಲಸಗಳನ್ನು ನೆರವೇರಿಸುತ್ತಿರುವದು. ನನ್ನಲ್ಲಿ ಕ್ರಿಯಾಶೀಲವಾಗಿರುವದು" ಎಂದು ಹೇಳುವದು ನಿಜಕ್ಕೂ ಅಪ್ರಬುದ್ಧತೆ. ನಾನು ಸ್ವಲ್ಪ ಹೆಚ್ಚು ಸುಧಾರಿಸಿರುವ ಜನರ ಬಗ್ಗೆ ಮಾತನಾಡುತ್ತಿರುವೆ; ಸ್ವಲ್ಪ ಪಕ್ವತೆಯನ್ನು ಹೊಂದಿರುವವರು, ತಮ್ಮ ಅಪೇಕ್ಷೆಗಳನ್ನು ಸುಂದರವಾಗಿ ಆಚ್ಛಾದಿಸಿರುವವರು.

ದಿನನಿತ್ಯದ ಸಹಜ ಪ್ರಕ್ರಿಯೆಗಳಲ್ಲಿ, ಎಷ್ಟು ಚಿಂತನೆಗಳು, ಸಂವೇದನೆಗಳು, ನಡವಳಿಕೆಗಳು ಅಭೀಪ್ಸೆಯಲ್ಲಿ ನೇರವಾಗಿ ದಿವ್ಯದ ಕಡೆ ತಿರುಗಿದ್ದವು? ನಿಜಕ್ಕೂ ಎಷ್ಟು? ಇಡೀ ದಿನದಲ್ಲಿ ಒಂದೇ ಒಂದಾಗಿದ್ದರೂ ನೀನು ಅದನ್ನು ಕೆಂಪು ಅಕ್ಷರಗಳಲ್ಲಿ ಗುರುತಿಸಬಹುದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 5/5–7** **– ಶ್ರೀಮಾತೆ**

"ನೀನು ಪ್ರಾಮಾಣಿಕನಾಗಿದ್ದರೆ, ನೀನು ಖಂಡಿತವಾಗಿ ವಿಜಯಿಯಾಗುವೆ" ಎಂದು ನಾನು ಹೇಳಿದಾಗ ಅದರ ಅರ್ಥ "ಸತ್ಯವಾದ ಪ್ರಾಮಾಣಿಕತೆ": ಅರ್ಪಣೆಯ ರೀತಿಯಲ್ಲಿ ನಿರಂತರವಾಗಿ ಉರಿಯುತ್ತಿರುವ ಸತ್ಯ ಜ್ವಾಲೆ. ದೈವಕ್ಕಾಗಿ ಮತ್ತು ದೈವದಿಂದಲೇ ಅಸ್ತಿತ್ವದಲ್ಲಿರುವಿಕೆಯ ಆ ತೀವ್ರವಾದ ಆನಂದ ಮತ್ತು ಆತನಿಲ್ಲದೆ ಯಾವುದೂ ಅಸ್ತಿತ್ವದಲ್ಲಿ ಇರುವದಿಲ್ಲ. ಜೊತೆಗೆ ಜೀವನಕ್ಕೆ ಯಾವುದೇ ತರಹದ ಅರ್ಥವೂ ಇರುವದಿಲ್ಲ, ಯಾವುದಕ್ಕೂ ಯಾವುದೇ ಗುರಿ ಇಲ್ಲ, ಯಾವುದಕ್ಕೂ ಯಾವುದೇ ವಿಧದ ಮೌಲ್ಯವಿಲ್ಲ, ಯಾವುದರಲ್ಲೂ ಆಸಕ್ತಿ ಇರುವದಿಲ್ಲ. ನಾವು ದಿವ್ಯವೆಂದು ಕರೆಯುವ, (ಯಾವುದಾದರೂ ಒಂದು ಪದವನ್ನು ಉಪಯೋಗಿಸಬೇಕು. ಆದುದರಿಂದ ದಿವ್ಯವೆನ್ನಲಾಗಿದೆ) ಈ ವಿಶ್ವದ ಅಸ್ತಿತ್ವಕ್ಕೆ ಒಂದೇ ಒಂದು ಕಾರಣವಾದ ಪರಮ ಸತ್ಯದ ಕಡೆ ತೆರೆದುಕೊಳ್ಳುವಿಕೆ, ಈ ಕಡೆ, ಈ ಅಭೀಪ್ಸೆ ಅದಾಗಿರಲೇಬೇಕು. ಅದರ ಹೊರತು ಮತ್ತೇನು ಇಲ್ಲ. ಅದನ್ನು ತೆಗೆದರೆ ಎಲ್ಲವೂ ಕಾಣದಾಗುವದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 5/5–7 – ಶ್ರೀಮಾತೆ**

## ನಿಷ್ಠೆಯು (ವಿಧೇಯತೆಯು) ಸಾಧನೆಗೆ ಸಹಕಾರಿ

### ಆಧ್ಯಾತ್ಮಿಕ ಜೀವನವನ್ನು ಪಡೆಯಲು ಮೂಲಭೂತ ಸದ್ಗುಣ

*ಪ್ರಶ್ನೆ: ಆಧ್ಯಾತ್ಮಿಕ ಜೀವನಕ್ಕೆ ಸಿದ್ಧವಾಗಲು ವೃದ್ಧಿಗೊಳಿಸಬೇಕಾಗಿರುವ ಮೂಲಭೂತ ಸದ್ಗುಣವು ಯಾವುದು?*

ನಾನು ಇದನ್ನು ಅನೇಕ ಸಲ ಹೇಳಿರುವೆ. ಆದರೆ ಅದನ್ನು ಪುನರಾವರ್ತಿಸಲು ಇದೊಂದು ಒಳ್ಳೆಯ ಅವಕಾಶ: ಅದೇ ಪ್ರಾಮಾಣಿಕತೆ.

ಸಂಪೂರ್ಣ ಮತ್ತು ಸಮಗ್ರವಾಗಬೇಕಾಗಿರುವ ಒಂದು ಪ್ರಾಮಾಣಿಕತೆ. ಏಕೆಂದರೆ ಆಧ್ಯಾತ್ಮಿಕ ಪಥದಲ್ಲಿ ಪ್ರಾಮಾಣಿಕತೆ ಮಾತ್ರವೇ ನಿನ್ನ ರಕ್ಷಕ. ನೀನು ಪ್ರಾಮಾಣಿಕ–ವಾಗಿರದಿದ್ದರೆ, ಮುಂದಿನ ಹೆಜ್ಜೆಯಲ್ಲಿಯೇ ನೀನು ಕೆಳಗೆ ಬೀಳುವೆ ಮತ್ತು ನಿನ್ನ ತಲೆಯು ಚೂರು ಚೂರಾಗುವುದು. ಎಲ್ಲಾ ವಿಧದ ಶಕ್ತಿಗಳು, ಸಂಕಲ್ಪಗಳು, ಪ್ರಭಾವಗಳು ಮತ್ತು ಅಂಶಗಳು ಇರುವವು. ಈ ಪ್ರಾಮಾಣಿಕತೆಯಲ್ಲಿಯ ಅತ್ಯಂತ ಚಿಕ್ಕ ಬಿರುಕನ್ನು ಅವು ಹುಡುಕುತ್ತಿರುವವು ಮತ್ತು ಬಿರುಕು ಕಂಡೊಡನೆ ಅದರ ಮೂಲಕ ಒಳಗೆ

ನುಗ್ಗಿ ನಿನ್ನನ್ನು ಗೊಂದಲದೊಳಗೆ ಎಸೆಯುವವು.

ಆದುದರಿಂದ, ಏನನ್ನಾದರೂ ಮಾಡುವ ಮುನ್ನ, ಏನಾದರೂ ಪ್ರಾರಂಭಿಸುವ ಮೊದಲು, ಪ್ರಯತ್ನಿಸುವ ಮೊದಲು, ನೀನು ಸಾಧ್ಯವಾದಷ್ಟು ಪ್ರಾಮಾಣಿಕವಾಗಿರುವದಷ್ಟೇ ಅಲ್ಲ. ಆದರೆ ಇನ್ನೂ ಹೆಚ್ಚು ಪ್ರಾಮಾಣಿಕನಾಗುವ ಅಭೀಪ್ಸೆಯನ್ನು ಹೊಂದಿರು.

ಏಕೆಂದರೆ ಅದು ಮಾತ್ರವೇ ನಿನ್ನ ರಕ್ಷಕನಾಗಿರುವದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 8/247–248**

*ಪ್ರಶ್ನೆ: ಶ್ರೀ ಅರೊಬಿಂದೋರವರ ಶತಮಾನೋತ್ಸವಕ್ಕೆ ನಾನು ವೈಯಕ್ತಿಕವಾಗಿ ನೀಡಬಹುದಾದ ಅತ್ಯುತ್ತಮ ಅರ್ಪಣೆ ಯಾವುದು?*

ಸಂಪೂರ್ಣ ಪ್ರಾಮಾಣಿಕತೆಯೊಂದಿಗೆ ನಿನ್ನ ಮನಸ್ಸನ್ನು ಅವರಿಗೆ ಅರ್ಪಿಸು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 12/205 – ಶ್ರೀಮಾತೆ**

ಯಾವುದೇ ವಿಧಾನವನ್ನು ಪ್ರಾಮಾಣಿಕವಾಗಿ ನಿರಂತರವಾಗಿ ಅನುಸರಿಸಿದರೆ ಅದು ತೆರೆಯುವಿಕೆಯನ್ನು ತರುವುದರ ಮೂಲಕ ಪರಿಸಮಾಪ್ತವಾಗುವದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 31/729**

ಅನುಗ್ರಹ ಮತ್ತು ರಕ್ಷಣೆಯು ನಿನ್ನೊಂದಿಗೆ ಯಾವಾಗಲೂ ಇರುವದು. ಯಾವುದೇ ಆಂತರಿಕ ಅಥವಾ ಬಾಹ್ಯ ಕಷ್ಟ ಅಥವಾ ತೊಂದರೆಯಲ್ಲಿ ಸಿಲುಕಿರುವಾಗ ಅದು ನಿನ್ನನ್ನು ತುಳಿಯಲು ಅವಕಾಶ ನೀಡಬೇಡ; ಕಾಪಾಡುವ ದಿವ್ಯ ಶಕ್ತಿಯಲ್ಲಿ ಆಶ್ರಯವನ್ನು ಪಡೆದುಕೋ.

ನೀನು ಶ್ರದ್ಧೆ ಮತ್ತು ಪ್ರಾಮಾಣಿಕತೆಗಳಿಂದೊಡಗೂಡಿ ಅದನ್ನು ಯಾವಾಗಲೂ ಮಾಡಿದರೆ, ಎಲ್ಲಾ ಬಾಹ್ಯ ಘರ್ಷಣೆಗಳಿದ್ದರೂ ಸಹ ನಿನ್ನೊಳಗೆ ಯಾವಾಗಲೂ ಶಾಂತಿ ಮತ್ತು ಸಮಾಧಾನವನ್ನು ಹೊಂದಿರುವದೇನೋ ಒಂದು ತೆರೆದುಕೊಳ್ಳುತ್ತಿರುವದನ್ನು ನೋಡುವೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 31/724–725**

## ದಿವ್ಯತೆಯ ಅನುಗ್ರಹ ಮತ್ತು ಪ್ರಾಮಾಣಿಕತೆ

ದಿವ್ಯತೆಯ ಅನುಗ್ರಹದ ಬಗ್ಗೆ ಯಾವ ಸಂಶಯವೂ ಇರಲು ಸಾಧ್ಯವಿಲ್ಲ. ಓರ್ವ ಮಾನವನು ಪ್ರಾಮಾಣಿಕನಾಗಿದ್ದರೆ, ಆತನು ದಿವ್ಯತೆಯನ್ನು ತಲುಪುವನು ಎಂಬುದು ಪರಿಪೂರ್ಣ ಸತ್ಯ. ಆದರೆ ಆತನು ತಕ್ಷಣವೇ, ಸುಲಭವಾಗಿ, ತಡಮಾಡದೆ ತಲುಪುವನೆಂದು ಹೇಳಲಾಗುವದಿಲ್ಲ. 5 ವರ್ಷಗಳು, 6 ವರ್ಷಗಳು ಎಂದು ದೇವರಿಗೆ ಒಂದು ಅವಧಿಯನ್ನು ನೀಡುವ ನಿನ್ನ ದೋಷವಂತೂ ಇದೆ. ಮತ್ತು ಸಂಶಯ ಏಕೆಂದರೆ ಪರಿಣಾಮವು ಇನ್ನೂ ಕಾಣಿಸಿಕೊಳ್ಳುತ್ತಿಲ್ಲ. ಓರ್ವ ಮಾನವನು ತನ್ನ ಕೇಂದ್ರ ಭಾಗದಲ್ಲಿ ಪ್ರಾಮಾಣಿಕನಾಗಿ ಇರಬಹುದು. ಆದರೆ ಸಾಕ್ಷಾತ್ಕಾರವು ಪ್ರಾರಂಭವಾಗುವ ಮೊದಲು ಬದಲಾಗಬೇಕಾಗಿರುವ ಅನೇಕ ಅಂಶಗಳು ಆತನಲ್ಲಿ ಇರಬಹುದು. ಪ್ರಾಮಾಣಿಕತೆಯು ಆತನು ಯಾವಾಗಲೂ ಬಿಡದೆ ಮುಂದುವರೆಯುವಂತೆ ಮಾಡಬೇಕು. ಏಕೆಂದರೆ ಅದು ದಿವ್ಯತೆಯ ಕಡೆಗಿನ ತೀವ್ರವಾದ ಹಂಬಲ. ಅದನ್ನು ಇನ್ನಾವುದೂ ತಣಿಸಲಾರದು, ನಿಧಾನವಾಗುವದು, ನಿರಾಶೆ ಅಥವಾ ಕಷ್ಟ ಅಥವಾ ಇನ್ಯಾವುದೂ ಎದುರು ನಿಲ್ಲಲಾರದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/116–117**

ಪ್ರಭಾವಕ್ಕೆ ತನ್ನನ್ನು ತಾನು ತೆರೆದುಕೊಳ್ಳುವ ಸಾಮರ್ಥ್ಯ, ಒಂದು ಸಂಕಲ್ಪ, ಆಧ್ಯಾತ್ಮಿಕ ಪಥವನ್ನು ಅನುಸರಿಸುವದರಲ್ಲಿ ಒಂದು ಸಂಪೂರ್ಣ ಪ್ರಾಮಾಣಿಕತೆ ಮತ್ತು ಶ್ರದ್ಧೆಗಳ ಹೊರತಾಗಿ ಶ್ರೀ ಅರೋಬಿಂದೋ ಮತ್ತು ಶ್ರೀಮಾತೆಯವರ ಅನುಗ್ರಹವನ್ನು ಪಡೆಯಲು ಯಾವ ನಿಬಂಧನೆಯೂ ಇಲ್ಲ. ಆದರೆ ಸಾಮಾನ್ಯವಾಗಿ ಶ್ರದ್ಧೆ ಮತ್ತು ಪ್ರಾಮಾಣಿಕತೆಯ ಫಲವಾಗಿ ಈ ಸಾಮರ್ಥ್ಯವು ಲಭಿಸುವದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/106**

ದೂರದಿಂದ ನೆರವನ್ನು ಪಡೆಯಲು ಆತನಿಗೆ ಸಾಧ್ಯವಾಗದಿದ್ದರೆ ಇಲ್ಲಿ ಆತನು ಯೋಗವನ್ನು ಮಾಡಲು ಹೇಗೆ ಸಾಧ್ಯ? ಮೌಖಿಕವಾಗಿ ಅಥವಾ ಬಾಹ್ಯದಲ್ಲಿ ಇನ್ನಾವುದನ್ನೂ ಈ ಯೋಗವು ಅವಲಂಬಿಸಿಲ್ಲ. ಆದರೆ ತನ್ನನ್ನು ತಾನು ತೆರೆದುಕೊಂಡು ಶಕ್ತಿ ಮತ್ತು ಪ್ರಭಾವವನ್ನು ಪಡೆಯಬೇಕಾಗಿದೆ. ಸಂಪೂರ್ಣವಾದ

ಮೌನದಲ್ಲಿಯೂ ಸಹ ಇದು ಸಾಧ್ಯವಾಗಬೇಕು. ದೂರದಿಂದ ಇದನ್ನು ಪಡೆಯಲಾಗದಿದ್ದವರಿಗೆ ಇಲ್ಲಿಯೂ ಸಹ ಪಡೆಯಲಾಗುವದಿಲ್ಲ. ತನ್ನಲ್ಲಿ ಸಮಾಧಾನ, ಪ್ರಾಮಾಣಿಕತೆ, ಶಾಂತಿ, ಸಹಿಷ್ಣುತೆ ಮತ್ತು ನಿರಂತರವಾದ ಮುಂದುವರಿಯುವಿಕೆಗಳನ್ನು ದೃಢಪಡಿಸಿಕೊಳ್ಳದೇ ಈ ಯೋಗವನ್ನು ಮಾಡಲು ಸಾಧ್ಯವಿಲ್ಲ. ಏಕೆಂದರೆ ಅನೇಕ ಕಷ್ಟಗಳನ್ನು ಎದುರಿಸಬೇಕಾಗುವದು. ಅವುಗಳಿಂದ ಸಂಪೂರ್ಣವಾಗಿ ಮತ್ತು ಖಚಿತವಾಗಿ ಹೊರಬರಲು ಅನೇಕ ಸಂವತ್ಸರಗಳೇ ಬೇಕಾಗುವದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 35/597**

*ಪ್ರಶ್ನೆ: ಶ್ರೀಮಾತೆಯವರ ಶಕ್ತಿಯು ಕ್ರಿಯಾಶೀಲವಾಗಿರುವಾಗ ಅದನ್ನು ಖಚಿತವಾಗಿ ಮತ್ತು ಅತ್ಯಂತ ಸತ್ಯವಾಗಿ ಗುರುತಿಸಬಹುದಾದ ವಿಧಾನವು ಯಾವುದು? ಮತ್ತು ಅದನ್ನು ಇತರ ಅಹಂಕಾರಭರಿತ ಮತ್ತೂ ಅಜ್ಞಾನದ ಶಕ್ತಿಗಳಿಂದ ಬೇರ್ಪಡಿಸುವದು ಹೇಗೆ?*

ಯಾರಾದರೂ ಪರಿಪೂರ್ಣವಾಗಿ ಪ್ರಾಮಾಣಿಕವಾಗಿರಬೇಕು ಅಷ್ಟೇ. ಮನಸ್ಸು ನೀಡುವ ಕಾರಣಗಳ ಮೂಲಕ ತನ್ನ ಸ್ವಂತ ಅಪೇಕ್ಷೆಗಳು ಮತ್ತು ದೋಷಗಳನ್ನು ಸಮರ್ಥಿಸಿಕೊಳ್ಳಬಾರದು. ತನ್ನನ್ನು ನಿಷ್ಪಕ್ಷಪಾತವಾದ ಮತ್ತು ಶಾಂತವಾದ ಮೌಲ್ಯಮಾಪನಕ್ಕೆ ಒಳಪಡಿಸಬೇಕು. ತನ್ನ ಚಲನೆಗಳನ್ನು ವೀಕ್ಷಿಸಬೇಕು ಮತ್ತು ಶ್ರೀಮಾತೆಯ ಪ್ರಕಾಶವನ್ನು ಆಹ್ವಾನಿಸಬೇಕು – ನಂತರ ನಿಧಾನವಾಗಿ ಆ ಬೆಳಕಿನಲ್ಲಿ ನೀನು ಪ್ರತಿಯೊಂದನ್ನೂ ವಿವೇಚಿಸುವೆ – ಅದು ಒಮ್ಮೆಲೇ ಪರಿಪೂರ್ಣವಾಗಿ ಮಾಡಲು ಸಾಧ್ಯವಾಗದಿದ್ದರೂ, ತೀರ್ಮಾನ ಮತ್ತು ಭಾವನೆಗಳು ಹೆಚ್ಚು ಸ್ಪಷ್ಟ ಮತ್ತು ಖಚಿತವಾಗುವವು. ಮತ್ತು ಈ ವಸ್ತುಗಳ ಒಂದು ಸೂಕ್ತ ಚೇತನವು ಪ್ರತಿಷ್ಠಾಪಿತವಾಗುವದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/225**

ಅಪೇಕ್ಷೆಗಳ ವಿಷಯವನ್ನು ತೆಗೆದುಕೊಂಡಾಗ, ಸಮರ್ಪಕವಾದ ಹಾದಿ ಯಾವುದೆಂದರೆ ಒಂದು ಪ್ರಾಮಾಣಿಕ ಅಭೀಪ್ಸೆಯನ್ನು ಹೊಂದಿ ಶ್ರೀಮಾತೆಯವರ ಶಕ್ತಿಯನ್ನು ನಿನ್ನಲ್ಲಿ ಕೆಲಸ ಮಾಡಲು ಅಹ್ವಾನಿಸುವದು. ಶ್ರೀಮಾತೆಯವರ ಪ್ರಕಾಶ

ಮತ್ತು ಶಕ್ತಿಯು ನಿನ್ನೊಳಗೆ ಕೆಲಸ ಮಾಡುತ್ತಿರುವಾಗ ಅವು ಬದಲಾಗ–ಬೇಕಾಗಿರುವದೆಲ್ಲವನ್ನೂ ತೋರ್ಪಡಿಸುವವು ಮತ್ತು ನೀನು ನಿನ್ನ ಪ್ರಾಮಾಣಿಕ ಮತ್ತು ಪೂರ್ಣ ಅಂಗೀಕಾರವನ್ನು ನೀಡಿದರೆ ಅವುಗಳನ್ನು ಬದಲಾಯಿಸುವವು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/393**

ಪ್ರಾಮಾಣಿಕತೆಯ ಒಂದು ಪರಿಣಾಮವೇ ತನ್ನ ಸ್ವಂತ ದುರ್ಬಲತೆಗಳನ್ನು ಕಂಡುಕೊಳ್ಳುವದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/53 – ಶ್ರೀ ಅರವಿಂದರು**

ದಿವ್ಯದ ಅಪೇಕ್ಷೆಯೇ ನನ್ನ ಅಪೇಕ್ಷೆಯಾಗುವದು

*ಪ್ರಶ್ನೆ: ನನ್ನ ನೈಜ ಆಶ್ರಯ ಮತ್ತು ಏಕೈಕ ಶಕ್ತಿ ನಿಮ್ಮ ಪ್ರೀತಿಯೇ ಆಗಿದೆ. ನನ್ನ ಪ್ರಿಯ ಶ್ರೀಮಾತೆ, ನಾನು ನಿಮಗೆ ಅರ್ಪಿಸುವದು ಕೆಸರಿನ ಮಿಶ್ರಣವಾಗಿದೆ. ಅದರ ಬಗ್ಗೆ ನನಗೆ ನಾಚಿಕೆಯೆನಿಸುವದು. ಆದರೆ ಅದನ್ನು ನೀನು ಮಾತ್ರವೇ ಪರಿಶುದ್ಧಗೊಳಿಸಲು ಸಾಧ್ಯ.*

ನನ್ನ ಅತ್ಯಂತ ಪ್ರೀತಿಯ ಮಗುವೇ,

ಅರ್ಪಣೆಯು ಏನೇ ಆಗಿರಲಿ, ಅದನ್ನು ಪ್ರಾಮಾಣಿಕವಾಗಿ ಸಿದ್ಧಪಡಿಸಿದ್ದರೆ ಅದು ಯಾವಾಗಲೂ ದೈವೀ ಪ್ರಕಾಶದ ಕಿರಣವನ್ನು ಹೊಂದಿರುವದು. ಅದು ಪೂರ್ಣ ಸೂರ್ಯನಾಗಿ ವೃದ್ಧಿಸಿ ಇಡೀ ಸತ್ತೆಯನ್ನು ಬೆಳಗುವದು. ನನ್ನ ಪ್ರೇಮದ ಬಗ್ಗೆ ನಿನಗೆ ಖಚಿತತೆ ಇರಲಿ. ನನ್ನ ನೆರವಿನ ಬಗ್ಗೆ ನಿನಗೆ ಖಚಿತತೆ ಇರಲಿ ಮತ್ತು ನಮ್ಮ ಆಶೀರ್ವಾದವು ನಿನ್ನೊಂದಿಗೆ ಸದಾಕಾಲ ಇರುವದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 16/211**

ನಿನ್ನ ಸಾಧನೆಯ ಪ್ರತಿಯೊಂದು ಅಂಶದಲ್ಲೂ ಪ್ರಾಮಾಣಿಕತೆಯೇ ಮುಖ್ಯವಾದುದು. ಅದು ಇದ್ದರೆ, ದೋಷಗಳನ್ನು ತಿದ್ದಿಕೊಳ್ಳಬಹುದು ಮತ್ತು ಅದೇನು ದೊಡ್ಡ ವಿಷಯವಲ್ಲ. ಯಾವುದೇ ಅಪ್ರಾಮಾಣಿಕತೆ ಇದ್ದರೆ, ಅದು ಸಾಧನೆಯನ್ನು ಒಮ್ಮೆಲೆ ಕೆಳಗೆ ತರುವದು. ಆದರೆ ಈ ನಿರಂತರವಾದ

ಪ್ರಾಮಾಣಿಕತೆ ಇದೆಯೇ? ಅಥವಾ ಯಾವುದೇ ಅಂಶದಲ್ಲಿ ಕೆಳಗೆ ಬಿದ್ದಿರುವೆನೇ? ಎಂಬುದನ್ನು ನಿನ್ನೊಳಗೆ ನೋಡಲು ನೀನು ಕಲಿಯಬೇಕು. ಶ್ರದ್ಧಾಭರಿತ ಮತ್ತು ನಿರಂತರವಾದ ಸಂಕಲ್ಪವು ಅದರ ಬಗ್ಗೆ ಇದ್ದರೆ, ನೋಡಬಹುದಾದ ಶಕ್ತಿಯು ಉಂಟಾಗುವದು. ಪ್ರಾಮಾಣಿಕತೆಯು ಇತರರ ತೃಪ್ತಿಪಡಿಸುವಿಕೆಯನ್ನು ಅವಲಂಬಿಸಿಲ್ಲ. – ಅದೊಂದು ಆಂತರಿಕ ವಿಷಯ ಮತ್ತು ನನಗೆ ಮತ್ತು ನಿನಗೆ ಮಾತ್ರ ಸಂಬಂಧಿತವಾದುದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/68**

ಜೀವನದಲ್ಲಿ ಸಂತಸ ಮತ್ತು ಶಾಂತಿಗಳನ್ನು ಪಡೆಯಲು ಮೂಲಭೂತ ಷರತ್ತು ಏನೆಂದರೆ ಸಂಪೂರ್ಣವಾದ ಪ್ರಾಮಾಣಿಕತೆಯೊಂದಿಗೆ ದಿವ್ಯವು ಅಪೇಕ್ಷಿಸುವದನ್ನೇ ನೀನು ಸಹ ಅಪೇಕ್ಷಿಸಬೇಕು. ಎಲ್ಲಾ ಮಾನವ ಸಹಜ ದುಃಖಗಳು ಏಕೆ ಬರುವವೆಂದರೆ ಎಲ್ಲಾ ಜನರು ತಮಗೇನು ಬೇಕು ಎಂಬುದು ದಿವ್ಯಕ್ಕಿಂತಲೂ ಹೆಚ್ಚಾಗಿ ತಮಗೇ ಗೊತ್ತಿದೆ ಎಂದು ದೃಢವಾಗಿ ಭಾವಿಸುವರು. ಜೊತೆಗೆ ಜೀವನವು ತಮಗೇನು ಕೊಡಬೇಕು ಎಂಬುದರ ಬಗ್ಗೆ ತಮಗೆ ಸ್ಪಷ್ಟ ಅರಿವು ಇದೆಯೆಂದು ಸಹ ಭಾವಿಸುವರು. ಬಹುಪಾಲು ಮಾನವರು ಇತರ ಜನರು ತಮ್ಮ ನಿರೀಕ್ಷೆಗಳನ್ನು ಒಪ್ಪಬೇಕು ಮತ್ತು ಪರಿಸ್ಥಿತಿಗಳು ತಮ್ಮ ಅಪೇಕ್ಷೆಗಳಿಗೆ ತಕ್ಕಂತೆ ಇರಬೇಕು ಎಂದು ಬಯಸುವರು – ಆದುದರಿಂದ ಅವರು ನೋವನ್ನು ಅನುಭವಿಸುವರು ಮತ್ತು ದುಃಖಿಗಳಾಗಿರುವರು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 16/433 – ಶ್ರೀಮಾತೆ**

ನಿನಗೆ ನೀನು ಸತ್ಯಸಂಧನಾಗಿರು –
(ನಿನ್ನನ್ನೇ ವಂಚಿಸಿಕೊಳ್ಳಬೇಡ).
ದಿವ್ಯದತ್ತ ಪ್ರಾಮಾಣಿಕನಾಗಿರು –
(ಶರಣಾಗತಿಯಲ್ಲಿ ಯಾವ ಚೌಕಾಸಿಯೂ ಬೇಡ).
ಮಾನವೀಯತೆಯಲ್ಲಿ ನೇರವಾಗಿರು –
(ಯಾವ ನೆಪ ಮತ್ತು ಪ್ರದರ್ಶನವೂ ಬೇಡ).

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/70 – ಶ್ರೀಮಾತೆ**

# ನಿಷ್ಠೆಯ (ವಿಧೇಯತೆಯ) ಸಾಮರ್ಥ್ಯ

**– ಅನು: ಡಾ॥ ಮಹಾದೇವ ಸಕ್ರಿ, ವಿಜಯಪುರ**

**ಪ್ರಾಮಾಣಿಕತೆಯ ಸೂತ್ರಗಳು**

ಭಯಪಡಬೇಡಿ, ನಿಮ್ಮ ಪ್ರಾಮಾಣಿಕತೆಯೇ ನಿಮ್ಮ ರಕ್ಷೆಯಾಗಿದೆ.

*

ಶುದ್ಧ ಪ್ರಾಮಾಣಿಕವಾಗಿರಿ, ಜಯವು ನಿಮ್ಮದೆ.

*

ದೈವೀ ಕಾರ್ಯಕ್ಕೆ ನಿಮ್ಮ ಸಮರ್ಪಣೆಯಲ್ಲಿ ಶುದ್ಧ ಪ್ರಾಮಾಣಿಕವಾಗಿರಿ. ಇದು ನಿಮಗೆ ಶಕ್ತಿ ಮತ್ತು ಯಶಸ್ಸನ್ನು ಖಚಿತಪಡಿಸುತ್ತದೆ.

*

ಪ್ರಾಮಾಣಿಕವಾಗಿರಿ.

ಪ್ರಾಮಾಣಿಕತೆಯು ದೈವತ್ವದ ಹೆಬ್ಬಾಗಿಲು.

*

ದೇವರು, ಯಾವಾಗಲೂ ಶ್ರದ್ಧಾವಂತರ ಹಾಗೂ ಪ್ರಾಮಾಣಿಕರ ಸಂಗಾತಿ–ಯಾಗಿರುತ್ತಾನೆ.

*

ದೇವರಿಗೆ ನಿಮ್ಮ ಸಮರ್ಪಣೆಯಲ್ಲಿ ಪರಮ ಪ್ರಾಮಾಣಿಕವಾಗಿರಿ, ಆಗ ನಿಮ್ಮ ಜೀವನವು ಸಮರಸವಾಗಿರುತ್ತದೆ ಮತ್ತು ಸುಂದರವಾಗಿರುತ್ತದೆ.

*

ಪ್ರಾಮಾಣಿಕವಾಗಿರಿ ಮತ್ತು ಅಗತ್ಯವಿದ್ದರೆ ನಿಮ್ಮ ತಪ್ಪುಗಳನ್ನು ಸರಿಪಡಿಸಲು ನಾನು ಸಿದ್ಧಳಿದ್ದೇನೆ, ಸಾವಿರ ಬಾರಿಯಾದರೂ ಸರಿ.

*

ಪ್ರಾಮಾಣಿಕರಾಗಿರುವವರನ್ನು ಸುಲಭವಾಗಿ ದೇವರೆಡೆಗೆ ಹೊರಳುವಲ್ಲಿ ನಾನು ಸಹಾಯ ಮಾಡಬಲ್ಲೆ. ಆದರೆ ಅಪ್ರಾಮಾಣಿಕತೆ ಇದ್ದಲ್ಲಿ ನನ್ನ ಸಹಾಯವು ಅತಿ ಕಡಿಮೆಯಾಗಿರುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/65–68**

ಎಲ್ಲಾ ಪ್ರಾಮಾಣಿಕ ಪ್ರಾರ್ಥನೆಗಳು ನೆರವೇರಿಸಲ್ಪಡುವವು, ಆದರೆ ಭೌತಿಕವಾಗಿ ಅವುಗಳು ಈಡೇರಲು ಸ್ವಲ್ಪ ಸಮಯ ತೆಗೆದುಕೊಳ್ಳಬಹುದು.

*

ಪ್ರಾಮಾಣಿಕ ಕರೆಗಳು ಖಂಡಿತವಾಗಿಯೂ (ದೇವನಿಂದ) ಕೇಳಲ್ಪಡುತ್ತವೆ ಮತ್ತು ಅವುಗಳಿಗೆ ಉತ್ತರವೂ ಲಭಿಸುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 15/207–08**

ಬದಲಾಗುವ ಪ್ರಾಮಾಣಿಕ ಇಚ್ಛೆಯನ್ನು ಹೊಂದಿದ್ದವರಿಗೆ ಮಾತ್ರ ದೈವೀ ಸಹಾಯ ದೊರೆಯುತ್ತದೆ; ನೀವು ಪ್ರಾಮಾಣಿಕವಾಗಿ ಬದಲಾಗುವ ಇಚ್ಛೆಯನ್ನು ಹೊಂದಿದ್ದರೆ, ಅದು ಶಕ್ತಿಯುತವಾದ ಸಹಾಯವಾಗಿದೆ, ಏಕೆಂದರೆ ಅದು ನಿಮಗೆ ಬದಲಾವಣೆ–ಯಾಗಲು ಬಲವನ್ನು ನೀಡುತ್ತದೆ ಮತ್ತು ಬದಲಾವಣೆಯಾಗಲು ಮಾರ್ಗದರ್ಶನವನ್ನು ನೀಡುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 4/349**

ಪ್ರಾಮಾಣಿಕತೆ ಇರುವಲ್ಲೆಲ್ಲ, ನಿಮಗೆ ಉತ್ತರವನ್ನು ನೀಡಲು, ಆ ದೈವೀ ಸಹಾಯ, ಮಾರ್ಗದರ್ಶನ, ಮತ್ತು ಅನುಗ್ರಹ ಯಾವಾಗಲೂ ಇರುವುದನ್ನು ನೀವು ಕಂಡುಕೊಳ್ಳುವಿರಿ.

ಪ್ರಗತಿಗಾಗಿ ಹಂಬಲದಲ್ಲಿರುವ, ಸತ್ಯಕ್ಕಾಗಿ ಇಚ್ಛೆಯಲ್ಲಿರುವ, ನಿಜವಾಗಿಯೂ ಶುದ್ಧವಾಗಿರುವ ಬೇಡಿಕೆಯಲ್ಲಿರುವ ಈ ಪ್ರಾಮಾಣಿಕತೆಯು – ಆಧ್ಯಾತ್ಮಿಕ ಜೀವನದಲ್ಲಿ ಅರ್ಥಮಾಡಿಕೊಂಡಂತೆ ಶುದ್ಧವಾಗಿರುತ್ತದೆ – ಈ ಪ್ರಾಮಾಣಿಕತೆಯೇ ಎಲ್ಲಾ ಪ್ರಗತಿಗೆ ಅತಿ ಮಹತ್ವದ ಸಂಗತಿಯಾಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/192**

**... ನೀವು ಆರಾಧಿಸುವ ದೇವರ ಅಂಶವು ಯಾವುದೇ** ಆಗಿರಲಿ ಅಥವಾ ನೀವು ಯಾವುದೇ ಮಾರ್ಗದರ್ಶಿಯನ್ನು ಆರಿಸಿಕೊಳ್ಳಿ, ನಿಮ್ಮ ಸಮರ್ಪಣೆಯಲ್ಲಿ ನೀವು ಪರಿಪೂರ್ಣರಾಗಿದ್ದರೆ ಮತ್ತು ಪೂರ್ಣ ಪ್ರಾಮಾಣಿಕರಾಗಿದ್ದರೆ ನೀವು ಆಧ್ಯಾತ್ಮಿಕ ಗುರಿಯನ್ನು ಸಾಧಿಸುವುದು ಖಚಿತ...

ಆಧ್ಯಾತ್ಮಿಕ ಸಾಕ್ಷಾತ್ಕಾರವೆಂದರೆ – ಇದನ್ನು ಈ ಮೊದಲು ಅರ್ಥಮಾಡಿಕೊಂಡಂತೆ, ಸಾಮಾನ್ಯವಾಗಿ ಅದನ್ನು ಈಗಲೂ ಅರ್ಥೈಸಿಕೊಂಡಿರುವಂತೆ – ಯಾವುದೇ ರೀತಿಯಲ್ಲಾಗಲಿ, ಆಂತರಿಕವಾಗಿ ಅಥವಾ ಯಾವುದೇ ಒಂದು ರೂಪದ ಮುಖಾಂತರವಾಗಲಿ ಪರಮಾತ್ಮನೊಂದಿಗೆ ಒಂದಾಗುವಿಕೆಯಾಗಿದೆ; ಇದು ಪರಮಾತ್ಮನೊಂದಿಗೆ, ಪರಿಪೂರ್ಣತೆಯೊಂದಿಗೆ ನಿಮ್ಮ ಅಸ್ತಿತ್ವದ ಸಮ್ಮಿಲನವಾಗಿದೆ. ಈ ಸಮ್ಮಿಲನದಲ್ಲಿ ನಿಮ್ಮ ಪ್ರತ್ಯೇಕ ಅಸ್ತಿತ್ವವು ಬಹುತೇಕ ಕಣ್ಮರೆಯಾಗುತ್ತದೆ. ಮತ್ತು ಅದು ಸಂಪೂರ್ಣವಾಗಿ ನಿಮ್ಮ ಸಮರ್ಪಣೆಯ ಪ್ರಾಮಾಣಿಕತೆ ಮತ್ತು ಸಮಗ್ರತೆಯ ಮೇಲೆ ಅವಲಂಬಿತವಾಗಿರುತ್ತದೆಯೇ ಹೊರತು ನೀವು ಯಾವುದಕ್ಕೆ ನಿಮ್ಮನ್ನು ನೀವು ಸಮರ್ಪಿಸಿಕೊಳ್ಳಬೇಕೆಂದಿರುವರೋ ಅದರ ಮೇಲಲ್ಲ. ಏಕೆಂದರೆ... ನಿಮ್ಮ ಆಕಾಂಕ್ಷೆಯ ಪ್ರಾಮಾಣಿಕತೆಯು ಎಲ್ಲಾ ಮಿತಿಗಳನ್ನು ದಾಟುವಂತೆ ಮಾಡಿ ನೀವು ಪರಮಾತ್ಮನನ್ನು ಕಂಡುಕೊಳ್ಳುವಂತೆ ಮಾಡುತ್ತದೆ, ಆತನನ್ನು ನಿಮ್ಮೊಳಗಿರುವಂತೆ ಮಾಡುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 8/243–244 – ಶ್ರೀಮಾತೆ**

**ಜೀವನ ಪಯಣ**

ಎಲ್ಲಾ ಭಯ, ಆಪತ್ತು ಮತ್ತು ವಿಪತ್ತುಗಳ ವಿರುದ್ಧ ಶಸ್ತ್ರಸಜ್ಜಿತ ಜೀವನವನ್ನು ನಡೆಸಲು, ಯಾವಾಗಲೂ ಒಟ್ಟಿಗೆ ಹೋಗುವಂಥ ಕೇವಲ ಎರಡು ವಿಷಯಗಳು ಬೇಕಾಗುತ್ತವೆ – ಒಂದು, ದೈವೀ ಮಾತೆಯವರ ಅನುಗ್ರಹ ಮತ್ತು ಎರಡನೆಯದು ನಮ್ಮ ಕಡೆಯಿಂದ ನಂಬಿಕೆ, ಪ್ರಾಮಾಣಿಕತೆ ಮತ್ತು ಶರಣಾಗತಿಯಿಂದ ಕೂಡಿದ ಆಂತರಿಕ ಸ್ಥಿತಿ. ನಿಮ್ಮ ನಂಬಿಕೆಯು ಶುದ್ಧ, ಪ್ರಾಮಾಣಿಕ ಮತ್ತು ಪರಿಪೂರ್ಣವಾಗಿರಲಿ. ಮಹತ್ವಾಕಾಂಕ್ಷೆ, ಹೆಮ್ಮೆ, ಗರ್ವ, ಮಾನಸಿಕ ದುರಹಂಕಾರ, ಪ್ರಾಣಿಕ ಸ್ವ–ಇಚ್ಛೆ, ವೈಯಕ್ತಿಕ ಬೇಡಿಕೆ, ನಿಮ್ನ ಸ್ವಭಾವದ ಕ್ಷುಲ್ಲಕ ತೃಪ್ತಿಗಳಿಗಾಗಿ ಬಯಕೆಯಿಂದ ಕಳಂಕಿತವಾಗಿರುವ ಮಾನಸಿಕ ಮತ್ತು ಪ್ರಾಣಿಕ ಪುರುಷನಲ್ಲಿರುವ ಅಹಂಕಾರಯುಕ್ತ ನಂಬಿಕೆಯು ಕೆಳಸ್ಥರದ ಮತ್ತು ಹೊಗೆಯಿಂದ ಅಸ್ಪಷ್ಟವಾದ ಜ್ವಾಲೆಯಾಗಿದ್ದು ಅದು ಮೇಲಕ್ಕೆ ಸ್ವರ್ಗದೆಡೆಗೆ ಪ್ರಜ್ವಲಿಸಲಾರದು. ನಿಮ್ಮ ಜೀವನವನ್ನು ದೈವೀ ಕಾರ್ಯಕ್ಕಾಗಿ ಮತ್ತು ದೈವೀ

ಅಭಿವ್ಯಕ್ತಿಯಲ್ಲಿ ಸಹಾಯ ಮಾಡಲು ಮಾತ್ರ ನಿಮಗೆ ನೀಡಲಾಗಿದೆ ಎಂದು ಪರಿಗಣಿಸಿ. ದೈವೀ ಪ್ರಜ್ಞೆಯ ಶುದ್ಧತೆ, ಶಕ್ತಿ, ಬೆಳಕು, ವಿಶಾಲತೆ, ಶಾಂತತೆ, ಆನಂದ ಮತ್ತು ನಿಮ್ಮ ಮನಸ್ಸು, ಜೀವನ ಹಾಗೂ ದೇಹವನ್ನು ಪರಿವರ್ತಿಸಲು ಮತ್ತು ಪರಿಪೂರ್ಣಗೊಳಿಸಲು ಬೇಕಾದ ಅದರ ಆಗ್ರಹದ ಹೊರತು ಏನನ್ನೂ ಅಪೇಕ್ಷಿಸಬೇಡಿ. ಆಧ್ಯಾತ್ಮಿಕ ಮತ್ತು ಅತಿಮಾನಸ ಸತ್ಯ, ಭೂಮಿಯ ಮೇಲೆ ಮತ್ತು ನಿಮ್ಮಲ್ಲಿ ಹಾಗೂ ಆಯ್ಕೆಯಾದ ಎಲ್ಲರಲ್ಲೂ ಅದರ ಸಾಕ್ಷಾತ್ಕಾರವನ್ನು ಮತ್ತು ಅದರ ಸೃಷ್ಟಿಗಾಗಿ ಅಗತ್ಯವಾದ ಪರಿಸ್ಥಿತಿಗಳನ್ನು ಮತ್ತು ಎಲ್ಲ ಎದುರಾಳಿ ಶಕ್ತಿಗಳ ಮೇಲೆ ಅದರ ವಿಜಯದ ಹೊರತು ದೇವರನ್ನು ಏನನ್ನೂ ಕೇಳಬೇಡಿ.

ನಿಮ್ಮ ಪ್ರಾಮಾಣಿಕತೆ ಮತ್ತು ಶರಣಾಗತಿಯು ನೈಜವಾಗಿರಲಿ ಮತ್ತು ಅಪ್ಪಟವಾಗಿರಲಿ. ಯಾವಾಗ ನೀವು ಯಾವುದೇ ಬೇಡಿಕೆ ಇಲ್ಲದೆ, ಷರತ್ತಿಲ್ಲದೆ, ಸಂಕೋಚವಿಲ್ಲದೆ, ಸಂಪೂರ್ಣವಾಗಿ ಸಮರ್ಪಿಸಿಕೊಂಡಾಗ ನಿಮ್ಮಲ್ಲಿಯ ಎಲ್ಲವೂ ಶ್ರೀಮಾತೆಯವರಿಗೆ ಸಂಬಂಧಿಸಿರುತ್ತದೆ. ನಮ್ಮ ಸಮರ್ಪಣೆಯು ಅಹಂಕಾರಕ್ಕಾಗಲಿ ಅಥವಾ ಬೇರೆ ಯಾವುದೇ ಪ್ರಭಾವಕ್ಕಾಗಲಿ ಇರಬಾರದು.

ನಿಮ್ಮ ನಂಬಿಕೆ, ಪ್ರಾಮಾಣಿಕತೆ ಮತ್ತು ಶರಣಾಗತಿಯು ಪೂರ್ಣವಿದ್ದಾಗ, ಶ್ರೀಮಾತೆಯವರ ಅನುಗ್ರಹ ಮತ್ತು ರಕ್ಷಣೆ ನಿಮ್ಮೊಂದಿಗಿರುತ್ತದೆ. ಮತ್ತು ಶ್ರೀಮಾತೆಯವರ ಅನುಗ್ರಹ ಮತ್ತು ರಕ್ಷಣೆ ನಿಮ್ಮೊಂದಿಗಿರುವಾಗ ನಿಮ್ಮನ್ನು ಯಾವುದೂ ಏನೂ ಮಾಡಲಾರದು ಅಥವಾ ನೀವು ಯಾರಿಗೆ ಭಯಪಡಬೇಕು? ಕೊಂಚ ಅನುಗ್ರಹವಿದ್ದರೂ ಕೂಡ, ಅದು ನಿಮ್ಮನ್ನು ಎಲ್ಲ ತೊಂದರೆಗಳಿಂದ, ಅಡೆತಡೆಗಳಿಂದ ಪಾರು ಮಾಡುವುದು; ಆ ಅನುಗ್ರಹದ ಪೂರ್ಣ ಉಪಸ್ಥಿತಿಯಿಂದ ಆವೃತವಾದಾಗ ನೀವು ಸುರಕ್ಷಿತವಾಗಿ ನಿಮ್ಮ ಪಥದಲ್ಲಿ ಸಾಗಬಹುದು, ಏಕೆಂದರೆ ಆ ಅನುಗ್ರಹ ಶ್ರೀಮಾತೆಯವರದು. ಈ ಅನುಗ್ರಹವು ಎಲ್ಲ ಅಪಾಯಗಳನ್ನು ನಿರ್ಲಕ್ಷಿಸುತ್ತದೆ, ಎಷ್ಟೇ ಪ್ರತಿಕೂಲ (ಈ ಜಗತ್ತಿನ ಅಥವಾ ಬೇರೆ ಅದೃಶ್ಯ ಜಗತ್ತುಗಳ) ವಾತಾವರಣವಿದ್ದರೂ ಅದರಿಂದ ಪ್ರಭಾವಿತ–ವಾಗುವುದಿಲ್ಲ. ಅನುಗ್ರಹದ ಸ್ಪರ್ಶವು ತೊಂದರೆಗಳನ್ನು ಅವಕಾಶಗಳನ್ನಾಗಿ, ವೈಫಲ್ಯವನ್ನು ಯಶಸ್ಸನ್ನಾಗಿ ಮತ್ತು ದೌರ್ಬಲ್ಯವನ್ನು ಅಚಲ ಶಕ್ತಿಯನ್ನಾಗಿ ಪರಿವರ್ತಿಸುತ್ತದೆ. ಶ್ರೀಮಾತೆಯವರ ಅನುಗ್ರಹವು ಪರಮಾತ್ಮನ ಅನುಮೋದನೆಯಾಗಿದೆ ಮತ್ತು ಇಂದು ಅಥವಾ ನಾಳೆ ಅದರ ಪರಿಣಾಮವು ಖಚಿತವಾಗಿದೆ. ಮತ್ತು ಅದು ನಿರ್ಣಯಿಸಲ್ಪಟ್ಟ, ಅನಿವಾರ್ಯವಾದ ಹಾಗೂ ಪ್ರತಿಬಂಧಿಸಲಾಗದ ಸಂಗತಿಯಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/8–9 – ಶ್ರೀ ಅರವಿಂದರು**

# ಅನುಷ್ಠಾನದಲ್ಲಿ ನಿಷ್ಠೆ (ವಿಧೇಯತೆ)

## ತೊಂದರೆಗಳನ್ನು ಎದುರಿಸಿದಾಗ (ತೊಂದರೆಗಳಿದ್ದಾಗ)

*ಪ್ರಶ್ನೆ: ಪ್ರೀತಿಯ ಮಾತೆಯವರೆ, ನಮಗೆ ಕಷ್ಟ ಬಂದಾಗ ಮತ್ತು ನಿಮ್ಮನ್ನು ನೋಡಲು ಅಥವಾ ಅದರ ಬಗ್ಗೆ ನಿಮಗೆ ಹೇಳಲು ಸಾಧ್ಯವಾಗದಿದ್ದಾಗ, ನಾವೇನು ಮಾಡಬೇಕು?*

ನನ್ನನ್ನು ಭೇಟಿಯಾಗಿ ನಿಮ್ಮ ಕಷ್ಟಗಳನ್ನು ನನಗೆ ಹೇಳಲು ಸಾಧ್ಯವಾಗದಿದ್ದರೆ, ನೀವು ಏಕಾಂಗಿಯಾಗಿ ಮೌನದಲ್ಲಿ ಕುಳಿತುಕೊಳ್ಳಲು ಪ್ರಯತ್ನಿಸಬೇಕು, ನಾನಲ್ಲಿರುವೆನೆಂದು ಭಾವಿಸಿ ನನ್ನನ್ನು ಕರೆಯಬೇಕು, ನನ್ನನ್ನು ಬರುವಂತೆ ಮಾಡಿ ಮತ್ತು ನಿಮ್ಮ ಕಷ್ಟವನ್ನು ಸಂಪೂರ್ಣವಾಗಿ, ಪ್ರಾಮಾಣಿಕವಾಗಿ ಮತ್ತು ವಸ್ತುನಿಷ್ಠವಾಗಿ ನನ್ನ ಮುಂದೆ ಇಡಬೇಕು; ತದನಂತರ ತುಂಬಾ ಮೌನವಾಗಿರಿ, ತುಂಬಾ ಶಾಂತವಾಗಿರಿ ಮತ್ತು ಫಲಿತಾಂಶಕ್ಕಾಗಿ ಕಾಯಿರಿ.

ಮತ್ತು ಫಲಿತಾಂಶವು ಬರುತ್ತದೆಂದು ನಾನು ಭಾವಿಸುತ್ತೇನೆ. ಏಕೆಂದರೆ, ಫಲಿತಾಂಶವು ಕಷ್ಟದ ಸ್ವರೂಪದ ಮೇಲೆ ಅವಲಂಬಿಸಿರುತ್ತದೆ....

ಮನುಷ್ಯರ ಯಾವುದೇ ಒಂದು ಭಾಗವು ಒಂದು ವಿಷಯವನ್ನು ಅಥವಾ ಸಂಗತಿಯನ್ನು ಬಯಸುವುದರಿಂದ ಮತ್ತು ಇನ್ನೊಂದು ಭಾಗವು ಅದನ್ನು ಹೊಂದಬಾರದೆಂಬ ತಿಳುವಳಿಕೆಯಿಂದ ತೊಂದರೆಯು ಬಂದರೆ, ಆಗ ಅದು ಜಟಿಲವಾಗುತ್ತದೆ. ಏಕೆಂದರೆ, ಬಯಸುವಂಥ ಭಾಗವು, ಪ್ರತಿಯಾಗಿ ತನ್ನದೇ ಆದ ಬಯಕೆಯನ್ನು ಆಚರಣೆಯಲ್ಲಿ ತರಲು ಪ್ರಯತ್ನಿಸಬಹುದು. ಆದ್ದರಿಂದ ನಾವು ಮೌನವಾಗಿ ಕುಳಿತಾಗ, ಮೊದಲು ನಾವು ಅದನ್ನು (ಬಯಸುವಂಥ ಭಾಗ) ಪ್ರಾಮಾಣಿಕವಾಗಿ ಶರಣಾಗುವಂತೆ ಮನವೊಲಿಸುವ ಮೂಲಕ ಪ್ರಾರಂಭಿಸಬೇಕು. "ಈಗ ನಾನು ಬಯಸುವುದು ಇದನ್ನೇ ಎನ್ನುವ ಪ್ರಜ್ಞೆ ನನಗಿದೆ, ಆದರೆ ಅದನ್ನು ಹಾಗೆ ಮಾಡುವುದಾದರೆ ನನ್ನ ಬಯಕೆಯನ್ನು ಬಿಡಲು ನಾನು ಸಿದ್ಧ ಎಂದು ಹೇಳುತ್ತ ನಾವು ನಿಜವಾದ ಪ್ರಗತಿಯನ್ನು ಸಾಧಿಸಬಹುದು. ಆದರೆ ನೀವಿದನ್ನು ತಲೆಯಲ್ಲಿ ಮಾತ್ರವಲ್ಲದೆ, ಪ್ರಾಮಾಣಿಕವಾಗಿಯೂ ಮಾಡಬೇಕು, ತದನಂತರ ನಾನು ಹೇಳಿದಂತೆ ನೀವು ಮುಂದುವರಿಯಿರಿ. ನಂತರ ನಾವೇನು ಮಾಡಬೇಕೆನ್ನುವುದು ನಮಗೆ ತಿಳಿಯುತ್ತದೆ.

ನೀವು ಅದನ್ನು (ನೀವು ಹೇಳಬೇಕೆಂದಿರುವುದನ್ನು) ಬರೆದಾಗ ಕೆಲವೊಮ್ಮೆ ಸುಲಭವಾಗುತ್ತದೆ; ನಾನಲ್ಲಿರುವೆನೆಂದು ನೀವು ಊಹಿಸಿಕೊಳ್ಳಿ ಮತ್ತು ನಂತರ ಒಂದು ಕಾಗದವನ್ನು ತೆಗೆದುಕೊಂಡು ಅದರ ಮೇಲೆ ನೀವು ನನಗೆ ಹೇಳಲು ಬಯಸಿದ್ದನ್ನು ಬರೆಯಿರಿ. ನಾವು ಸ್ಪಷ್ಟವಾಗಿ ಹೇಳಬಯಸುವ ಅಂಶವು ಕೆಲವೊಮ್ಮೆ ನಮಗೆ ಪರಿಸ್ಥಿತಿಯ ನಿಜವಾದ ಚಿತ್ರಣವನ್ನು ನೀಡುತ್ತದೆ ಮತ್ತು ಪ್ರತಿಯಾಗಿ ನಾವು ಉತ್ತರವನ್ನು ಹೆಚ್ಚು ಸುಲಭವಾಗಿ ಪಡೆಯಬಹುದು. ಇದು ಕೆಲವೊಮ್ಮೆ ಅಗತ್ಯವಾಗಿರುತ್ತದೆ, ಕೆಲವೊಮ್ಮೆ ಅಲ್ಲ, ಆದರೆ ನೀವು ಗೊಂದಲದಲ್ಲಿದ್ದರೆ, ಒಂದು ರೀತಿಯ ಸುಳಿಯಲ್ಲಿ ಸಿಲುಕಿಕೊಂಡಿದ್ದರೆ, ಎಲ್ಲಕ್ಕಿಂತ ಹೆಚ್ಚಾಗಿ, ನಿಮ್ಮ ಮೇಲೆ ಒತ್ತಡವಿದ್ದರೆ, ನೀವು ಬಯಸಿದ್ದನ್ನು ಕಾಗದದ ಮೇಲೆ ಬರೆಯುವಂತೆ ನಿಮ್ಮನ್ನು ಒತ್ತಾಯಿಸುವ ಅಂಶವು ನಿಮ್ಮನ್ನು ಶಾಂತಗೊಳಿಸುತ್ತದೆ, ಅದು ಶುದ್ಧೀಕರಣದ ಕೆಲಸವನ್ನು ಪ್ರಾರಂಭಿಸುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 7/105–106**

**ಮೂರ್ಖತನದ ಕೆಲಸಗಳನ್ನು ಮಾಡುವುದು**

*ಪ್ರಶ್ನೆ: ಮೂರ್ಖತನದ ಕೆಲಸವನ್ನು ಮಾಡುವವರೂ ಇದ್ದಾರೆ...*

ಹೌದು.

*ಅವರು ಹಾಗೆ ಮಾಡುತ್ತಿದ್ದಾರೆಂದು ಅವರಿಗೆ ಗೊತ್ತು, ಆದರೆ ಅವರ ಮನಸ್ಸು ಅವರನ್ನು ಸಮರ್ಥಿಸುವುದಿಲ್ಲ, ಅದು ಯಾವುದೇ ಬೆಂಬಲವನ್ನು ನೀಡುವುದಿಲ್ಲ, ಯಾವುದೇ ಕ್ಷಮೆಯನ್ನು ನೀಡುವುದಿಲ್ಲ, ಯಾವುದೇ ಕಾರಣವನ್ನು ಅಥವಾ ವಿವರಣೆಯನ್ನು ನೀಡುವುದಿಲ್ಲ. ಇದೆಂತಹ ಸ್ಥಿತಿ?*

ಇದೆಂತಹ ಸ್ಥಿತಿ? ತಾವು ಮೂರ್ಖ ಕೆಲಸಗಳನ್ನು ಮಾಡುತ್ತಿದ್ದೇವೆಂದು ಗೊತ್ತಿರುವ ಜನರು, ಪ್ರಜ್ಞೆಯುಳ್ಳವರು, ಆದರೆ ಹಾಗೆ ಮಾಡದಿರಲು ಸಾಧ್ಯವಾಗದ ಜನರು, ಏಕೆಂದರೆ ಅವರ ಮನಸ್ಸಿಗೆ ಅವುಗಳನ್ನು ಪರೀಕ್ಷಿಸುವಷ್ಟು ಶಕ್ತಿ ಇಲ್ಲವೇ?...

ಮಧ್ಯ ಪ್ರವೇಶಿಸುವ ಶಕ್ತಿ ಇರುವುದು ಚೈತ್ಯ ಪುರುಷನಿಗೆ ಮಾತ್ರ. ನಿಮ್ಮ ಮನಸ್ಸು ನಿಮ್ಮ ಚೈತ್ಯ ಪುರುಷನ ಸಂಪರ್ಕದಲ್ಲಿದ್ದರೆ, ಅದು ಚೈತ್ಯ ಪುರುಷನ ಪ್ರಭಾವವನ್ನು ಪಡೆದುಕೊಂಡರೆ, ಅದು ಪ್ರತಿರೋಧವನ್ನು ಸಂಘಟಿಸುವಷ್ಟು ಬಲವಾಗಿರುತ್ತದೆ. ಯಾವುದು ಸತ್ಯ ಸಂಗತಿ ಮತ್ತು ಯಾವುದು ಸುಳ್ಳು ಸಂಗತಿ ಎಂದು ಅದು ತಿಳಿದಿದೆ;

ಮತ್ತು ನಿಜ ಸಂಗತಿಯನ್ನು ತಿಳಿದಾದ ಮೇಲೆ, ಅದು ಸದ್ಭಾವನೆಯನ್ನು ಹೊಂದಿದ್ದರೆ, ಅದು ಪ್ರತಿರೋಧವನ್ನು ಸಂಘಟಿಸುತ್ತದೆ, ಹೋರಾಡುತ್ತದೆ ಮತ್ತು ಜಯಶಾಲಿ–ಯಾಗುತ್ತದೆ. ಆದರೆ ಅದೊಂದು ಷರತ್ತು ಮಾತ್ರ: ಅದು ಚೈತ್ಯ ಪುರುಷನ ಸಂಪರ್ಕದಲ್ಲಿರಬೇಕು....

ಇದು ಸಂಭವಿಸುವುದು ನೀವು ನಿರ್ಧರಿಸಿದಾಗ ಮಾತ್ರ: "ಸರಿ, ಈ ಸಲ, ನಾನು ಅದನ್ನು ಮಾಡದಿರಲು ಪ್ರಯತ್ನಿಸುತ್ತೇನೆ, ಮತ್ತು ನಾನು ಅದನ್ನು ಮಾಡುವುದಿಲ್ಲ, ಅದನ್ನು ಮಾಡದಿರಲು ನನ್ನ ಎಲ್ಲಾ ಶಕ್ತಿಯನ್ನು ಉಪಯೋಗಿಸುತ್ತೇನೆ ಮತ್ತು ನಾನು ಅದನ್ನು ಮಾಡುವುದಿಲ್ಲ." ನೀವು ಇದರಲ್ಲಿ ಸ್ವಲ್ಪ ಯಶಸ್ಸನ್ನು ಹೊಂದಿದರೂ, ಅದು ಹೆಚ್ಚು. ಅದು ಅಂತಹ ದೊಡ್ಡ ಯಶಸ್ಸೇನಲ್ಲ, ಅದೊಂದು ಸಣ್ಣ ಯಶಸ್ಸು, ಒಂದು ಅಪೂರ್ಣ ಯಶಸ್ಸು: ನೀವು ಮಾಡಲಿಚ್ಛಿಸಿದ್ದನ್ನು ಮಾಡಲಾಗುವುದಿಲ್ಲ, ಆದರೆ ಹಂಬಲ, ಆಸೆ, ಉತ್ಸಾಹ ಇನ್ನೂ ಅಲ್ಲಿದೆ, ಮತ್ತು ಅದು ಒಳಗೆ ಅವಾಂತರಗಳನ್ನು ಉಂಟುಮಾಡುತ್ತದೆ. ಆದರೆ, "ನಾನು ಅದನ್ನು ಮಾಡುವುದಿಲ್ಲ, ನಾನು ಅಲುಗಾಡುವುದಿಲ್ಲ; ನಾನು ಕೈಕಾಲು ಕಟ್ಟಿಕೊಂಡರೂ ಸಹ ನಾನದನ್ನು ಮಾಡಲಾರೆ," ಎಂದು ಬಾಹ್ಯದಲ್ಲಿ ನೀವು ವಿರೋಧಿಸುತ್ತೀರಿ. ಅದೊಂದು ಅಪೂರ್ಣ ಯಶಸ್ಸು – ಆದರೆ ಇದು ಒಂದು ದೊಡ್ಡ ವಿಜಯವಾಗಿದೆ. ಏಕೆಂದರೆ, ಈ ಕಾರಣದಿಂದಾಗಿ, ಮುಂದಿನ ಬಾರಿ ನೀವು ಸ್ವಲ್ಪ ಹೆಚ್ಚು ಪ್ರಯತ್ನಮಾಡಲು ಸಾಧ್ಯವಾಗುತ್ತದೆ. ಅಂದರೆ, ಎಲ್ಲಾ ಹಿಂಸಾತ್ಮಕ ಭಾವೋದ್ರೇಕಗಳನ್ನು ನಿಮ್ಮೊಳಗೆ ಹಿಡಿದಿಟ್ಟುಕೊಳ್ಳುವ ಬದಲು, ನೀವು ಅವುಗಳನ್ನು ಸ್ವಲ್ಪ ಶಾಂತಗೊಳಿಸಲು ಪ್ರಾರಂಭಿಸಬಹುದು; ಮೊದಲಿಗೆ ನೀವು ಅವುಗಳನ್ನು ನಿಧಾನವಾಗಿ (ಸ್ವಲ್ಪ ಕಷ್ಟದಿಂದ) ಶಾಂತಗೊಳಿಸುತ್ತೀರಿ. ಅವುಗಳು ದೀರ್ಘಕಾಲ ಉಳಿಯುತ್ತವೆ, ಅವುಗಳು ಹಿಂತಿರುಗುತ್ತವೆ, ಅವುಗಳು ನಿಮ್ಮನ್ನು ತೊಂದರೆಗೊಳಿಸುತ್ತವೆ, ನಿಮ್ಮನ್ನು ಕೆರಳಿಸುತ್ತವೆ, ನಿಮ್ಮಲ್ಲಿ ದೊಡ್ಡ ಅಸಹ್ಯವನ್ನು ಉಂಟುಮಾಡುತ್ತವೆ, ಆದರೆ ನೀವು ಎಲ್ಲವನ್ನೂ ಸಮರ್ಥವಾಗಿ ಎದುರಿಸಿದರೆ... ಆಗ ಅವು ನಿಧಾನವಾಗಿ ಹಿಂದೆ ಸರಿಯಲು ಪ್ರಾರಂಭಿಸುತ್ತವೆ ಮತ್ತು ನೀವು ಎರಡನೆಯ ಮನೋಭಾವವನ್ನು ಕಲಿಯಲು ಪ್ರಾರಂಭಿಸುತ್ತೀರಿ: "ಈಗ ನನ್ನ ಪ್ರಜ್ಞೆಯು ಆ ವಿಷಯಗಳಾಚೆ ಇರಬೇಕೆಂದು ನಾನು ಬಯಸುತ್ತೇನೆ. ಇನ್ನೂ ಅನೇಕ ಹೋರಾಟಗಳಿವೆ, ಆದರೆ ನನ್ನ ಪ್ರಜ್ಞೆಯು ಅದೆಲ್ಲವನ್ನೂ ಮೀರಿದರೆ, ಇದು ಹಿಂದಿರುಗಿ ಬಾರದ ಸಮಯವೊಂದು ನಿಧಾನವಾಗಿ ಬರುತ್ತದೆ. ತದನಂತರ ನೀವು ಸಂಪೂರ್ಣವಾಗಿ ಸ್ವತಂತ್ರರು ಎಂದು ನೀವು ಭಾವಿಸುವ ಸಮಯ ಬರುತ್ತದೆ: ನೀವು ಅದನ್ನು

ಗ್ರಹಿಸುವುದಿಲ್ಲ ಅಷ್ಟೆ. ಇದು ದೀರ್ಘ ಸಮಯ ತೆಗೆದುಕೊಳ್ಳಬಹುದು, ಅಥವಾ ಬೇಗನೆ ಬರಬಹುದು: ಅದು ಚಾರಿತ್ರ್ಯದ ಬಲದ ಮೇಲೆ, ಆಕಾಂಕ್ಷೆಯ ಪ್ರಾಮಾಣಿಕತೆಯ ಮೇಲೆ ಅವಲಂಬಿಸಿರುತ್ತದೆ. ಆದರೆ ಸ್ವಲ್ಪ ಪ್ರಾಮಾಣಿಕತೆಯನ್ನು ಹೊಂದಿರುವ ಜನರೂ ಸಹ, ಈ ಪ್ರಕ್ರಿಯೆಗೆ ತಮ್ಮನ್ನು ತಾವು ಒಳಪಡಿಸಿಕೊಂಡರೆ, ಅವರೂ ಯಶಸ್ವಿಯಾಗುತ್ತಾರೆ. ಅವರು ಮೊದಲ ಬಾಬತ್ತಿನಲ್ಲೇ ಯಶಸ್ವಿಯಾಗುತ್ತಾರೆ: ವ್ಯಕ್ತಪಡಿಸದಿರುವುದರಲ್ಲಿ. ಭೂಮಿಯ ಮೇಲಿನ ಎಲ್ಲಾ ಶಕ್ತಿಗಳು ಸ್ವಯಂ ಅಭಿವ್ಯಕ್ತಿಯ ಕಡೆಗೆ ಒಲವು ತೋರುತ್ತವೆ. ಈ ಶಕ್ತಿಗಳು ತಮ್ಮನ್ನು ತಾವು ಪ್ರಕಟಪಡಿಸುವ ಉದ್ದೇಶದಿಂದ ಬರುತ್ತವೆ ಮತ್ತು ನೀವೇನಾದರು ಬೇಲಿಯನ್ನು ಹಾಕಿದರೆ ಮತ್ತು ಅವುಗಳನ್ನು ವ್ಯಕ್ತಪಡಿಸಲು ನಿರಾಕರಿಸಿದರೆ, ಅವುಗಳು ಸ್ವಲ್ಪ ಸಮಯದವರೆಗೆ ಬೇಲಿಯ ವಿರುದ್ಧ ಮಥಿಸಲು ಪ್ರಯತ್ನಿಸಬಹುದು, ಆದರೆ ಕೊನೆಯಲ್ಲಿ, ಅವುಗಳು ತಮ್ಮಷ್ಟಕ್ಕೆ ತಾವು ಹಿಂದೆ ಸರಿದುಕೊಳ್ಳುತ್ತವೆ ಮತ್ತು ಪ್ರಕಟವಾಗುವುದಿಲ್ಲ, ನಿಮ್ಮನ್ನು ಶಾಂತವಾಗಿರಲು ಬಿಡುತ್ತವೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 5/210–212**

**ಶ್ರೀ ಅರವಿಂದರಿಗೆ ಸಮರ್ಪಣೆ**

*ಪ್ರಶ್ನೆ: ನನ್ನ ಮನಸ್ಸನ್ನು ಶ್ರೀ ಅರವಿಂದರಿಗೆ ಪ್ರಾಮಾಣಿಕವಾಗಿ ಅರ್ಪಿಸಲು ಸಾಧ್ಯವಾಗಬೇಕಾದರೆ, ಏಕಾಗ್ರತೆಯ ಅಸಮಾನ್ಯ ಶಕ್ತಿಯನ್ನು ಬೆಳೆಸಿಕೊಳ್ಳುವುದು ತುಂಬಾ ಅಗತ್ಯವಲ್ಲವೇ? ಈ ಅಮೂಲ್ಯ ಸಹಜ ಶಕ್ತಿಯನ್ನು ನಾನು ಯಾವ ವಿಧಾನದಿಂದ ವಿಕಸಿತಗೊಳಿಸಿಕೊಳ್ಳಬಹುದೆಂದು ನೀವು ನನಗೆ ಹೇಳುವಿರಾ?*

ನೀವು ಪ್ರತಿದಿನ ಶಾಂತವಾಗಿರಬಹುದಾದಂಥ ಒಂದು ಸಮಯವನ್ನು ನಿಗದಿಪಡಿಸಿಕೊಳ್ಳಿ.

ಶ್ರೀ ಅರಬಿಂದೋ ಅವರ ಪುಸ್ತಕಗಳಲ್ಲಿ ಯಾವುದಾದರೊಂದನ್ನು ತೆಗೆದುಕೊಳ್ಳಿ. ಅದರಲ್ಲಿಯ, ಒಂದು ಅಥವಾ ಎರಡು ವಾಕ್ಯಗಳನ್ನು ಓದಿ. ನಂತರ ಮೌನವಾಗಿರಿ ಮತ್ತು ಆ ವಾಕ್ಯಗಳ ಆಳವಾದ ಅರ್ಥವನ್ನು ಅರ್ಥಮಾಡಿಕೊಳ್ಳಲು ಮನಸ್ಸನ್ನು ಕೇಂದ್ರೀಕರಿಸಿ. ಮಾನಸಿಕ ಮೌನವನ್ನು ಪಡೆಯಲು ಸಾಕಷ್ಟು ಆಳವಾಗಿ ಕೇಂದ್ರೀಕರಿಸಲು ಪ್ರಯತ್ನಿಸಿ ಮತ್ತು ನೀವು ಫಲಿತಾಂಶವನ್ನು ಪಡೆಯುವವರೆಗೆ ಪ್ರತಿದಿನವೂ ಇದನ್ನೇ ಪುನರಾವರ್ತಿಸಿ.

ಸಹಜವಾಗಿ, ಈ ಪ್ರಕ್ರಿಯೆಯಲ್ಲಿ ನೀವು ನಿದ್ರೆ ಹೋಗಬಾರದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 12/205** **– ಶ್ರೀಮಾತೆ**

ನೀವು ಮನೆಯಲ್ಲಿ ಮತ್ತು ನಿಮ್ಮ ಕೆಲಸದ ಮಧ್ಯೆ ಸಾಧನೆಯನ್ನು ಮಾಡಲು ಸಾಧ್ಯವಿದೆ – ಅನೇಕರು ಹಾಗೆ ಮಾಡುತ್ತಾರೆ ಕೂಡ. ಆರಂಭದಲ್ಲಿ ಬೇಕಾಗಿರುವುದೇನೆಂದರೆ, ಶ್ರೀಮಾತೆಯವರನ್ನು ಸಾಧ್ಯವಾದಷ್ಟು ಸ್ಮರಿಸುವುದು, ಪ್ರತಿದಿನ ಸ್ವಲ್ಪ ಸಮಯದವರೆಗೆ ಹೃದಯದಲ್ಲಿ ಶ್ರೀಮಾತೆಯವರ ಮೇಲೆ ಕೇಂದ್ರೀಕರಿಸುವುದು, ಸಾಧ್ಯವಾದರೆ ಅವರನ್ನು ದೈವೀ ಮಾತೆ ಎಂದು ಭಾವಿಸುವುದು, ಅವರನ್ನು ನಿಮ್ಮ ಆಂತರ್ಯದಲ್ಲಿ ಅನುಭವಿಸಲು ಹಂಬಲಿಸುವುದು. ನಿಮ್ಮ ಎಲ್ಲ ಕೆಲಸಗಳು ಶ್ರೀಮಾತೆಯವರಿಗೆ ಅರ್ಪಿಸಿರಿ ಮತ್ತು ನಿಮ್ಮೊಳಗಿನಿಂದ ಅವರು ನಿಮಗೆ ಮಾರ್ಗದರ್ಶನ ನೀಡಬಹುದೆಂದು ಮತ್ತು ನಿಮ್ಮನ್ನು ಮುನ್ನಡೆಸಿಕೊಂಡು ಹೋಗಬಹುದೆಂದು ಪ್ರಾರ್ಥಿಸಿರಿ. ಇದು ಪೂರ್ವಭಾವಿ ಹಂತವಾಗಿದ್ದು, ಇದು ಸಾಮಾನ್ಯವಾಗಿ ದೀರ್ಘ ಸಮಯ ತೆಗೆದುಕೊಳ್ಳುತ್ತದೆ. ಆದರೆ ಪ್ರಾಮಾಣಿಕತೆಯಿಂದ ಮತ್ತು ದೃಢತೆಯಿಂದ ಆ ಪಥದ ಮೂಲಕ ಮುಂದುವರೆದರೆ, ಮನಸ್ಥಿತಿಯು ಸ್ವಲ್ಪಮಟ್ಟಿಗೆ ಬದಲಾಗಲು ಪ್ರಾರಂಭಿಸುತ್ತದೆ ಮತ್ತು ಸಾಧಕನಲ್ಲಿ ಹೊಸ ಪ್ರಜ್ಞೆಯು ತೆರೆದುಕೊಳ್ಳುತ್ತದೆ. ಇದರಿಂದ, ನಮ್ಮೊಳಗಡೆ ಶ್ರೀಮಾತೆಯವರ ಉಪಸ್ಥಿತಿಯ ಬಗ್ಗೆ, ಪ್ರಕೃತಿಯಲ್ಲಿ, ಜೀವನದಲ್ಲಿ ಕಾರ್ಯ ಮಾಡುವುದರ ಬಗ್ಗೆ ಅಥವಾ ಸಾಕ್ಷಾತ್ಕಾರದೆಡೆಗಿನ ದ್ವಾರವನ್ನು ತೆರೆಯುವಂಥ ಆಧ್ಯಾತ್ಮಿಕ ಅನುಭವದ ಬಗ್ಗೆ ಹೆಚ್ಚು–ಹೆಚ್ಚು ಅರಿವಾಗಲು ಆರಂಭವಾಗುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/186 – ಶ್ರೀ ಅರವಿಂದರು**

## ನಿಷ್ಠೆಯ (ವಿಧೇಯತೆಯ) ಮಾರ್ಗದಲ್ಲಿ ಅಡೆತಡೆಗಳು

ಪ್ರಾಮಾಣಿಕವಾಗಿ ಕೆಲಸ ಮಾಡಲು ನಿರ್ಧರಿಸು ಮತ್ತು ಒಡನೆಯೇ ಅಥವಾ ನಂತರದಲ್ಲಿ ಎಲ್ಲ ಅಡೆತಡೆಗಳು ನಿವಾರಣೆಯಾಗುತ್ತವೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 12/354**

ಶುದ್ಧ ಪ್ರಾಮಾಣಿಕತೆಯ ದೊಡ್ಡ ಶತ್ರುಗಳೆಂದರೆ (ಮಾನಸಿಕ, ಪ್ರಾಣಿಕ ಅಥವಾ ದೈಹಿಕ) ಆದ್ಯತೆಗಳು ಮತ್ತು ಪೂರ್ವಭಾವಿ ಕಲ್ಪನೆಗಳು. ನಾವು ಜಯಿಸಬೇಕಾಗಿದ್ದು ಈ ಅಡೆತಡೆಗಳನ್ನು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/71**

ನೀವು ಸಂಪೂರ್ಣ ಪ್ರಾಮಾಣಿಕತೆಯನ್ನು ಸಾಧಿಸಿದ್ದೀರಿ ಎಂದು ನಿಮಗೆ ಖಚಿತವಾದಾಗ, ನೀವು ಮಿಥ್ಯೆಯೊಳಗೆ ಮುಳುಗಿದ್ದೀರಿ ಎನ್ನುವುದು ನಿಮಗೆ ನಿಶ್ಚಿತವಾಗುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/69**

*ಪ್ರಶ್ನೆ: ನಿಮ್ಮನ್ನು ನೀವು ಯೋಗಕ್ಕೆ ಅಣಿಗೊಳಿಸಿಕೊಂಡಾಗ, ನಿಮಗೆ ಹಲವಾರು ಅಡೆತಡೆಗಳು ಎದುರಾಗುತ್ತವೆ ಎಂದು ಯಾರೋ ಹೇಳಿದ್ದಾರೆ. ಇದು ನಿಜವೇ?*

ಇದು ಸ್ಪಷ್ಟವಾದ ನಿಯಮವೇನಲ್ಲ; ಅದು ಹೆಚ್ಚು ಅವಲಂಬಿತವಾಗಿರುವುದು ವ್ಯಕ್ತಿಯ ಮೇಲೆ. ಅನೇಕರಿಗೆ, ಪ್ರತಿಕೂಲ ಪರಿಸ್ಥಿತಿಗಳು, ಅವರ ಸ್ವಭಾವದಲ್ಲಿನ ದುರ್ಬಲ ಅಂಶಗಳಿಗೆ ಒಂದು ಪರೀಕ್ಷೆಯಾಗಿ ಬರುತ್ತವೆ. ಯೋಗ ಪಥದಲ್ಲಿ ನೀವು ಮುಕ್ತವಾಗಿ ಸಾಗುವ ಮೊದಲು ಸ್ಥಾಪಿಸಲೇಬೇಕಾದಂಥ ಅನಿವಾರ್ಯ ಆಧಾರವೇನೆಂದರೆ ಸಮಚಿತ್ತತೆ. ಸ್ವಾಭಾವಿಕವಾಗಿ, ಆ ದೃಷ್ಟಿಕೋನದಿಂದ, ಎಲ್ಲಾ ಅಡಚಣೆಗಳು ನೀವು ಪಾಸಾಗಬೇಕಾದ ಪರೀಕ್ಷೆಗಳೇ ಆಗಿವೆ. ಆದರೆ, ಬೆಳಕಿಗೆ ಮತ್ತು ಸತ್ಯಕ್ಕೆ ನಿಮ್ಮ ತೆರೆಯುವಿಕೆಯನ್ನು ತಡೆಯುವ ಮತ್ತು ನಿಮ್ಮ ಮಾನಸಿಕ ರಚನೆಗಳು ನಿಮ್ಮ ಸುತ್ತಲೂ ನಿರ್ಮಿಸಿದ ಮಿತಿಗಳನ್ನು ಮುರಿಯಲು ಅವುಗಳು ಅವಶ್ಯಕವೂ ಆಗಿವೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/52**

**ಆಕಾಂಕ್ಷೆ ಮತ್ತು ಪ್ರತಿಕೂಲ ಶಕ್ತಿಗಳು**

*ನಾವು ಒಂದು ಹಂಬಲದೊಂದಿಗೆ ಆಧ್ಯಾತ್ಮಿಕ ಜೀವನಕ್ಕೆ ಬಂದಾಗ, ಪ್ರತಿಕೂಲ ಶಕ್ತಿಗಳು ನಮ್ಮ ಮೇಲೆ ದಾಳಿ ಮಾಡಬಹುದೇ?*

ಯಾವುದೇ ವಿನಾಯಿತಿ ಇಲ್ಲದೆ ಎಲ್ಲರ ಮೇಲೂ ದಾಳಿ ಮಾಡಬಹುದು.

*ಅವರು ಉತ್ತಮವಾಗಿ ಕಂಡರೂ ಸಹ?*

ಕೆಲವೊಮ್ಮೆ, ಹೌದು. ಕೆಲವೊಮ್ಮೆ ಇವುಗಳು ಅತ್ಯಂತ ಅಪಾಯಕಾರಿ.

*ಆದರೆ ನಾವದನ್ನು ಹೇಗೆ ತಿಳಿಯಬಹುದು?*

ಆಹ್! ನಿಮಗೆ ಗುರುವಿದ್ದರೆ ಅವರ ಬಳಿ ಹೋಗಿ ಕೇಳುವುದು ಸುಲಭವಾದ ಮಾರ್ಗವಾಗಿದೆ. ಇದು ಪ್ರತಿಯೊಬ್ಬರಿಗೂ ಸುಲಭ ಸಾಧ್ಯವಾದ ಮಾರ್ಗ. ಗುರುವನ್ನು

ಹುಡುಕಿಕೊಂಡು ಹೋಗಿ ಕೇಳಲು ಆತನಲ್ಲಿ ನಮ್ಮ ನಂಬಿಕೆ ಇದ್ದರೆ ಸಾಕು; ಗುರುವಿಗೆ ಎಲ್ಲವೂ ತಿಳಿದಿರುವುದರಿಂದ ಆತ ನಿಮಗೆ ಹೇಳುವನು.

ನಿಮಗೆ ಗುರುವಿಲ್ಲದಿದ್ದರೆ ಸ್ವಲ್ಪ ಹೆಚ್ಚು ಕಷ್ಟವಾಗಬಹುದು, ಏಕೆಂದರೆ ಈ ಶಕ್ತಿಗಳು ಬಹಳ ಬುದ್ಧಿವಂತವಾಗಿವೆ; ಅವುಗಳು ವಿಪತ್ತಿನ, ದುಃಖದ ಮತ್ತು ದುಷ್ಟತನದ ವೇಷವನ್ನು ಧರಿಸಿರುವುದಿಲ್ಲ, ಏಕೆಂದರೆ ನೀವು ಅದನ್ನು ತಕ್ಷಣವೇ ಕಂಡುಕೊಳ್ಳುವಿರಿ ಮತ್ತು ನಿಮ್ಮನ್ನು ನೀವು ಅವುಗಳ ಜಾಲಕ್ಕೆ ಸಿಲುಕಿಕೊಳ್ಳಲು ಬಿಡುವುದಿಲ್ಲ; ಸಾಮಾನ್ಯವಾಗಿ ಅವುಗಳು ಸ್ನೇಹಿತರ ವೇಷದಲ್ಲಿ ಬರುತ್ತವೆ. ನೀವು ತುಂಬಾ ಪ್ರಾಮಾಣಿಕರಾಗಿದ್ದರೆ, ನಿಮ್ಮ ಅಹಂಕಾರವನ್ನು ತೃಪ್ತಿಗೊಳಿಸುವ ಅಥವಾ ನಿಮ್ಮಲ್ಲಿ ಸಂದೇಹಗಳನ್ನು ಹುಟ್ಟುಹಾಕುವ ಅಥವಾ ನಿಖರವಾಗಿ ಏನು ಮಾಡಬೇಕೆಂಬುದರ ಬಗ್ಗೆ ನಿಮ್ಮನ್ನು ಸ್ವಲ್ಪ ವಿವೇಚನಾರಹಿತನರನ್ನಾಗಿ ಮಾಡುವ ಚಿಕ್ಕ ಸಲಹೆಗಳಂತಹ ಕೆಲವು ಸಣ್ಣ ಸೂಚನೆಗಳನ್ನು ನೀವು ಶೀಘ್ರದಲ್ಲೇ ಗಮನಿಸುವಿರಿ – ಬಹಳ ಚಿಕ್ಕ ವಿಷಯಗಳು. ನೀವು ತುಂಬಾ ಪ್ರಾಮಾಣಿಕರಾಗಿದ್ದರೆ, ಅವುಗಳು ನಿಮ್ಮ ಗಮನಕ್ಕೆ ಬರುತ್ತವೆ; ವಿಶೇಷವಾಗಿ ನಿಮ್ಮನ್ನು ಪ್ರೋತ್ಸಾಹಿಸುವ ಅಭಿನಂದನೆಗಳಿಂದ ಅಥವಾ ಅಹಂಕಾರದ ಈ ತೃಪ್ತಿಯಲ್ಲಿ ನಿಮ್ಮನ್ನು ಪ್ರೋತ್ಸಾಹಿಸುವ ಪ್ರಯತ್ನಗಳಿಂದ ನೀವು ಮೋಸಹೋಗದಂತೆ ಸಾಕಷ್ಟು ಜಾಗರೂಕರಾಗಿದ್ದರೆ. ನಿಮ್ಮ ಪ್ರತಿಷ್ಠೆಗೆ ಸ್ವಲ್ಪ ಪ್ರೋತ್ಸಾಹವನ್ನು ನೀಡುವಂಥ ಸಂಗತಿಗಳು – ಅದು ಖಚಿತವಾದ ಸಂಕೇತವಾಗಿದೆ; ನೀವು ಯೋಚಿಸುವಂತೆ ಮಾಡುವ ಯಾವುದೋ ಒಂದು ವಿಷಯ: "ಅಷ್ಟಕ್ಕೂ, ನಾನೇನು ತುಂಬಾ ಕೆಟ್ಟವಳಲ್ಲ. ನಾನು ಮಾಡುವುದೆಲ್ಲವನ್ನೂ ಚೆನ್ನಾಗಿ ಮಾಡುತ್ತೇನೆ. ನನ್ನ ಪ್ರಯತ್ನ ಬಹಳ ಶ್ಲಾಘನೀಯವಾಗಿರುತ್ತದೆ. ನನ್ನ ಪ್ರಾಮಾಣಿಕತೆಯು ಎಲ್ಲಾ ಖಂಡನೆ, ಇತ್ಯಾದಿಗಳನ್ನು ಮೀರಿದ್ದಾಗಿರುತ್ತದೆ." ನೀವು ಹೆಚ್ಚು ಹೆಚ್ಚು ಸ್ವಯಂ–ತೃಪ್ತರಾಗುತ್ತಿದ್ದಂತೆ ನೀವು ಅಲ್ಲಿ ಖಚಿತರಾಗಬಹುದು. ಆದರೆ ಅಲ್ಲಿಯೂ ಸಹ, ಅದು ಯಾವಾಗಲೂ ಈ ರೂಪಗಳನ್ನು ಹೊಂದಿರುವುದಿಲ್ಲ. ವ್ಯಕ್ತಿಗಳನ್ನು ಅವಲಂಬಿಸಿ, ಅಲ್ಲಿ ಇತರ ವಿಷಯಗಳಿವೆ. ಕೆಲವರಿಗೆ ಅದು ಇದಾಗಿದೆ; ಇತರರಿಗೆ, ಅವುಗಳು ಭವ್ಯತೆಯ ಕಲ್ಪನೆಗಳನ್ನು ಜಾಗೃತಗೊಳಿಸುತ್ತವೆ: "ನಾನು ಈ ರೀತಿಯಲ್ಲಿ ಮುಂದುವರಿದರೆ ಒಬ್ಬ ಮಹಾನ್ ಯೋಗಿಯಾಗುತ್ತೇನೆ. ನಾನು ದೊಡ್ಡ ಶಕ್ತಿಗಳನ್ನು ಹೊಂದುತ್ತೇನೆ. ನಾನು ದೈವೀ ಸೇವೆಯನ್ನು ಎಷ್ಟು ಚೆನ್ನಾಗಿ ಮಾಡುತ್ತೇನೆ, ಆತ ನನ್ನೊಂದಿಗೆ ಎಷ್ಟು ಸಂತೋಷವಾಗಿರುತ್ತಾನೆ! ಇದು ತುಂಬಾ ಅಪಾಯಕಾರಿ ಸಂಗತಿ." ಇದಕ್ಕೆ ವಿರುದ್ಧವಾದ ಸಂಗತಿಯೂ ಸಂಭವಿಸಬಹುದು: "ಅಷ್ಟಕ್ಕೂ, ಬಹುಶಃ ನಾನು

ಯಾವ ಕೆಲಸಕ್ಕೂ ಬಾರದವ. ನಾನು ಮಾಡುವ ಯಾವುದೇ ಪ್ರಯತ್ನವು ಯೋಗ್ಯವಾಗಿದೆಯೇ? ಈ ಪ್ರಯತ್ನದಿಂದ ಏನೂ ಆಗುವುದಿಲ್ಲ. ನಾನು ಆಧ್ಯಾತ್ಮಿಕ ಜೀವನ ನಡೆಸಲು ಸಮರ್ಥನೇ? ಪ್ರಾಯಶಃ ನಾನು ಎಂದಿಗೂ ಏನನ್ನೂ ಮಾಡಲಾರೆ, ನನಸಾಗದ ಕನಸಿನ ಸಲುವಾಗಿ ನಾನು ಕಣ್ಣಿಗೆ ಕಾಣುವ ವಿಷಯಗಳನ್ನು ತ್ಯಜಿಸುತ್ತಿದ್ದೇನೆ. ಅಷ್ಟಕ್ಕೂ ನಾನೇನಾಗಿದ್ದೇನೆ? ಒಂದು ಧೂಳಿನ ಕಣ. ಪರಮಾತ್ಮನನ್ನು ಹುಡುಕಲು ನಾನು ಮಾಡುವ ಪ್ರಯತ್ನವು ಯೋಗ್ಯವಾಗಿದೆಯೇ? ಬಹುಶಃ ಈ ಪ್ರಯತ್ನದಿಂದ ನಾನು ಎಂದಿಗೂ ಏನನ್ನೂ ಕಂಡುಕೊಳ್ಳುವುದಿಲ್ಲ ಮತ್ತು ನನ್ನ ಎಲ್ಲಾ ಪ್ರಯತ್ನಗಳು ನಿಷ್ಪ್ರಯೋಜಕವಾಗಿವೆ." ಅದು ಇನ್ನೂ ಹೆಚ್ಚು ಅಪಾಯಕಾರಿಯಾಗಿದೆ. ಇಂತಹ ನೂರಾರು ಉದಾಹರಣೆಗಳನ್ನು ನಾನು ಹೇಳಬಲ್ಲೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 5/155–56**

**ರಕ್ಷಿಸಬೇಕಾದಂಥ ಒಂದು ಸಂಗತಿ**

ನಿಮ್ಮನ್ನು ನಿಜವಾಗಿಯೂ ರಕ್ಷಿಸಬಹುದಾದ ಒಂದೇ ಒಂದು ವಿಷಯವಿದೆ, ಅದೇನೆಂದರೆ – ನಿಮ್ಮ ಚೈತ್ಯ ಪುರುಷನೊಂದಿಗೆ (ಸ್ವಲ್ಪಮಟ್ಟಿಗಾದರೂ ಸಹ) ಸಂಪರ್ಕವನ್ನು ಹೊಂದುವುದು, ಮತ್ತು ಆ ಸಂಪರ್ಕದ ಘನತ್ವವನ್ನು ಅನುಭವಿಸುವುದು. ನಂತರ, ಈ ವ್ಯಕ್ತಿಯಿಂದ ಅಥವಾ ಆ ಸನ್ನಿವೇಶದಿಂದ ನಿಮಗೆ ಏನೇ ಬಂದರೂ ಅದನ್ನು ನೀವು ಅದರ ಮುಂದೆ ಇರಿಸಿ ಮತ್ತು ಅದು ಸರಿಯಾಗಿದೆಯೇ ಅಥವಾ ಇಲ್ಲವೇ ಎಂದು ನೋಡಿ. ನೀವು ಎಲ್ಲ ರೀತಿಯಿಂದ ತೃಪ್ತರಾಗಿದ್ದರೂ ಸಹ – "ಕೊನೆಗೂ ನಾನು ಹೊಂದಲು ಬಯಸಿದಂಥ ಸ್ನೇಹಿತನನ್ನು ನಾನು ಕಂಡುಕೊಂಡಿದ್ದೇನೆ. ನಾನು ನನ್ನ ಜೀವನದ ಅತ್ಯುತ್ತಮ ಸಂದರ್ಭಗಳಲ್ಲಿ ಇದ್ದೇನೆ, ಇತ್ಯಾದಿ," ಎಂದು ನಿಮ್ಮಷ್ಟಕ್ಕೆ ನೀವು ಹೇಳಿಕೊಂಡರೂ ಸಹ, ಅದನ್ನು ನಿಮ್ಮ ಚೈತ್ಯ ಪುರುಷನೊಂದಿಗಿನ ಈ ಚಿಕ್ಕ ಸಂಪರ್ಕದ ಮುಂದೆ ಇರಿಸಿ, ಆಗ ಅದು ತನ್ನ ಪ್ರಕಾಶಮಾನವಾದ ಬಣ್ಣವನ್ನು ಉಳಿಸಿಕೊಳ್ಳುತ್ತದೆಯೇ ಅಥವಾ ಇದ್ದಕ್ಕಿದ್ದಂತೆ ಸ್ವಲ್ಪ ಮಬ್ಬಾಗುತ್ತದೆಯೋ ಎನ್ನುವುದನ್ನು ನೀವು ಕಾಣುವಿರಿ. ಇದು ಅಂತಹ ಅಬ್ಬರವನ್ನೇನು ಮಾಡುವುದಿಲ್ಲ, ಆದರೆ ಕೊಂಚ ಅಶಾಂತಿಯನ್ನುಂಟು ಮಾಡುತ್ತದೆ. ಹೌದು, ಅದು ಯಾವಾಗಲೂ ಕೇಳಬೇಕಾದ ಚಿಕ್ಕ ಧ್ವನಿ ಎನ್ನುವುದು ನಿಮಗೆ ತಿಳಿಯುತ್ತದೆ. ಇದು ಸತ್ಯ ಸಂಗತಿಯಾಗಿದೆ, ಮತ್ತು ಇನ್ನು ಮುಂದೆ ಬೇರೆಯವರು ತೊಂದರೆ ಕೊಡುವುದಿಲ್ಲ.

ನೀವು ಪ್ರಾಮಾಣಿಕ ಹಂಬಲದೊಂದಿಗೆ ಆಧ್ಯಾತ್ಮಿಕ ಜೀವನಕ್ಕೆ ಬಂದರೆ, ಕೆಲವೊಮ್ಮೆ ಅಹಿತಕರ ಸಂಗತಿಗಳ ಹಿಮಪಾತವು ನಿಮ್ಮ ಮೇಲೆ ಬೀಳಬಹುದು: ನಿಮ್ಮ ಆತ್ಮೀಯ ಸ್ನೇಹಿತರೊಂದಿಗೆ ನೀವು ಜಗಳವಾಡುತ್ತೀರಿ, ನಿಮ್ಮ ಕುಟುಂಬವು ನಿಮ್ಮನ್ನು ಮನೆಯಿಂದ ಹೊರಹಾಕುತ್ತದೆ, ನೀವು ಗಳಿಸಿದ್ದೀರಿ ಎಂದು ನೀವು ಭಾವಿಸಿದ್ದನ್ನು ಕಳೆದುಕೊಳ್ಳುತ್ತೀರಿ... ಬಹಳ ಮಹತ್ವಾಕಾಂಕ್ಷೆಯೊಂದಿಗೆ ಮತ್ತು ಜ್ಞಾನದೆಡೆಗೆ ಹಾಗೂ ಯೋಗದೆಡೆಗೆ ದೀರ್ಘ ಕಾಲದ ಪ್ರಯತ್ನದ ನಂತರ ಭಾರತಕ್ಕೆ ಬಂದ ಒಬ್ಬ ವ್ಯಕ್ತಿಯು ನನಗೆ ಗೊತ್ತು. ಅದು ಬಹಳ ಹಿಂದಿನ ಸಂಗತಿ. ಆ ಸಮಯದಲ್ಲಿ, ಜನರು ಗಡಿಯಾರ–ಸರಪಳಿಗಳನ್ನು ಮತ್ತು ಚಿಕ್ಕ ಆಭರಣಗಳನ್ನು ಧರಿಸುತ್ತಿದ್ದರು. ಈ ಸಭ್ಯ ವ್ಯಕ್ತಿಯ ಹತ್ತಿರ ಆತನ ಅಜ್ಜಿ ಕೊಟ್ಟಿದ್ದ ಒಂದು ಚಿನ್ನದ ಪೆನ್ಸಿಲ್ ಇತ್ತು. ಅದನ್ನು ಅವನು ವಿಶ್ವದ ಅತ್ಯಂತ ಅಮೂಲ್ಯವಾದ ವಸ್ತುವೆಂಬಂತೆ ಅದಕ್ಕೆ ಅಂಟಿಕೊಂಡಿದ್ದನು. ಇದು ಅವನ ಸರಪಳಿಗೆ ಕಟ್ಟಲ್ಪಟ್ಟಿತ್ತು. ಆತ ಪಾಂಡಿಚೇರಿಯ ಬಂದರಿನಲ್ಲಿ ಅಥವಾ ಬಹುಶಃ ಭಾರತದ ಅಥವಾ ಕೊಲಂಬೊದ ಯಾವುದೋ ಒಂದು ಬಂದರಿನಲ್ಲಿ (ಕೊಲಂಬೊ ಬಂದರು ಎಂದು ನನ್ನ ಭಾವನೆ) ಬಂದಿಳಿದಾಗ, ಚಿಕ್ಕ ನಾವೆಗಳು ಆತನನ್ನು (ಮತ್ತು ಇತರೆ ಪ್ರಯಾಣಿಕರನ್ನು) ದಡಕ್ಕೆ ಕರೆದುಕೊಂಡು ಹೋಗುತ್ತಿದ್ದವು. ಆದ್ದರಿಂದ, ಈ ಸಜ್ಜನ ವ್ಯಕ್ತಿಯು ದೊಡ್ಡ ಹಡಗಿನಿಂದ ಈ ಚಿಕ್ಕ ನಾವೆಗೆ ಒಂದು ನಡುಸೇತುವೆಯ ಮುಖಾಂತರ ದಾಟಬೇಕಾಗಿತ್ತು (ಜಿಗಿಯಬೇಕಾಗಿತ್ತು). ಹಾಗೆ ಜಿಗಿಯುವಾಗ ಈತನ ಹೆಜ್ಜೆ ತಪ್ಪಿತು, ಹೇಗೋ ಸುಧಾರಿಸಿಕೊಂಡ, ಈ ಗಡಿಬಿಡಿಯಲ್ಲಿ ಆತನ ಚಿಕ್ಕ ಚಿನ್ನದ ಪೆನ್ಸಿಲ್ ಸಮುದ್ರದಲ್ಲಿ ಬಿದ್ದು ಆಳಕ್ಕೆ ಹೋಯಿತು. ಇದರಿಂದಾಗಿ, ಆತ ಮೊದಲು ತುಂಬಾ ನೊಂದುಕೊಂಡ, ಆದರೆ ನಂತರ ತನ್ನಷ್ಟಕ್ಕೆ ತಾನೇ ಹೀಗೆ ಹೇಳಿಕೊಂಡ: "ಇದು ಭಾರತದ ಪ್ರಭಾವ: ನಾನು ನನ್ನೆಲ್ಲ ಬಂಧನಗಳಿಂದ ಮುಕ್ತನಾಗಿದ್ದೇನೆ..." ವಿಷಯವು ಇಂತಹ ರೂಪವನ್ನು ಪಡೆದುಕೊಳ್ಳುವುದು ತುಂಬಾ ಪ್ರಾಮಾಣಿಕವಾದ ಜನರಿಗೆ ಮಾತ್ರ. ಮೂಲಭೂತವಾಗಿ, ತೊಂದರೆಗಳ ಹಿಮಪಾತವು ಯಾವಾಗಲೂ ಇರುವುದು ಪ್ರಾಮಾಣಿಕ ಜನರಿಗೆ. ಪ್ರಾಮಾಣಿಕರಲ್ಲದ ಜನರು, ಅತ್ಯಂತ ಸುಂದರವಾದ ಬಣ್ಣದೊಂದಿಗೆ ಬರುವಂಥ ಸಂಗತಿಗಳನ್ನು ಮೋಸಹೋಗಲು ಮತ್ತು ನಂತರ ಕೊನೆಯಲ್ಲಿ ತಪ್ಪು ಗ್ರಹಿಕೆಯಾಗಿದೆ ಎಂದು ಕಂಡುಕೊಳ್ಳಲು ಅವರಿಗೆ ಅನುವು ಮಾಡಲು ಸ್ವೀಕರಿಸುತ್ತಾರೆ! ಆದರೆ ಯಾರಿಗಾದರೂ ದೊಡ್ಡ ತೊಂದರೆಗಳು ಬಂದಾಗ, ಅವರು ಒಂದು ನಿರ್ದಿಷ್ಟ ಮಟ್ಟದ ಪ್ರಾಮಾಣಿಕತೆಯನ್ನು ತಲುಪಿದ್ದಾರೆ ಎನ್ನುವುದನ್ನು ಅದು ಸಾಬೀತುಪಡಿಸುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 5/155–58**

ಒಂದು ವೇಳೆ ಅವರಲ್ಲಿ ಕೊಂಚವಾದರೂ ಪ್ರಾಮಾಣಿಕತೆ ಇದ್ದರೆ – ಕೊಂಚ ಪ್ರಾಮಾಣಿಕತೆಯಾದರೂ ಇದ್ದರೆ, ಅದು ಅವರಿಗೆ (ಸಾಧನೆಯ ಪಥದಲ್ಲಿ) ವೇಗವಾಗಿ ಹೋಗುವಂತೆ ಮಾಡಲು ಅದು ನಮ್ಮನ್ನು ತಳ್ಳುವುದು ಖಂಡಿತವಾಗಿಯೂ ಸಾಧ್ಯ (ನಾನು ಕೊಂಚ ವಿನೋದ ಮಾಡುತ್ತಿದ್ದೇನೆ). ಇದು ಸಾಧ್ಯ. ವಾಸ್ತವವಾಗಿ, ಸಂಭವಿಸಬೇಕಾಗಿರುವುದು ಇದು ಎಂದು ನನಗನ್ನಿಸುತ್ತದೆ.

ಆದರೆ ನಿಜಕ್ಕೂ, ಹಣದಾಸೆಗಾಗಿ ಕೂಲಿ ಮಾಡುವಂಥ ಈ ಧೋರಣೆಯು... ಸಾಮಾನ್ಯವಾಗಿ ಹೆಚ್ಚು ಲಾಭದಾಯಕವಲ್ಲ. ಕಷ್ಟಗಳನ್ನು ಹೊಂದಿದ್ದರೆ ಮತ್ತು ಪ್ರಾಮಾಣಿಕವಾಗಿ ಆಶಿಸಿದರೆ, ಬಹುಶಃ ಈ ಕಷ್ಟಗಳು ಕಡಿಮೆಯಾಗುತ್ತವೆ. ಹಾಗಾಗಲೆಂದು ಆಶಿಸೋಣ.

(ಶ್ರೀಮಾತೆಯವರು ಶಿಷ್ಯನ ಕಡೆಗೆ ತಿರುಗಿ) ಆದ್ದರಿಂದ ನೀವು ಅವರಿಗೆ ಹೀಗೆ ಹೇಳಬಹುದು: ಪ್ರಾಮಾಣಿಕವಾಗಿರಿ ಮತ್ತು ನಿಮಗೆ ಸಹಾಯ ಲಭಿಸುವುದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 8/132–133 – ಶ್ರೀಮಾತೆ**

**ಪ್ರತಿಯೊಬ್ಬರಲ್ಲೂ ಹೆಣಗಾಟಗಳಿವೆ**

ಈ ಹೆಣಗಾಟಗಳು ಪ್ರತಿಯೊಬ್ಬರಲ್ಲೂ ಇವೆ; ನೀವು ಅವುಗಳನ್ನು ತಾಳಿಕೊಳ್ಳುವಿರಿ ಎನ್ನುವುದರಲ್ಲಿ ಯಾವುದೇ ಸಂದೇಹವಿಲ್ಲ – ಅವುಗಳನ್ನು ಜಯಿಸಲು ಬೇಕಾಗಿರುವುದೇನೆಂದರೆ, ಪ್ರಾಮಾಣಿಕತೆ ಹಾಗೂ ಪರಿಶ್ರಮ.

ಅನೇಕರು ಮಾಡುವಂತೆ, ಈ ಹೋರಾಟಗಳನ್ನು ಆಹ್ವಾನಿಸುವುದರಿಂದ ಯಾವುದೇ ಪ್ರಯೋಜನವಿಲ್ಲ, ಅಥವಾ ಹೋರಾಟವನ್ನು ಕೊನೆಗೊಳಿಸುವ ಸಲುವಾಗಿ ಅವುಗಳು ಬಂದಾಗ ಅವುಗಳನ್ನು ಸ್ವೀಕರಿಸುವುದರಿಂದ ಯಾವುದೇ ಪ್ರಯೋಜನವಿಲ್ಲ, ಏಕೆಂದರೆ ಅವುಗಳು ಮತ್ತೆ ತಿರುಗಿ ಬರುತ್ತವೆ. ಅವುಗಳನ್ನು ತಪ್ಪಿಸಲು ಸಾಧ್ಯವಾಗದಿದ್ದಾಗ ಅವುಗಳನ್ನು ಎದುರಿಸಲೇಬೇಕು – ಅವುಗಳಿಲ್ಲದೆ (ಹೆಣಗಾಟಗಳಿಲ್ಲದೆ) ನಾವಿರಲು ಸಾಧ್ಯವಿಲ್ಲ, ವಿಶೇಷವಾಗಿ ಆರಂಭಿಕ ಯೋಗದ ಭಾಗದಲ್ಲಿ; ಆದರೆ ನೀವು ಅವುಗಳನ್ನು ಸದ್ದಿಲ್ಲದೆ ತಪ್ಪಿಸಿಕೊಳ್ಳಲು ಸಾಧ್ಯವಾದರೆ, ಅದು ಪ್ರಗತಿ ಮಾಡಿದಂತೆ.

ನಿಜವಾದ ಚೈತ್ಯ ಸ್ಥಿತಿಯು ಸಾಮಾನ್ಯವಾಗುವವರೆಗೆ ಮತ್ತು ಹೋರಾಟವನ್ನು ತೊಡೆದುಹಾಕುವವರೆಗೆ ಅಥವಾ ಅದನ್ನು ಕಡಿಮೆ ಮಾಡುವವರೆಗೆ ಅದನ್ನು ಸದ್ದಿಲ್ಲದೆ ಮರಳಿ ಕರೆಯುವುದು ಮತ್ತು ಶಾಂತವಾಗಿರುವುದು ಪ್ರಗತಿಗೆ ಉತ್ತಮ ಮಾರ್ಗವಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 31/744–745**

ನಿಮ್ಮ ಮನಸ್ಸು ಮತ್ತು ಪ್ರಾಣ ಎರಡೂ ಪ್ರಾಮಾಣಿಕವಾಗಿರುವುದರಿಂದ ದಾಳಿಯು ಪ್ರಬಲವಾಗಿರುತ್ತದೆ ಮತ್ತು ಅದು ನಿಮಗೆ ಅಸಹಜವಾಗಿ ತೋರುತ್ತದೆ. ಈ ಮೊದಲು ಕಾಲಕಾಲಕ್ಕೆ ನೀವು ಸೋಲೊಪ್ಪಿಕೊಳ್ಳುವಂತೆ, ಬೇಕು ಎನ್ನುವ (ದೇಹದ) ಭಾಗವು ತೀವ್ರವಾಗಿ ಒತ್ತಾಯಿಸುವಂಥದ್ದಿರಲಿಲ್ಲ ಮತ್ತು ಅದು ಒತ್ತಾಯಿಸಿದಾಗ, ಉಳಿದ ಪ್ರಾಣಿಕ ಸ್ವಭಾವದಿಂದ ಅದು ತೀವ್ರವಾಗಿ ಅನುಭವಕ್ಕೆ ಬರಲಿಲ್ಲ. ಅದರಿಂದ ಸಂಪೂರ್ಣವಾಗಿ ಬೇರೆಯಾಗಿರುವುದು ನಿಮ್ಮ ಮಾನಸಿಕ, ಚೈತ್ಯ ಮತ್ತು ಉನ್ನತ ಪ್ರಾಣಿಕ ಜೀವಗಳು. ಬಯಕೆಯನ್ನು ಇನ್ನೂ ಉಳಿಸಿಕೊಳ್ಳುತ್ತಿರುವುದು ನಿಮ್ಮ ಭೌತಿಕ ಪ್ರಾಣ ಮತ್ತು ಬಯಕೆಯನ್ನು ಸಕ್ರಿಯಗೊಳಿಸಲು ವಿರುದ್ಧ ಶಕ್ತಿಗಳಿಂದ ಕಾಲಕಾಲಕ್ಕೆ ಅದು ತಳ್ಳಲ್ಪಡುತ್ತದೆ. ಈ ಬಯಕೆಯೇ, ಕೆಲವು ದಿನಗಳ ಹಿಂದೆ ನೀವು ಅನುಭವಿಸಿದಂಥ ದೈಹಿಕ ತೊಂದರೆಯನ್ನು ತಂದೊಡ್ಡಿತು. ಈ ನಿಮ್ಮ ಪ್ರಾಣಿಕ ಬಯಕೆಯನ್ನು ನೀವು ಸಂಪೂರ್ಣವಾಗಿ ತೊಡೆದುಹಾಕಬೇಕು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 31/263**

ಸಹಜ ಸ್ವಭಾವದಲ್ಲಿ ಗೆಲ್ಲಬೇಕಾಗಿದ್ದು ಏನಾದರು ಇದ್ದಾಗ, ಸಾಧಕನು ಜಯಿಸಿ ಮುಕ್ತನಾಗುವವರೆಗೆ ಅದನ್ನು ಪರೀಕ್ಷೆಗೆ ಒಡ್ಡುವಂಥ ಘಟನೆಗಳನ್ನು ಅದು ಯಾವಾಗಲೂ ತನ್ನ ಮೇಲೆ ಎಳೆದುಕೊಳ್ಳುತ್ತಿರುತ್ತದೆ. ವಿಶೇಷವಾಗಿ, ಒಬ್ಬ ವ್ಯಕ್ತಿಯು ಜಯಿಸಲು ಕನಿಷ್ಠ ಒಂದು ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತಲಿದ್ದರೆ, ಆಗಾಗ್ಗೆ ಸಂಭವಿಸುವಂಥ ಸಂಗತಿಯು ಇದಾಗಿದೆ. ನಮ್ಮ ದೃಢ ಸಂಕಲ್ಪವನ್ನು ದುರ್ಬಲ ಮಾಡಲು ಪ್ರಯತ್ನಿಸುವ ಅಥವಾ ಅದನ್ನು ಪರೀಕ್ಷೆಗೆ ಒಡ್ಡುವಂಥವು ಅಹಿತಕರ ಶಕ್ತಿಗಳೋ (ಯಾಕೆಂದರೆ ಅವುಗಳು ಅದನ್ನು ಮಾಡುವ ಹಕ್ಕನ್ನು ಹೊಂದಿವೆ) ಅಥವಾ ಪ್ರಗತಿಯನ್ನು ತ್ವರಿತಗೊಳಿಸಲು ಹಾಗೂ ಒತ್ತಡ ಹಾಕಲು ಅಥವಾ ಬಯಸಿದ ಬದಲಾವಣೆಯ ನೈಜತೆಗಾಗಿ ಮತ್ತು ಅಮೂಲಾಗ್ರತೆಗಾಗಿ ಆಗ್ರಹಿಸಲು ಇದನ್ನು ಮಾಡುವಂಥವರು ದೇವತೆಗಳೋ ಎನ್ನುವುದು ನಮಗೆ ತಿಳಿದಿಲ್ಲ. ನಂತರದ (ಎರಡನೆಯ) ದೃಷ್ಟಿಕೋನದಿಂದ ನಾವು ಅದನ್ನು ಪರಿಗಣಿಸಬಹುದಾದಾಗ ಅದು ಹೆಚ್ಚು ಸಹಾಯ ಮಾಡುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 31/653 – ಶ್ರೀ ಅರವಿಂದರು**

**ಚಿಂತೆಗೀಡಾದವರು, ದುಃಖಕ್ಕೀಡಾದವರು ಅಥವಾ ಎದೆಗುಂದಿದವರು**

ಮೊದಲ ಶ್ಲೋಕವು ಕೊಂಚ ವಿವೇಕದ ಸಲಹೆಯನ್ನು ನೀಡುತ್ತದೆ: ಚೆನ್ನಾಗಿ ಪಳಗಿಸಿದ ಯುದ್ಧದಾನೆ, ಯುದ್ಧದಲ್ಲಿ ಅದಕ್ಕೆ ಬಾಣವು ತಗುಲಿದಾಕ್ಷಣ ಅದು ಓಡಿಹೋಗಲು ಪ್ರಾರಂಭಿಸುವುದಿಲ್ಲ. ವೀರೋಚಿತ ಪ್ರತಿರೋಧದ ತನ್ನ ವರ್ತನೆಯಲ್ಲಿ ಯಾವುದೇ ಬದಲಾವಣೆಯಿಲ್ಲದೆ ಆ ಆನೆಯು ಬಾಣದ ನೋವನ್ನು ಸಹಿಸಿಕೊಳ್ಳುತ್ತದೆ ಮತ್ತು ಮುನ್ನುಗ್ಗುತ್ತದೆ. ಸತ್ಯ ಮಾರ್ಗವನ್ನು ಅನುಸರಿಸಲು ಬಯಸುವವರು ಸ್ವಾಭಾವಿಕವಾಗಿ ಎಲ್ಲಾ ರೀತಿಯ (ಅರ್ಥಮಾಡಿಕೊಳ್ಳದಂಥ ಆದರೆ ಸಾಮಾನ್ಯವಾಗಿ ಅರ್ಥಮಾಡಿಕೊಳ್ಳದನ್ನು ದ್ವೇಷಿಸುವಂಥ) ಕೆಟ್ಟ ಇಚ್ಛೆಯ ದಾಳಿಗಳನ್ನು ಎದುರಿಸಬೇಕಾಗುತ್ತದೆ.

ಜನರು ನಿಮ್ಮ ಬಗ್ಗೆ ಹೇಳುವ ದುರುದ್ದೇಶಪೂರಿತ ಮೂರ್ಖತನಗಳಿಂದ ನೀವು ಚಿಂತೆಗೀಡಾಗಿದ್ದರೆ, ದುಃಖಿತರಾಗಿದ್ದರೆ ಅಥವಾ ನಿರುತ್ಸಾಹಗೊಂಡಿದ್ದರೆ, ನೀವು ಈ ಪಥದಲ್ಲಿ ಹೆಚ್ಚು ಮುಂದೆ ಹೋಗಲಾರಿರಿ. ನೀವು ದುರದೃಷ್ಟರು ಅಥವಾ ನೀವು ಸಂತೋಷವಾಗಿಲ್ಲ ಎನ್ನುವ ಕಾರಣದಿಂದ ಇಂತಹ ಸಂಗತಿಗಳು ನಿಮ್ಮ ಬಳಿಗೆ ಬರುವುದಿಲ್ಲ. ಆದರೆ ಇದಕ್ಕೆ ವ್ಯತಿರಿಕ್ತವಾಗಿ, ದೈವೀ ಪ್ರಜ್ಞೆ ಮತ್ತು ದೈವೀ ಅನುಗ್ರಹವು ನಿಮ್ಮ ನಿರ್ಣಯವನ್ನು ಗಂಭೀರವಾಗಿ ಪರಿಗಣಿಸುತ್ತದೆ ಮತ್ತು ನಿಮ್ಮ ನಿರ್ಣಯವು ಪ್ರಾಮಾಣಿಕವಾಗಿದೆಯೇ ಮತ್ತು ನಿಮ್ಮ ಪಥದಲ್ಲಿ ಬರುವ ತೊಂದರೆಗಳನ್ನು ಎದುರಿಸಲು ನೀವು ಸಾಕಷ್ಟು ಸಮರ್ಥರಾಗಿದ್ದೀರಾ ಎನ್ನುವುದನ್ನು ಅಳೆಯಲು ಮಾನದಂಡಗಳಾಗಲು ಅನುವು ಮಾಡಿಕೊಡುತ್ತದೆ. ಆದ್ದರಿಂದ, ಯಾರಾದರೂ ನಿಮ್ಮನ್ನು ಹೀಯಾಳಿಸಿದರೆ ಅಥವಾ ಹೆಚ್ಚು ಉದಾರವಲ್ಲದ್ದನ್ನು ಹೇಳಿದರೆ, ನೀವು ಮಾಡಬೇಕಾದ ಮೊದಲ ಕೆಲಸವೆಂದರೆ, ಯಾವುದೇ ದೌರ್ಬಲ್ಯ ಅಥವಾ ಅಪೂರ್ಣತೆಯು ಅಂತಹ ಒಂದು ವಿಷಯವು ಸಂಭವಿಸಲು ಅವಕಾಶ ಮಾಡಿಕೊಟ್ಟಿದೆ ಎನ್ನುವುದನ್ನು ನಿಮ್ಮಂತರಂಗದಲ್ಲಿ ಶೋಧಿಸಿ. ಇದರಿಂದ ನೀವು ಅಸಮಾಧಾನಗೊಳ್ಳಬೇಡಿ, ಕೋಪಗೊಳ್ಳಬೇಡಿ ಅಥವಾ ಬಾಧೆಗೊಳಗಾಗಬೇಡಿ. ಏಕೆಂದರೆ, ನಿಮ್ಮ ನಿಜವಾದ ಮೌಲ್ಯ ಎಂದು ನೀವು ಯಾವುದನ್ನು ಭಾವಿಸಿರುವಿರೋ, ಜನರು ಅದರ ಬಗ್ಗೆ ನಿಮ್ಮನ್ನು ಪ್ರಶಂಸಿಸುವುದಿಲ್ಲ; ಇದಕ್ಕೆ ವ್ಯತಿರಿಕ್ತವಾಗಿ, ನೀವು ಸರಿಪಡಿಸಿಕೊಳ್ಳಬೇಕಾದ ನಿಮ್ಮ ದೌರ್ಬಲ್ಯದ ಬಗ್ಗೆ ಅಥವಾ ಅಪೂರ್ಣತೆಯ ಬಗ್ಗೆ ಅಥವಾ ನಿಮ್ಮ ಕೊಂಕುಗಳ ಬಗ್ಗೆ ನಿಮಗೆ ಅವರು ತಿಳಿಸಿದ್ದಕ್ಕಾಗಿ ನೀವು ದೈವೀ ಕೃಪೆಗೆ ಕೃತಜ್ಞರಾಗಿರಬೇಕು. ಆದ್ದರಿಂದ, ನೀವು ಅತೃಪ್ತರಾಗುವ ಬದಲು, ನಿಮ್ಮ ವಿರುದ್ಧ ಉದ್ದೇಶಿಸಿರುವ

ಹಾನಿಯಿಂದ ಹೆಚ್ಚಿನ ಪ್ರಯೋಜನವನ್ನು ಪಡೆಯಬಹುದು ಮತ್ತು ನೀವು ಸಂಪೂರ್ಣವಾಗಿ ತೃಪ್ತರಾಗಬಹುದು.

ಇದಲ್ಲದೆ, ನೀವು ನಿಜವಾಗಿಯೂ ಈ ಮಾರ್ಗವನ್ನು ಅನುಸರಿಸಲು ಮತ್ತು ಯೋಗಾಭ್ಯಾಸವನ್ನು ಮಾಡಲು ಬಯಸಿದರೆ, ನೀವು ಅದನ್ನು ಮೆಚ್ಚುಗೆಗಾಗಿ ಅಥವಾ ಗೌರವಕ್ಕಾಗಿ ಮಾಡಬಾರದು. ಅದು ನಿಮ್ಮ ಅಸ್ತಿತ್ವಕ್ಕೆ ಅನಿವಾರ್ಯಗಿದೆ ಮತ್ತು ಅವಶ್ಯಕವಾಗಿದೆ ಎಂದು ಮಾಡಬೇಕು ಮತ್ತು ನೀವು ಬೇರೆ ಯಾವುದೇ ರೀತಿಯಲ್ಲಿ ಸಂತೋಷವಾಗಿರಲು ಸಾಧ್ಯವಿಲ್ಲದ ಕಾರಣಕ್ಕಾಗಿ ಇದನ್ನು ಮಾಡಬೇಕು. ಜನರು ನಿಮ್ಮನ್ನು ಪ್ರಶಂಸಿತ್ತಾರೋ ಅಥವಾ ನಿಮ್ಮನ್ನು ಪ್ರಶಂಸಿಸುವುದಿಲ್ಲವೋ ಎನ್ನುವುದು ಮಹತ್ವದ ಸಂಗತಿಯಲ್ಲ. ಸಾಮಾನ್ಯ ಜನರಿಂದ ನೀವು ಎಷ್ಟು ಮುಂದೆ ಇರುತ್ತೀರೋ, ಸಾಮಾನ್ಯವಾದ ಇರುವಿಕೆಯ ವಿಧಾನಕ್ಕೆ ನೀವು ಎಷ್ಟು ಪರಕೀಯರಾಗಿರುತ್ತೀರೋ, ಅಷ್ಟು ಕಡಿಮೆ ಜನರು ನಿಮ್ಮನ್ನು ಹೊಗಳುತ್ತಾರೆ. ಏಕೆಂದರೆ ಸ್ವಾಭಾವಿಕವಾಗಿ ಅವರು ನಿಮ್ಮನ್ನು ಅರ್ಥಮಾಡಿಕೊಳ್ಳುವುದಿಲ್ಲ. ಅದು ಯಾವುದೇ ಮಹತ್ವವನ್ನು ಹೊಂದಿಲ್ಲವೆಂದು ನಾನು ಮತ್ತೇ ಹೇಳುತ್ತೇನೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/280–283 – ಶ್ರೀಮಾತೆ**

## ಅನಿಷ್ಠೆಯ (ಅವಿಧೇಯತೆಯ) ಛಾಯೆಗಳು

**– ಅನು: ಶ್ರೀ ಕಿಶೋರಕುಮಾರ ಕಾಸಾರ, ಕಲಬುರ್ಗಿ**

**ಸೂತ್ರಗಳು**

*ಪ್ರಶ್ನೆ: ನನಗೆ ದಿವ್ಯತೆಯು ಬೇಕು. ಅದರ ಹೊರತಾಗಿ ಬೇರಾವ ದ್ರವ್ಯವೂ ಬೇಡವೆಂದು ನಾನು ಪ್ರಮಾಣಿಕವಾಗಿ ಬಯಸುತ್ತೇನೆ. ಆದರೆ ನಾನು ಇತರ ಜನಗಳೊಂದಿಗೆ ಬೆರೆತು ಮೌಲ್ಯವಿಲ್ಲದ ವಿಷಯಗಳಲ್ಲಿ ನನ್ನನ್ನು ನಾನು ತೊಡಗಿಸಿಕೊಂಡಾಗ ನಾನು ಸಹಜವಾಗಿಯೇ ನನ್ನ ಏಕಮಾತ್ರ ಗುರಿಯಾದ ದಿವ್ಯತೆಯ ಅಭೀಪ್ಸೆಯನ್ನು ಮರೆತೇ ಬಿಡುತ್ತೇನೆ. ಇದು ನನ್ನಲ್ಲಿರುವ ಅಪ್ರಾಮಾಣಿಕತೆಯ ಕರಾಳ ಛಾಯೆಯ ಸಂಕೇತವೇ? ಒಂದು ವೇಳೆ ಇಲ್ಲವಾದರೆ ಇದರ ಅರ್ಥವೇನು?*

ಹೌದು ಇದು ಮರ್ತ್ಯರಲ್ಲಿ ಸಹಜವಾಗಿಯೇ ಇರುವ ಅಪ್ರಾಮಾಣಿಕತೆಯ ಸಂಕೇತವಾಗಿದೆ. ಇದರಲ್ಲಿ ಒಂದು ಭಾಗವು ದಿವ್ಯತೆಯನ್ನು ಬಯಸಿದರೆ, ಇನ್ನೊಂದು ಭಾಗವು ಬೇರೆಯದನ್ನೇ ಪಡೆಯಲೆಂದು ಹಾತೊರೆಯುತ್ತಿರುತ್ತದೆ.

ತನ್ನೊಳಗಿರುವ ಅಜ್ಞಾನ ಮತ್ತು ಮೂರ್ಖತನದ ಮೂಲಕವೇ ಮರ್ತ್ಯನು ಅಪ್ರಾಮಾಣಿಕನಾಗುತ್ತಾನೆ. ಆದರೆ ಅದೇ ಮಾನವನು ಇಚ್ಛೆ, ನಿರಂತರ ಪ್ರಯತ್ನ ಮತ್ತು ದೈವೀಕತೆಯಲ್ಲಿ ಸಂಪೂರ್ಣ ವಿಶ್ವಾಸವಿಟ್ಟದ್ದೇ ಆದಲ್ಲಿ ಅವನು ತನ್ನಲ್ಲಿ ಅಡಗಿರುವ ಆ ಅಪ್ರಾಮಾಣಿಕತೆಯ ಕರಾಳ ಛಾಯೆಯನ್ನು ಗುಣಪಡಿಸಬಹುದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/68**

*ಪ್ರಶ್ನೆ: ಶ್ರೀ ಅರವಿಂದರು ಒಂದು ಪತ್ರದಲ್ಲಿ ಹೀಗೆ ಬರೆಯುತ್ತಾರೆ: "ನಾವು ಸರಿಯಾಗಿ ಸಲ್ಲಿಸಿದ ನಮ್ಮೆಲ್ಲಾ ಪ್ರಾರ್ಥನೆಗಳು ನಮ್ಮನ್ನು ದೈವೀಕತೆಯ ಹತ್ತಿರಕ್ಕೆ ಕರೆದುಕೊಂಡು ಹೋಗಿ ಅದರೊಂದಿಗೆ ಸಂಬಂಧವನ್ನು ಕಲ್ಪಿಸುತ್ತದೆ."*

*ಆದರೆ ಈ ಪತ್ರದಲ್ಲಿ ಶ್ರೀ ಅರವಿಂದರು ಹೇಳಿದ "ಸರಿಯಾಗಿ ಸಲ್ಲಿಸಿದ" ಎಂದರೆ ಏನು? ಇದನ್ನು ದಯವಿಟ್ಟು ಸ್ಪಷ್ಟಪಡಿಸಿರಿ.*

ನಮ್ರತೆ ಮತ್ತು ಪ್ರಾಮಾಣಿಕತೆಯಿಂದ,

ಕೇವಲ ಮೌಲ್ಯಗಳನ್ನು ಪಡೆದುಕೊಳ್ಳಲೆಂಬ ಚೌಕಾಸಿ ಮನೋಭಾವನೆಯಿಂದಲೇ ಪ್ರಾರ್ಥನೆಯನ್ನು ಸಲ್ಲಿಸುವ ಪ್ರಮೇಯವು ಅಪ್ರಾಮಾಣಿಕತೆಯ ಲಕ್ಷಣವಾಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 15/209**

ಎಲ್ಲಿಯವರೆಗೆ ಒಬ್ಬ ವ್ಯಕ್ತಿಯಲ್ಲಿ ಆಂತರಿಕ ಸಂಘರ್ಷವು ನಡೆದಿರುತ್ತದೆಯೋ, ಅಲ್ಲಿಯವರೆಗೂ ಅವನಲ್ಲಿ ಅಪ್ರಾಮಾಣಿಕತೆಯು ಮನೆ ಮಾಡಿಕೊಂಡಿರುತ್ತದೆ.

*

ಜೀವಿಯೊಳಗಿನ ಎಲ್ಲಾ ವಿಭಜನೆಗಳೂ ಅಪ್ರಾಮಾಣಿಕವಾಗಿಯೇ ಇರುತ್ತವೆ.

ನಿಮ್ಮ ಸ್ಥೂಲದೇಹ ಮತ್ತು ನಿಮ್ಮ ಅಸ್ತಿತ್ವದ ಸತ್ಯಾಸತ್ಯೆಯ ನಡುವೆ ಬಿರುಕನ್ನು ಮೂಡಿಸುವ ಪ್ರಮೇಯವೇ ದೊಡ್ಡ ಅಪ್ರಾಮಾಣಿತೆಯ ಸಂಕೇತವಾಗಿದೆ.

ಆ ಬಿರುಕು ನೈಜ ಅಸ್ತಿತ್ವವನ್ನು ಭೌತಿಕ ಅಸ್ತಿತ್ವದಿಂದ ಪ್ರತ್ಯೇಕಿಸಿದಾಗ, ಸುತ್ತಲಿನ ಪ್ರಕೃತಿಯು ಎಲ್ಲಾ ರೀತಿಯ ಪ್ರತಿಕೂಲ ಸಲಹೆಗಳಿಂದ ಆ ಬಿರುಕನ್ನು ಮತ್ತೆ ತುಂಬಿಸುತ್ತದೆ. ಅವುಗಳಲ್ಲಿ ಅತ್ಯಂತ ಭೀಕರವಾದದ್ದು ಭಯವಾದರೆ, ಅತ್ಯಂತ ವಿನಾಶಕಾರಿಯಾದದ್ದು ಅನುಮಾನ.

*

### ಮೋಸಗೊಳಿಸುವ ಅಭ್ಯಾಸಗಳು

ಹಲವಾರು ಜನರು ತಮಗೆ ತಾವೇ ಮೋಸ ಮಾಡಿಕೊಳ್ಳುವ ಅಭ್ಯಾಸವನ್ನು ಹೊಂದಿರುತ್ತಾರೆ. ಅವರು ನೂರಾರು ರೀತಿಯ ವಿಧದಲ್ಲಿ ತಮಗೆ ತಾವೇ ಮೋಸ ಮಾಡಿಕೊಳ್ಳುತ್ತಾರೆ. ಒಬ್ಬರು ಬೇರೆಯವರಿಗೆ ಮಾಡುವ ಮೋಸಕ್ಕಿಂತಲೂ ತನ್ನ ಮೇಲೆ ತಾನೇ ಮಾಡಿಕೊಳ್ಳುವ ಮೋಸವೇ ಹೆಚ್ಚು ಸೂಕ್ಷ್ಮವಾಗಿರುತ್ತದೆ. ಇದು ಪರಿಪೂರ್ಣವಾದ ಪ್ರಾಮಾಣಿಕತೆ ಮತ್ತು ಪರಿಪೂರ್ಣವಾದ ಅಪ್ರಾಮಾಣಿಕತೆಯನ್ನು ಒಟ್ಟಿಗೆ ತೋರಿಸುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/68–70**

ಪ್ರತಿಯೋರ್ವರೂ ಸಂಪೂರ್ಣವಾಗಿ ಪಾರದರ್ಶಕವಾದ ಪ್ರಾಮಾಣಿಕತೆಯನ್ನು ಹೊಂದಿರಬೇಕು. ಪ್ರಸ್ತುತ ದಿನಮಾನದಲ್ಲಿ ನಾವು ಎದುರಿಸುತ್ತಿರುವ ಎಲ್ಲಾ ಕಷ್ಟಗಳಿಗೂ ನಮ್ಮಲ್ಲಿರುವ ಪ್ರಾಮಾಣಿಕತೆಯ ಕೊರತೆಯೇ ಕಾರಣವಾಗಿದೆ. ಈ ಅಪ್ರಾಮಾಣಿಕತೆ–ಯೆಂಬುದು ಪ್ರತಿಯೋರ್ವರಲ್ಲೂ ಇದೆ. ಮನುಷ್ಯನ ಸಹಜ ಸ್ವಭಾವವೇ ಅವನನ್ನು ಅಪ್ರಾಮಾಣಿಕವಾಗಿಸಿದೆ. ಇದು ಬಹಳ ಜಟಿಲವಾದ ವಿಷಯವಾಗಿದೆ. ಏಕೆಂದರೆ, ಅವನು ನಿರಂತರವಾಗಿ ತನಗೆ ತಾನೇ ಮೋಸಗೊಳಿಸಿಕೊಳ್ಳುತ್ತಾನೆ, ತನ್ನಿಂದ ಸತ್ಯವನ್ನು ಮರೆಮಾಚುತ್ತಾನೆ, ತನಗೆ ತಾನೇ ಕ್ಷಮೆ ಕೇಳಿಕೊಳ್ಳುತ್ತಾನೆ...

ಪ್ರಾಮಾಣಿಕವಾಗಿ ಬದುಕುವುದು ಕಷ್ಟ. ಆದರೆ ಕನಿಷ್ಟ ಪಕ್ಷ ಮಾನಸಿಕ–ವಾಗಿಯಾದರೂ ನಾವು ಪ್ರಾಮಾಣಿಕರಾಗಿರಬೇಕು. ಇದುವೇ ಅರೋವಿಲ್ಲಿಯನ್ನರ ಬೇಡಿಕೆಯಾಗಿದೆ. ಅದನ್ನು ಕಾರ್ಯರೂಪಕ್ಕೆ ತರುವ ಶಕ್ತಿಯು ಅಲ್ಲಿ ನೆಲೆಸಿದೆ. ಅದು ಈ ಹಿಂದಿಗಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಅಲ್ಲಿ ಅಸ್ತಿತ್ವದಲ್ಲಿದೆ. ಮನುಷ್ಯನಲ್ಲಿರುವ ಅಪ್ರಾಮಾಣಿಕತೆಯು ಅವನನ್ನು ಅವರೋಹಣದಿಂದ, ಕೆಳಗೆ ಬೀಳುವದರಿಂದ ತಡೆಯುತ್ತದೆ. ಇಡೀ ಪ್ರಪಂಚವೇ ಸುಳ್ಳಿನಲ್ಲಿ ಬದುಕುತ್ತಿದೆ. ಇಲ್ಲಿಯವರೆಗೆ ಮನುಷ್ಯ–ಮನುಷ್ಯರ ನಡುವೆ ಬೆಳೆದ ಸಂಬಂಧಗಳೆಲ್ಲವೂ ಸುಳ್ಳು ಮತ್ತು ಮೋಸದಿಂದಲೇ ಕೂಡಿವೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/268**

### ಅಪ್ರಾಮಾಣಿಕತೆಯನ್ನು ಗುರುತಿಸುವುದು

ಅಪ್ರಾಮಾಣಿಕತೆಯು ಗುಣಪಡಿಸಲು ಸಾಧ್ಯವಾಗದ ದೋಷವಾಗಿದೆ. ಇದು ಮರ್ತ್ಯದ ಮೇಲೆ ದಿವ್ಯತೆಯು ತೋರುವ ಅನುಗ್ರಹದ ಕಾರ್ಯವನ್ನು

ತಡೆಯುತ್ತದೆ. ಈ ಅಪ್ರಾಮಾಣಿಕತೆಯ ಕಾರಣದಿಂದಲೇ ಒಂದೊಮ್ಮೆ ಈ ಜಗತ್ತು ಕಾಳಿಯ ಹಿಂಸಾತ್ಮಕವಾದ ಹಸ್ತಕ್ಷೇಪವನ್ನು ಅನುಭವಿಸಿದೆ.

ನಾನು ಅಪ್ರಾಮಾಣಿಕನಾದ ವ್ಯಕ್ತಿಗೆ ನನ್ನ ಆದೇಶವನ್ನು ಪಾಲಿಸುವಂತೆ ಸೂಚಿಸಲು ಸಾಧ್ಯವಿಲ್ಲ. ಏಕೆಂದರೆ, ಇದರಿಂದ ಅವನು ನನ್ನೊಡನೆ ಕಟುವಾಗಿ ಪ್ರತಿಕ್ರಯಿಸಲು ಆರಂಭಿಸುತ್ತಾನೆ. ಆಗ ಅವನ ಅಪ್ರಾಮಾಣಿಕ ನಡತೆಯು ಇನ್ನಷ್ಟು ಹೆಚ್ಚುತ್ತದೆ. ಅವನನ್ನು ಮುತ್ತಿದ ಕರಾಳ ಛಾಯೆಯು ಇನ್ನಷ್ಟು ಗಾಢವಾಗುತ್ತಾ ಸಾಗುತ್ತದೆ. ಹಾಗಾಗಿ ಅಪ್ರಾಮಾಣಿಕನಾದ ವ್ಯಕ್ತಿಯೊಂದಿಗೆ ಸಂವಹನ ಮಾಡುವ ಬದಲು ಅವನು ಹೇಗಿರುವನೋ ಹಾಗೆಯೇ ಸ್ವೀಕರಿಸುವುದು ಒಳಿತು.

ಆಶೀರ್ವಾದಗಳು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 17/343**

ಒಂದು ವೇಳೆ ನಿಮಗೆ ನಿಮ್ಮಲ್ಲಿ ಏನಾದರೂ ಒಂದು ತಪ್ಪು ಕಂಡುಬಂದರೆ ಅದು ನಿಮಗೆ ಒಂದು ನಿಧಿಯನ್ನು ತೋರಿಸಿದಂತಾಗುತ್ತದೆ. ಏಕೆಂದರೆ, ಪ್ರತಿ ಬಾರಿಯೂ ನಿಮ್ಮಲ್ಲಿರುವ ದೋಷ, ಅಸಾಮರ್ಥ್ಯ, ಪ್ರಜ್ಞೆಯ ಕೊರತೆ, ದೌರ್ಬಲ್ಯ, ಅಪ್ರಾಮಾಣಿಕತೆ, ಪ್ರಗತಿಯನ್ನು ತಡೆಯುವ ಮಂದಗತಿ ಮುಂತಾದ ತಪ್ಪುಗಳು ಕಂಡುಬಂದಾಗ ನೀವು ಅದ್ಭುತವಾದ ನಿಧಿಯನ್ನು ಕಂಡುಕೊಂಡಂತೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/220–221**

*ಪ್ರಶ್ನೆ: ನಾನು ನನ್ನೆಲ್ಲಾ ಕಷ್ಟಗಳನ್ನು ಎದುರಿಸಿ ಮುನ್ನುಗ್ಗಲು ಪ್ರಯತ್ನಿಸುತ್ತೇನೆ. ಹಲವಾರು ಬಾರಿ ನಾನು ನನ್ನಲ್ಲಿರುವ ದೋಷ–ದೌರ್ಬಲ್ಯಗಳನ್ನು ಅರಿತುಕೊಳ್ಳಲು ಪ್ರಯತ್ನಿಸುತ್ತಿರುವಾಗ ಅದಾವುದೋ ಒಂದು ನನ್ನನ್ನು ಆ ದೋಷಗಳನ್ನು ಸಮರ್ಥಿಸುವಂತೆಯೂ, ಅವುಗಳನ್ನು ಅರಿತುಕೊಳ್ಳ–ದಂತೆಯೂ ತಡೆಯಲು ಪ್ರಯತ್ನಿಸುತ್ತಿರುತ್ತದೆ.*

ಆ "ಅದಾವುದೋ ಒಂದು" ಎಂಬುದೇ ಓರ್ವ ಅಜ್ಞಾನಿ–ಸ್ವಾಭಿಮಾನಿ ವ್ಯಕ್ತಿಯೊಳಗಿರುವ ಅಪ್ರಾಮಾಣಿಕತೆಯಾಗಿದೆ. ಅದು ಅವರಲ್ಲಿರುವ ತಪ್ಪುಗಳನ್ನು ಗಮನಿಸುವದಿಲ್ಲ. ಮತ್ತು ಅಂತಹ ದೋಷಗಳನ್ನು ಮರೆಮಾಚುವದಕ್ಕಿಂತ ಅವುಗಳನ್ನು ಗುಣಪಡಿಸುವುದೇ ಉತ್ತಮ ಕಾರ್ಯ ಎಂಬುದನ್ನು ಅರ್ಥಮಾಡಿಕೊಳ್ಳುವದಿಲ್ಲ.

ನಾವು ಅನುಭವಿಸುತ್ತಿರುವ ಎಲ್ಲಾ ಮಾನಸಿಕ ಸಮಸ್ಯೆಗಳಿಗೆ ಸಂಪೂರ್ಣವಲ್ಲದಿದ್ದರೂ ಹೊಂದಿಕೊಳ್ಳಲಸಾಧ್ಯವಾದ ಪ್ರಾಮಾಣಿಕತೆಯಾದರೂ ಅವಶ್ಯಕವಾಗಿದೆ. ಇದುವೇ ಅದಕ್ಕೆ ಪರಿಹಾರವಾಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 16/364 – ಶ್ರೀಮಾತೆ**

ಅಪ್ರಾಮಾಣಿಕತೆಯೆಂದರೆ, ಮರ್ತ್ಯನು ಅತ್ಯುಚ್ಚ ಪ್ರಕಾಶದ ನೆಲೆಯಲ್ಲಿ ಬದುಕಲು ಅಥವಾ ಅವನ ಬಾಹ್ಯ ಪ್ರಜ್ಞೆಯು ಅವನ ಆಂತರಿಕ ಪ್ರಜ್ಞೆಯೊಂದಿಗೆ ಬೆರೆಯುವದನ್ನು ತಡೆಯಲು ಪ್ರಯತ್ನಿಸುತಿರುವ ಅವನಲ್ಲೇ ನೆಲೆಸಿರುವ ಅವನ ಒಂದಂಶವೇ ಆಗಿದೆ. ಹೀಗೆ ಮರ್ತ್ಯನ ಬಾಹ್ಯವನ್ನು ಅವನದೇ ಆಂತರ್ಯದೊಡನೆ ಸಮೀಕರಣಗೊಳ್ಳಲು ಬಿಡುತ್ತಿಲ್ಲವೆಂದರೆ ಅದು ಅಪ್ರಾಮಾಣಿಕತೆಯ ಲಕ್ಷಣವೇ ಆಗಿದೆ. ಅದನ್ನು ತೊಡೆದುಹಾಕಲು ಇರುವ ಏಕೈಕ ಮಾರ್ಗವೆಂದರೆ, ಮರ್ತ್ಯನ ಆಂತರ್ಯದ ಮೇಲೆ ಒತ್ತಡವನ್ನು ಹೇರಿ ಅದರಲ್ಲಿ ಅತೀಂದ್ರಿಯ ಮತ್ತು ಆಧ್ಯಾತ್ಮಿಕ ಪ್ರಜ್ಞೆಯನ್ನು ಬೆಳೆಸುವುದು. ಇದರಿಂದ ಅವನ ಬಾಹ್ಯತೆಯನ್ನು ಕವಿದಿರುವ ಕತ್ತಲೆಯು ಕಳೆದು ಬೆಳಕು ಮೂಡುವದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/52**

**ಅಪ್ರಾಮಾಣಿಕತನ ಮತ್ತು ಅವಿವೇಕತನ**

ಯಾರು ಅವಿವೇಕತನದಿಂದ ಕೂಡಿರುತ್ತಾರೋ ಅವರು ಸತ್ಯದ ಸಂಸ್ಪರ್ಶವನ್ನು ಕಳೆದುಕೊಂಡು ದೋಷಯುತ ಸಂಪರ್ಕಕ್ಕೆ ಬಂದಿರುತ್ತಾರೆ. ಸಾಧಕನು ಸಾಗುವ ಮಾರ್ಗದಲ್ಲಿ ಎದುರಾಗುವ ಅಶುದ್ಧತೆ ಮತ್ತು ಆಧ್ಯಾತ್ಮಿಕತೆಯ ಕಿಂಚಿತ್ ಅಂಶವಿಲ್ಲದ ಬಯಕೆಗಳು ಅವನನ್ನು ಅಪ್ರಾಮಾಣಿಕತೆ, ಅಹಮಿಕೆ ಮತ್ತು ಅನೃತದ ವರ್ತನೆಯೆಡೆಗೆ ಕೊಂಡೊಯ್ಯುತ್ತದೆ. ಹೀಗೆ ಅವನ ಮೆದುಳಿನ ನರ ಮಂಡಲದಲ್ಲಿ ಸ್ಥಾಪಿತವಾಗುವ ಇಂತಹ ದೌರ್ಬಲ್ಯಗಳು ಉನ್ನತ ಶಕ್ತಿಗಳ ಆಗಮನವನ್ನು ತಡೆದು ಆ ಸಾಧಕನನ್ನು ಸದಾ ಅಪ್ರಾಮಾಣಕತೆಯ ಸುಳಿಯೊಳಗೇ ಸುತ್ತುವಂತೆ ಗೈಯುತ್ತದೆ.

ಹಾಗಾಗಿ ದಾರ್ಶನಿಕರು ಈಗಾಗಲೇ ಹಾಕಿಕೊಟ್ಟ ಮಾರ್ಗದಲ್ಲಿ ನಡೆದು ಅದರ ಮಾರ್ಗದರ್ಶನದಂತೆಯೇ ಸಾಧನೆಯಲ್ಲಿ ತೊಡಗುವುದೇ ಸುರಕ್ಷಿತ

ಕ್ರಮವಾಗಿದೆ. ಆದರೆ ಈ ಮಾರ್ಗದರ್ಶವನ್ನು ಸೂಚ್ಯವಾಗಿ ಮತ್ತು ಪ್ರಾಮಾಣಿಕವಾಗಿ ಅನುಸರಿಸುವುದು ಮುಖ್ಯವಾಗಿರುತ್ತದೆ. ಈ ಹಂತದಲ್ಲಿ ಬೇರೊಬ್ಬರ ಮನೋಗತಗಳು ಅವರ ಕಲ್ಪನೆಗಳು ಒಳನಿಸುಳಿ ನಿಮ್ಮ ಸಾಧನೆಯಲ್ಲಿ ತೊಡಕಾಗದಂತೆ ಎಚ್ಚರ ವಹಿಸಬೇಕು. ನಿಮ್ಮ ಈ ಸಾಧನೆಯು ಪ್ರಾಮಾಣಿಕತೆಯ ಯಾತ್ರೆಯಾಗಿರಬೇಕೆ ಹೊರತು, ಯಾರೋ ಅನನುಭವಿಯ ನಾಯಕತ್ವದಡಿಯಲ್ಲಿ ನಡೆದ ಪಯಣವಾಗಿರಬಾರದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 31/810**

ಓರ್ವ ಸಾಮಾನ್ಯ ಕ್ರಿಶ್ಚಿಯನ್ನನು ಮಾದರಿಯುತ ಜೀವನವನ್ನು ನಡೆಸಲು ಸಾಧ್ಯವಿಲ್ಲ. ಏಕೆಂದರೆ ಕ್ರಿಸ್ತನು ಬಹುಹಿಂದೆ ಬೋಧಿಸಿದ ಬೋಧನೆಗಳು ಇಂದಿನ ಐರೋಪ್ಯದ ಸಾಮಾಜಿಕ ಪ್ರಜ್ಞೆಯು ಕಲಿಯುತ್ತಿರುವ ಬೌದ್ಧಿಕ ಮತ್ತು ಮಾನಸಿಕ ಶಿಕ್ಷಣಕ್ಕಿಂತ ವಿಭಿನ್ನವಾದ ಸ್ತರದಲ್ಲಿ ನೆಲೆಸಿದೆ. ಇನ್ನೊಂದು ವಿಷಯ, ಮಂತ್ರಿ ಅಥವಾ ಪಾದ್ರಿಗಳು ಸಂಪೂರ್ಣ ಶ್ರದ್ಧೆಯಿಂದ ಬೋಧಿಸಿದುದನ್ನು ಅಭ್ಯಾಸ ಮಾಡಲು ಸಹ ಅವರಿಂದ ಸಾಧ್ಯವಾಗುತ್ತಿಲ್ಲ. ಏಕೆಂದರೆ, ಪ್ರಾಕ್ತನ ದ್ರಷ್ಟಾರರು ಕಂಡುಕೊಂಡ ಸತ್ಯದ ಮೇಲೆ ನಂಬಿಕೆಯನ್ನಿಟ್ಟುಕೊಂಡು, ಅದನ್ನೇ ಕೇಂದ್ರವಾಗಿಟ್ಟುಕೊಂಡು ಯೋಚಿಸುವುದು, ಅನುಭವಿಸುವುದು ಮತ್ತು ಅದರಂತೆ ವರ್ತಿಸುವುದು ಮಾನವ ಸ್ವಭಾವಕ್ಕೆ ಸಾಧ್ಯವಿಲ್ಲ. ಅದೇ ಹಿಂದೂ ಸಂಸ್ಕೃತಿಯ ವಿಚಾರಕ್ಕೆ ಬಂದರೆ ಇಲ್ಲಿ ಎಲ್ಲರೂ ಆಧ್ಯಾತ್ಮಿಕತೆಯನ್ನು ಶ್ರೇಷ್ಠವೆಂದು ಪರಿಗಣಿಸುತ್ತಾರೆ. ಅವರು ಸನ್ಯಾಸಿಗಳನ್ನು ಗೌರವಿಸುತ್ತಾರೆ, ಭಕ್ತಿಯಿಂದ ಅವರನ್ನು ಸೇವಿಸುತ್ತಾರೆ. ಆದರೆ ಅದೇ ಜನರು ತಮ್ಮ ಕುಟುಂಬದವರು ಯಾರೋ ಸಾಂಸಾರಿಕ ಜೀವನವನ್ನು ತೊರೆದು ಸನ್ಯಾಸವನ್ನು ಸ್ವೀಕರಿಸುತ್ತೇನೆ ಎಂದು ಹೇಳಿದರೆ ಗಾಬರಿಯಾಗುತ್ತಾರೆ, ಕಣ್ಣೀರುಗರೆದು ಗೋಗರೆಯುತ್ತಾರೆ, ಸಾಧಕರನ್ನು ತಮ್ಮ ನಡೆಯಿಂದ ಹಿಂಸರಿಯುವಂತೆ ಕೋರಿ ಪ್ರಲಾಪಿಸುತ್ತಾರೆ, ವಾದಿಸುತ್ತಾರೆ! ಇದು ಆಧ್ಯಾತ್ಮಿಕತೆಯೆಡೆಗೆ ಮುಖ ಮಾಡಿದ ಆ ಸದಸ್ಯನ ಸಾವಿಗಿಂತಲೂ ಭಯಾನಕವೆಂಬಂತೆ ಪ್ರತಿಕ್ರಿಯೆ ನೀಡುತ್ತಾರೆ. ಹಾಗೆಂದು ಅವರನ್ನು ತಡೆಯಲು ಪ್ರಯತ್ನಿಸುತ್ತಿರುವ ಕುಟುಂಬದ ಇತರ ಸದಸ್ಯರು ಮಾನಸಿಕವಾಗಿ ಅಥವಾ ಪ್ರಜ್ಞಾಪೂರ್ವಕವಾಗಿ ಕಪಟರೆಂದು ಅರ್ಥವಲ್ಲ. ಬದಲಿಗೆ ಸಾಧನೆಯೆಡೆಗೆ ಹೊರಟಿರುವವರನ್ನು ತಡೆದು ಅವರ ನಡೆಯನ್ನು ತಪ್ಪೆಂದು ಸಾಬೀತುಪಡಿಸಲು ಹಲವು ಶಾಸ್ತ್ರಗಳ ಮೊರೆಹೋಗುವ ಅವರ ವರ್ತನೆಯು ಪ್ರಜ್ಞಾಹೀನತೆಯಿಂದ

ಕೂಡಿರುವುದು ಎಂದು ಹೇಳಬಹುದು. ಇದು ಅವರಿಗೇ ತಿಳಿಯದಂತೆ ಅವರನ್ನು ಆವರಿಸಿರುವ ಅಪ್ರಾಮಾಣಿಕತೆಯ ಲಕ್ಷಣವಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/53–54 – ಶ್ರೀ ಅರವಿಂದರು**

**ಆತ್ಮದ ಪ್ರಾಮಾಣಿಕತೆ**

ನನ್ನ ಪ್ರಕಾರ ಆತ್ಮದ ಪ್ರಾಮಾಣಿಕತೆಯು ನಮ್ಮನ್ನು ದಿವ್ಯತೆಯೆಡೆಗೆ ನಡೆಸುವುದೇ ಆಗಿದೆ. ಹಾಗೂ ಆ ದಿವ್ಯತೆಗೂ ಮೀರಿದ ಉನ್ನತ ಜೀವನದೆಡೆಗೆ ಕೊಂಡೊಯ್ಯುವ ಅಭೀಪ್ಸೆಯನ್ನು ಹೊಂದಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/55–56 – ಶ್ರೀ ಅರವಿಂದರು**

ನಾವು ಎರಡು ವಿಷಯಗಳಲ್ಲಿ ಗೊಂದಲಕ್ಕೊಳಗಾಗಬಾರದು: ಅದರಲ್ಲಿ ಕೆಲವೊಂದು ಅವಶ್ಯಕತೆಗಳಿವೆ (ಕೆಲವರು ಸಂಪೂರ್ಣವಾಗಿ ತಮ್ಮ ಭೌತಿಕ ಸ್ತರವನ್ನೇ ನಿಯಂತ್ರಿಸಲೆಂದು ನೋಂತಿರುತ್ತಾರೆ) ಮತ್ತು ಕೆಲವು ನೈತಿಕ ಕಲ್ಪನೆಗಳಿವೆ. ಉದಾಹರಣೆಗೆ ಕೆಲವರು ಬೇರೊಬ್ಬರ ದೇಹವನ್ನು ವಿಷಮಯಗೊಳಿಸಲು, ಅವರ ಮೆದುಳಿನ ಸಾಮರ್ಥ್ಯವನ್ನು ತನ್ನ ವಶಕ್ಕೆ ತೆಗೆದುಕೊಳ್ಳಲು, ಅಥವಾ ಅವರ ಜೀವನದ ಗುರಿಯನ್ನೇ ಬದಲಿಸಲು ಪ್ರಯತ್ನಿಸುತ್ತಿರುತ್ತಾರೆ. ಹೀಗೆ ಮಾಡುವವದರಿಂದ ಅವರು ಬೇರೊಬ್ಬರ ದೈಹಿಕ ಜೀವನವನ್ನು ಪರಿವರ್ತಿಸಲು ಆ ಮೂಲಕ ತಾನೊಬ್ಬ ನೈತಿಕ ಪ್ರಜ್ಞೆಯನ್ನು ಹೊಂದಿರುವ ವ್ಯಕ್ತಿಯೆಂದೂ ಬಿಂಬಿಸಿಕೊಳ್ಳಲು ಪ್ರಯತ್ನಿಸುತ್ತಿರುತ್ತಾನೆ. ಆದರೆ ಅವರ ಈ ಕೀಳರಿಮೆ ವರ್ತನೆಯು ಅವರನ್ನು ಯಾವ ಎತ್ತರಕ್ಕೂ ಕೊಂಡೊಯ್ಯುವದಿಲ್ಲ. ಉದಾಹರಣೆಗೆ ನೀವು ವಿಷವನ್ನು ಸೇವಿಸುವುದು ತಪ್ಪೆಂದು ಅರಿತಿರುವಿರಿ ಏಕೆಂದರೆ ಅದು ನಿಮ್ಮ ದೇಹವನ್ನು ವಿಷಮಯಗೊಳಿಸುತ್ತದೆ ಎಂಬ ಪ್ರಜ್ಞೆಯು ನಿಮ್ಮಲ್ಲಿದೆ. ಆದರೆ ಕೆಲವರು ನಿಧಾನವಾದ ವಿಷವನ್ನು ಸೇವಿಸುವ ಚಟವನ್ನು ಹೊಂದಿರುತ್ತಾರೆ. (ಅವರು ನಿರ್ಭಯವಾಗಿ ಅದನ್ನು ಸೇವಿಸುತ್ತಾರೆ. ಏಕೆಂದರೆ, ಅದರ ಪರಿಣಾಮವು ಅವರಿಗೇ ಗೊತ್ತಾಗದಷ್ಟು ನಿಧಾನವಾಗಿರುತ್ತದೆ. ಅದರ ದುಷ್ಪರಿಣಾಮವನ್ನು ಅರಿಯಲು ಸಹ ಸಾಧ್ಯವಾಗುವದಿಲ್ಲ.) ಆದರೆ ಅದೇ ವ್ಯಕ್ತಿಯು ತನ್ನ ದೈಹಿಕ ಚಟುವಟಿಕೆಗಳಲ್ಲಿ ಸಮರ್ಥನಾಗಬೇಕಾದರೆ, ಬೇರೊಬ್ಬರ ದೈಹಿಕ ಪರಿವರ್ತನೆಗೆ ಬೆಳಕಾಗಬೇಕಾದರೆ ಅವರು ಈ ಕೆಲವೊಂದು ವಿಷಯಗಳಿಂದ ದೂರವಿರಬೇಕು. ನೀವು ಪುಣ್ಯವನ್ನು

ಗಳಿಸುವ ಆಲೋಚನೆಯಿಂದಲೋ ಅಥವಾ ಪುಣ್ಯ ಸಂಪಾದನೆಯಿಂದ ಆ ದೇವನೇ ನಿಮ್ಮೊಳಗೆ ಬಂದು ನೆಲೆಸುತ್ತಾನೆ ಎಂದೋ ನೀವು ಈ ಕಾರ್ಯವನ್ನು ಮಾಡಬಾರದು. ಏಕೆಂದರೆ ದೇವನು ಯಾರಿಗೆ ತಾನು ಮಾಡಿದ ತಪ್ಪಿನ ಅರಿವಿದೆಯೋ, ಯಾರು ತನ್ನ ತಪ್ಪಿನ ಸುಳಿಯಿಂದ ಹೊರಬರಲು ಪ್ರಯತ್ನಿಸುತ್ತಿರುವರೋ ಅವರ ಸಮೀಪಕ್ಕೆ ಬರುತ್ತಾನೆ. ಏಕೆಂದರೆ ದಿವ್ಯತೆಯ ಸಾಮಿಪ್ಯದಿಂದ ಮರ್ತ್ಯನು ತಪ್ಪಿನಿಂದ ದೂರ ಸರಿದು ಮತ್ತೊಮ್ಮೆ ಅದರ ಸುಳಿಗೆ ಸಿಲುಕದಂತೆ ಎಚ್ಚರ ವಹಿಸುತ್ತಾನೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 5/348–349 – ಶ್ರೀ ಅರವಿಂದರು**

## ಪರಿಪೂರ್ಣ ನಿಷ್ಠೆಯನ್ನು (ವಿಧೇಯತೆಯನ್ನು) ಹೇಗೆ ಪಡೆಯುವದು?

**ಸಮಗ್ರವಾಗಿ ಪ್ರಾಮಾಣಿಕರಾಗುವ ಬಗೆ**

ಯೋಗದಿಂದ ಮರ್ತ್ಯನು ಸರ್ವಾಂಗೀಣವಾಗಿ ಪ್ರಾಮಾಣಿಕನಾಗಬಹುದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/268**

ನೀವು ಆ ದಿವ್ಯತೆಯಲ್ಲಿ, "ನನಗೆ ನೀನಲ್ಲದೇ ಬೇರಾವುದೂ ಬೇಡ. ನನಗೆ ನೀನು ಮಾತ್ರ ಬೇಕು." ಎಂದು ಹೇಳಿದರೆ ಆ ದಿವ್ಯತೆಯು ನಿಮ್ಮನ್ನು ಪ್ರಾಮಾಣಿಕರಾಗಿಸಲು ಎಲ್ಲ ರೀತಿಯ ವ್ಯವಸ್ಥೆಯನ್ನೂ ಮಾಡುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/66**

*ಪ್ರಶ್ನೆ: ಇಡೀ ಮರ್ತ್ಯವೇ ಮುಂದಾಗಿ, ದಿವ್ಯತೆಯನ್ನು ಕುರಿತು, "ನಾನು ನಿನ್ನವನು, ನಿನಗೆ ಮಾತ್ರ ಸೇರಿದವನು." ಎಂದು ಹೇಳುವ ದಿನವನ್ನು ಹೇಗೆ ಸಾಧ್ಯಗೊಳಿಸಬಹುದು?*

ಇದನ್ನು ಸಾಧಿಸಲು ಎರಡು ಮಾರ್ಗಗಳಿವೆ.

1. ನೀವು ಸಾಧಿಸಲು ಹೊರಟಿರುವ ಗುರಿಯನ್ನು ಎಂದಿಗೂ ಮರೆಯಬೇಡಿ.

2. ನಿಮ್ಮ ಅಭೀಪ್ಸೆಯನ್ನು ಮೊಟಕುಗೊಳಿಸಲು ಪ್ರಯತ್ನಿಸುತ್ತಿರುವ ನಿಮ್ಮದೇ ಒಂದಂಶವನ್ನು ಎಂದಿಗೂ ಸಮರ್ಥಿಸಬೇಡಿ.

ಏಕೆಂದರೆ, ಸಾಧಕರು ತನ್ನ ಗುರಿಯ ಬಗ್ಗೆ ಜಾಗೃತರಾಗಿರುವುದು ಅತ್ಯವಶ್ಯಕ.

ನಿಶೆಯು ಸದಾ ಉಷೆಯ ಆಗಮನವನ್ನು ತಡೆಯಲು ಪ್ರಯತ್ನಿಸುತ್ತಾ ತನ್ನ ಕರಾಳ ಛಾಯೆಯನ್ನೇ ನಿರಂತರವಾಗಿ ಮುತ್ತಿ ಮುಸುಗಲು ಪ್ರಯತ್ನಿಸುತ್ತಿರುತ್ತದೆ. ಹಾಗಾಗಿ ಆ ನಿಶೆಯನ್ನು ಅದರ ನಿಮಿತ್ತದಿಂದ ದೂರವಿಡಲು ಪ್ರಯತ್ನಿಸಬೇಕು.

ನಿಮ್ಮ ಜಾಗ್ರತೆ, ಪ್ರಾಮಾಣಿಕತೆ ಮತ್ತು ನಿರಂತರ ಪ್ರಯತ್ನದ ಜೊತೆಗೆ ಆ ದಿವ್ಯತೆಯ ಅನುಗ್ರಹವು ಇದ್ದಲ್ಲಿ ಅದು ನಿಮ್ಮನ್ನು ನಿಮ್ಮ ಗುರಿಯೆಡೆಗೆ ತಲುಪಿಸುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 16/378**

**ಶ್ರೀಮಾತೆಯಲ್ಲಿ ಸರ್ವವನ್ನೂ ವಿಜ್ಞಾಪಿಸಿಕೊಳ್ಳುವುದು**

ಒಬ್ಬರು ಕೆಟ್ಟದ್ದನ್ನು ಮಾಡುವವರಿದ್ದರೆ, ಇನ್ನೊಬ್ಬರು ಕೆಟ್ಟದ್ದನ್ನು ಮಾಡುವುದು ತಪ್ಪೆಂದು ಅರಿತವರಿಹರು. ಇವರಿಬ್ಬರಲ್ಲಿ ನೀವು ಯಾರನ್ನು ಅನುಸರಿಸ–ಬೇಕೆಂಬುದನ್ನು ಪರಿಗಣಿಸಿ. ಉದಾಹರಣೆಗೆ, ಒಬ್ಬರು ತನಗೆ ತಾನೇ, “ನಾನು ಮಾಡಿರುವುದನ್ನು ಶ್ರೀಮಾತೆಯವರು ಅರಿತಿದ್ದಾರೆ. ಹಾಗಾಗಿ ನಾನು ಅವರಿಗೆ ಅದನ್ನು ತಿಳಿಸುವ ಅಗತ್ಯವಿಲ್ಲ.” ಎಂದು ಹೇಳಿಕೊಳ್ಳುತ್ತಾರೆ. ಅದೇ ಸಂದರ್ಭದಲ್ಲಿ ತಪ್ಪು ಮಾಡಿದ ಭಯವಿರುವ ಇನ್ನೊಬ್ಬರು, ತಾವು ಮಾಡಿದ್ದನ್ನು ಶ್ರೀಮಾತೆಯವರಿಗೆ ತಿಳಿಸದೇ ಅದನ್ನು ಅತಿ ಗೌಪ್ಯವಾಗಿ ಮುಚ್ಚಿಡುತ್ತಾರೆ. ಆದರೆ ಅವರ ಹೃದಯವನ್ನು ಹೊಕ್ಕ ಆ ರಹಸ್ಯವು ಒಳಗೊಳಗೇ ಅವರನ್ನು ಕೊರೆಯಲಾರಂಭಿಸುತ್ತದೆ. ಇದರಿಂದ ಅವರಿಗೆ ಹಿತಶಾಂತಿಗಳು ದೊರೆಯುವದಿಲ್ಲ. ಹಾಗಾಗಿ ಕೊನೆಗೊಮ್ಮೆ ಅವರು ತಮ್ಮೊಳಗೆ ಕುದಿಯುತ್ತಿರುವ ಆ ಸತ್ಯವನ್ನು ಶ್ರೀಮಾತೆಯವರ ಮುಂದೆ ತೋಡಿಕೊಳ್ಳಲು ಸಿದ್ಧರಾಗುತ್ತಾರೆ. ಆದರೆ ಶ್ರೀಮಾತೆಯವರ ಮುಂದೆ ಹೋದ ತಕ್ಷಣ ಅವರ ಗಂಟಲು ಬಿಗಿದುಕೊಳ್ಳುತ್ತದೆ, ಉಸಿರು ಕಟ್ಟಿದಂತಾಗುತ್ತದೆ, ಸ್ವರ ಉಚ್ಚಾರಣೆ ಆಗುವುದೂ ಕಷ್ಟವಾಗದಂತೆ ತೊರುತ್ತದೆ. ಆದರೆ ಅವರು ಶತ ಪ್ರಯತ್ನ ಮಾಡಿ ತಮ್ಮ ಮಾತನ್ನು ಹೊರಗೆಡಹಲು ಒಂದೊಂದೇ ಶಬ್ದಗಳನ್ನು ಪೋಣಿಸುತ್ತಾ ಎಲ್ಲವನ್ನೂ ಸಾಂಗವಾಗಿ ಶ್ರೀಮಾತೆಯವರ ಎದುರು ವಿಜ್ಞಾಪಿಸಿಕೊಳ್ಳುತ್ತಾರೆ. ಆಗ ಕರುಣಾಮಯಿ ಶ್ರೀಮಾತೆಯವರು, “ಓ ಮಗುವೇ, ನೀನು ನಿನ್ನಲ್ಲಿ ಅಡಗಿದ್ದ ರಹಸ್ಯದ ಬಾಗಿಲನ್ನು ತೆರೆದು ಸತ್ಯವನ್ನು ಹೊರಗೆಡಹಿ ಹಗುರಾಗಿದ್ದೀಯ. ನಿನ್ನ ಈ ಪ್ರಾಮಾಣಿಕ ಪ್ರಯತ್ನದಿಂದ ಸಂತುಷ್ಟವಾದ ನಾನು ನೇರವಾಗಿ ಅತೀಂದ್ರಿಯತೆಗೆ ತೆರಳಿ ಅಲ್ಲಿಂದಲೇ ನಿನ್ನ ಮೇಲೆ ಬಲ, ಇಚ್ಛೆ, ಪ್ರಜ್ಞೆ ಮತ್ತು ಅಗತ್ಯವಿರುವ ಎಲ್ಲಾ

ರೀತಿಯ ನಿರ್ಣಯಗಳನ್ನು ಪ್ರಕಾಶದ ರೂಪದಲ್ಲಿ ಹರಿಸುತ್ತೇನೆ. ನೀನು ಇನ್ನೂ ಏನನ್ನೂ ಹೇಳಬೇಡ ಏಕೆಂದರೆ ನಾನು ಇದನ್ನು ಮೊದಲೇ ಅರಿತಿದ್ದೇ. ಹೇಗೆ ತುಂಬಿದ ಪಾತ್ರೆಯೊಳಗೆ ಇನ್ನಷ್ಟು ನೀರನ್ನು ಹಾಕಿದಾಗ ಆ ನೀರು ಪಾತ್ರೆಯಿಂದ ಉಕ್ಕಿ ಕೆಳಗೆ ಹರಿಯುವುದೋ ಹಾಗೆಯೇ ನೀನು ಅದನ್ನು ಮತ್ತೊಮ್ಮೆ ಪುನರಾವರ್ತಿಸುವ ಅವಶ್ಯತೆಯಿಲ್ಲ. ಆದರೆ ನೀನು ಈಗ ಎಲ್ಲವನ್ನೂ ಹೊರಗೆಡಹಿ ಪ್ರಾಮಾಣಿಕತೆಯನ್ನು ತೋರಿಸಿದ್ದರಿಂದ ನೀನು ಮುಂದೆ ಉತ್ತಮ ಪ್ರಗತಿಯನ್ನು ಸಾಧಿಸುತ್ತೀಯೆ." ಎಂದು ಹರಸುತ್ತಾರೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 6/198–199**

**ಪ್ರಗತಿಯ ವಿಧಾನ**

*ಪ್ರಶ್ನೆ: ಪ್ರಿಯ ಮಾತೆಯವರೆ, ಮಾನಸಿಕ ಮತ್ತು ದೈಹಿಕ ಪ್ರಗತಿಗಾಗಿ ಕ್ರಮಬದ್ಧವಾದ ವ್ಯಾಯಾಮ ಶಿಕ್ಷಣವಿರುವಂತೆ, ಶ್ರೀ ಅರವಿಂದರ ಯೋಗದೆಡೆಗೆ ಪ್ರಗತಿ ಸಾಧಿಸಲು ಏಕರೂಪದ ಶಿಕ್ಷಣ ವ್ಯವಸ್ಥೆ ಇಲ್ಲವೇ? ಏಕೆಂದರೆ ಪ್ರತಿಯೋರ್ವರೂ ಇದನ್ನು ಸಾಧಿಸಬೇಕಾಗಿದೆ. ಹಾಗಾಗಿ ಇದನ್ನು ಸಾಧಿಸಬೇಕಾದರೆ ನಾನು ಪ್ರತಿನಿತ್ಯವೂ ಅನುಸರಿಸಬೇಕಾದ ಹಂತ–ಹಂತದ ಶಿಕ್ಷಣ ಕ್ರಮವನ್ನು ನೀವು ನಿರೂಪಿಸಿ ಕೊಡಬಹುದೇ?*

ವ್ಯಾಯಾಮ ಶಿಕ್ಷಣದಿಂದ ದೈಹಿಕ ಮತ್ತು ಮಾನಸಿಕ ಹಂತದ ಪ್ರಬುದ್ಧತೆಯ ಬೆಳವಣಿಗೆಯಾಗುತ್ತದೆ. ಆದರೆ ಇದೇ ರೀತಿಯ ಶಿಕ್ಷಣ ಕ್ರಮವು ಆಧ್ಯಾತ್ಮಿಕ ಪ್ರಗತಿಯಲ್ಲಿ ಯಾವುದೇ ತೆರನಾದ ಪರಿಣಾಮವನ್ನು ಬೀರುವದಿಲ್ಲ. ಅದನ್ನು ಸಾಧಿಸಬೇಕಾದರೆ ಸಂಪೂರ್ಣ ಪ್ರಾಮಾಣಿಕತೆಯ ಅವಶ್ಯಕತೆಯಿದೆ.

ಶ್ರೀ ಅರವಿಂದರು ಈ ವಿಷಯದ ಕುರಿತು ಬಹಳ ಸ್ಪಷ್ಟವಾಗಿ ಬರೆದುಬಿಟ್ಟಿದ್ದಾರೆ. ಅದೆಲ್ಲವೂ 'ಯೋಗ ಸಮನ್ವಯ' ಗ್ರಂಥದಲ್ಲಿ ದಾಖಲಾಗಿದೆ.

ಅದಾಗ್ಯೂ ನಿಮಗೆ ಮಾರ್ಗದರ್ಶನ ನೀಡಲೋಸುಗ ನಾನು ಕೆಲವೊಂದು ಆರಂಭಿಕ ಸೂತ್ರಗಳನ್ನು ತಿಳಿಸುತ್ತೇನೆ.

1. ನೀವು ಬೆಳಿಗ್ಗೆ ಎಚ್ಚರವಾದ ತಕ್ಷಣ ನಿಮ್ಮ ಆ ದಿನವನ್ನು ದಿವ್ಯತೆಗೆ ಅರ್ಪಿಸಿಬಿಡಿ. ಏಕೆಂದರೆ ಅಂದಿನ ದಿನ ನೀವು ಮಾಡಬೇಕಿರುವ ಎಲ್ಲಾ ಕೆಲಸಗಳ ಮೇಲೂ ಆ ದಿವ್ಯತೆಯ ರಕ್ಷೆಯಿರುತ್ತದೆ.

2. ಪ್ರತಿನಿತ್ಯ ಮಲಗುವ ಮೊದಲು ನಿಮ್ಮ ಆ ದಿನವನ್ನು ಮತ್ತೊಮ್ಮೆ ಮೆಲುಕು ಹಾಕಿ ಅಂದು ನೀವು ತೋರಿದ ಲೋಪದೋಷಗಳನ್ನು, ನಿರ್ಲಕ್ಷ್ಯತನವನ್ನು ಪರೀಶೀಲಿಸಿ ಅಂತಹ ಸಂಧಿಗ್ದಗಳು ಮತ್ತೊಮ್ಮೆ ಮರುಕಳಿಸದಂತೆ ಪ್ರಾರ್ಥಿಸಿ ಅಂದಿನ ದಿನವನ್ನು ಮುಕ್ತಾಯಗೊಳಿಸಿಕೊಳ್ಳಿ.

ಇದು ಸಾಧನೆಯೆಡೆಗೆ ತೆರಳಬೇಕಿರುವ ನಿಮ್ಮ ನಡೆಗೆ ಚಿಕ್ಕ ಆರಂಭವಷ್ಟೇ, ಅದು ನಿಮ್ಮ ಪವಿತ್ರವಾದ ಪ್ರಾಮಾಣಿಕತೆಯೊಂದಿಗೆ ಹೆಚ್ಚಾಗುತ್ತಾ ಹೋಗಬೇಕು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 16/315–316**

## ಉನ್ನತ ಆದರ್ಶದೊಂದಿಗೆ ಸಾಮರಸ್ಯಯುತ ಜೀವನವನ್ನು ನಡೆಸುವುದು

ಒಂದು ವೇಳೆ ನೀವು ಸಂಪೂರ್ಣವಾಗಿ ಪ್ರಾಮಾಣಿಕರಾಗಿದ್ದರೆ ನೀವು ಸದಾ ಉನ್ನತ ಆದರ್ಶಗಳೊಂದಿಗೆ ಸಾಮರಸ್ಯಯುತ ಜೀವನವನ್ನು ನಡೆಸಲು ಪ್ರಯತ್ನಿಸುತ್ತೀರಿ. ನಿಮ್ಮ ಜೀವನದ ಪ್ರತಿ ಕ್ಷಣದಲ್ಲೂ ನೀವು ಯೋಚಿಸುವ, ನೀವು ಭಾವಿಸುವ, ನೀವು ಮಾಡುವ ಎಲ್ಲಾ ಕಾರ್ಯಗಳಲ್ಲೂ ಪೂರ್ಣರೂಪದ ಉನ್ನತ ಆದರ್ಶಗಳೊಂದಿಗೆ ಸಾಮರಸ್ಯಯುತ ಜೀವನವನ್ನು ನಡೆಸಲು ಸಾಧ್ಯವಾದ ಮಟ್ಟಿಗೆ ಪ್ರಯತ್ನಿಸುತ್ತೀರಿ. ಅಥವಾ ನೀವು ಅದರ ಬಗ್ಗೆ ಜಾಗೃತಿಯನ್ನು, ತಿಳುವಳಿಕೆಯನ್ನು ಹೊಂದಿದ್ದರೆ ನೀವು ನಿಮ್ಮ ಅಸ್ತಿತ್ವದಲ್ಲಿ ನೈಜ ಪ್ರಾಮಾಣಿಕತೆಯನ್ನು ಹೊಂದಿದ್ದೀರಿ ಎಂದರ್ಥ. ಮತ್ತು ನೀವು ಅದೇ ರೀತಿಯ ಜೀವನವನ್ನು ನಡೆಸಿದ್ದೇ ಆದಲ್ಲಿ ಅಥವಾ ನಿಮ್ಮಲ್ಲಿ ಅಹಮಿಕೆಯ ರೂಪದ ವರ್ತನೆಗಳು ಇಲ್ಲದೇ ಇದ್ದಲ್ಲಿ, ನೀವು ನಿಮ್ಮ ಆಂತರ್ಯದಿಂದ ನಿರ್ದೇಶಿಸಲ್ಪಟ್ಟ ಸತ್ಯದೊಂದಿಗೆ ಹೆಜ್ಜೇ ಹಾಕುತ್ತಿರುವಿರಿ ಎಂದರೆ ನೀವು ಸಂಪೂರ್ಣವಾಗಿ ಪ್ರಾಮಾಣಿಕರಾಗಿದ್ದೀರಿ ಎಂದರ್ಥ. ಆಗ ಇಡೀ ವಿಶ್ವವೇ ನಿಮಗೆ ಏಕರೂಪವಾಗಿ ಕಂಡುಬರುತ್ತದೆ. ಮತ್ತು ಆ ಹಂತದಲ್ಲಿ ನೀವು ಉತ್ತಮವಾಗಿ ಕಾಣುವು ಅಗತ್ಯವಿಲ್ಲ. ಅಥವಾ ಇತರರಂತೆ ಇರಲು ಪ್ರಯತ್ನಿಸುವ ಅಗತ್ಯವೂ ಇಲ್ಲ. ಏಕೆಂದರೆ, ನೀವು ನಿಮ್ಮ ಋತ ಪ್ರಜ್ಞೆಯೊಂದಿಗೆ ಸಾಮರಸ್ಯವಾಗಿ ನಡೆದುಕೊಂಡು ಅದರ ಅಭೀಪ್ಸೆಯಂತೆ ನಡೆಯುತ್ತಿದ್ದಲ್ಲಿ ನೀವು ಹೇಗೆ ಕಾಣುತ್ತೀರಿ ಎಂದು ಯೋಚಿಸುವ ಅವಶ್ಯಕತೆಯಿರುವದಿಲ್ಲ. ಏಕೆಂದರೆ ನಿಮ್ಮ ವಿಷಯದಲ್ಲಿ ನೀವು ಹೇಗೆ ಕಾಣುತ್ತೀರಿ? ಶಾಂತ ಪ್ರವೃತ್ತಿಯವರೋ, ಅಸಡ್ಡೆಯಿಂದ ಕೂಡಿದವರೋ ಗರ್ವಿಗಳೋ ಎಂಬುದೆಲ್ಲ

ಮುಖ್ಯವಾಗಿ ತೋರುವದಿಲ್ಲ. ಕೇವಲ ನೀವು ನಿಮ್ಮ ಆಂತರ್ಯದ ಸತ್ಯದೊಂದಿಗೆ ಬದುಕುತ್ತಿದ್ದಲ್ಲಿ ಅದುವೇ ನಿಮ್ಮನ್ನು ಪ್ರಾಮಾಣಿಕತೆಯ ಉತ್ತುಂಗ್ಗಕೆ ಏರಿಸುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 4/16–17 – ಶ್ರೀಮಾತೆ**

ಯಾರೂ ಸಹ ಒಂದೇ ಸಲ ನೇರವಾಗಿ ಸಂಪೂರ್ಣ ಪ್ರಾಮಾಣಿಕರಾಗಲು ಸಾಧ್ಯವಿಲ್ಲ. ಆದರೆ ಅದನ್ನೇ ತನ್ನ ಅಭೀಪ್ಸೆಯನ್ನಾಗಿಟ್ಟುಕೊಂಡು ಸದಾ ಆ ದಿವ್ಯತೆಯಲ್ಲಿ ಅದರ ಶಕ್ತಿಯ ಆಗಮನಕ್ಕಾಗಿ ಮನಸೋ ಇಚ್ಛೆಯಿಂದ ಪ್ರಾರ್ಥಿಸಿದ್ದೇ ಆದಲ್ಲಿ ಅವನು ತನ್ನ ಪ್ರಜ್ಞೆಯ ಔನ್ನತ್ಯದೆಡೆಗೆ ಏರುತ್ತಾನೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/51**

ಸಾಧನೆಯಲ್ಲಿ ತೊಡಗಿದ ಪ್ರತಿಯೋರ್ವ ವ್ಯಕ್ತಿಯಲ್ಲೂ ಅವನ ನಡೆಗೆ ವಿರೋಧವನ್ನು ತೋರುವ ಅಂಶಗಳು ಕಂಡುಬರುವುದು ಸಹಜ. ಅದು ಕೆಲವರಲ್ಲಿ ಹಠಮಾರಿ–ಯಾಗಿರಬಹುದು. ಆದರೆ ನಿಮ್ಮಲ್ಲಿ ಸಂಪೂರ್ಣ ಪ್ರಾಮಾಣಿಕತೆಯೇ ನಿಮ್ಮ ಅಭೀಪ್ಸೆಯ ಕೇಂದ್ರವಾಗಿದ್ದರೆ, ನಿಮ್ಮಲ್ಲಿ ನಿಮ್ಮ ಸಾಧನೆಗೆ ವಿರೋಧವನ್ನು ತೋರುವ ಅಂಶಗಳನ್ನು ಅದು ಎಷ್ಟೇ ಕಷ್ಟಕರವಾಗಿದ್ದರೂ ಸಹ ಅದನ್ನು ನಿರಾಕರಣಾ ದೃಷ್ಟಿಯಿಂದ ನೋಡುತ್ತಾ ನಿಮ್ಮ ಮಾರ್ಗದಲ್ಲಿ ನೀವು ಮುಂದುವರೆಯಬಹುದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 31/646 – ಶ್ರೀ ಅರವಿಂದರು**

ನನ್ನ ಪ್ರಾಮಾಣಿಕತೆಯು ಪರಿಪೂರ್ಣವಾಗಿದ್ದರೆ ನಾನು ಒಳ್ಳೆಯವನಾಗಿ ತೋರಿಸಿಕೊಳ್ಳುವ ಅವಶ್ಯಕತೆಯಿಲ್ಲ. ಏಕೆಂದರೆ, ಒಳ್ಳೆಯವನಾಗಿ ತೋರಿಸಿಕೊಳ್ಳುವದಕ್ಕಿಂತ ಒಳ್ಳೆಯವನಾಗಿ ಇರುವುದು ಮುಖ್ಯ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 15/189**

ನಾನು ಹೇಗಿದ್ದೇನೆ ಎಂಬುದನ್ನು ಇನ್ನೊಬ್ಬರಿಗೆ ತೋರಿಸಿಕೊಳ್ಳುವ ಅವಶ್ಯಕತೆಯಿಲ್ಲ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/69 – ಶ್ರೀಮಾತೆ**

ಶಕ್ತಿ ಮತ್ತು ಅನುಗ್ರಹದ ಬಗ್ಗೆ ನಾನು ಹೇಳುತ್ತಿರುವ ವಿಷಯದಲ್ಲಿ ಅರ್ಥವಾಗದೇ ಇರುವ ಯಾವ ಅಂಶವೂ ಇಲ್ಲ. ಶಕ್ತಿಯು ಆಧ್ಯಾತ್ಮಿಕ ದರ್ಶನಕ್ಕೆ ಒಂದು ಮೌಲ್ಯವನ್ನು ಒದಗಿಸಿ ಕೊಡುತ್ತದೆ. ಹಾಗೆಂದು ದರ್ಶನವನ್ನು ಶಕ್ತಿಯಿಂದ ಮಾತ್ರ ಸಾಕ್ಷಾತ್ಕಾರಗೊಳಿಸಿಕೊಳ್ಳಬಹುದೇ ವಿನಃ ಬೇರೆ ಮಾರ್ಗದಿಂದ ಸಾಧ್ಯವಿಲ್ಲ ಎಂಬುದು ಸರಿಯಾದ ವಾದವಲ್ಲ. ಅನುಗ್ರಹವೆಂಬುದು ಹೊಸದೊಂದು ಆವಿಷ್ಕಾರವಲ್ಲ. ಬದಲಿಗೆ ಈಗಾಗಲೇ ಇರುವ ಋತ ಸತ್ಯವನ್ನು ಆಧ್ಯಾತ್ಮಿಕ ದರ್ಶನದಿಂದ ಅನುಭವಿಸುವುದಾಗಿದೆ. ಬಲಾಢ್ಯರು, ಬುದ್ಧಿವಂತರು ಸಾಧ್ಯವೇ ಇಲ್ಲ ಎಂದು ಸಾರಿದುದನ್ನು ಹಲವರು ಈ ಅನುಗ್ರಹದಿಂದ ಸಾಧಿಸಿ ತೋರಿಸಿದ್ದಾರೆ. ಎಷ್ಟೋ ಜನ ಅನಕ್ಷರಸ್ಥರು, ಮಾನಸಿಕ ಶಕ್ತಿಯನ್ನು ವೃದ್ಧಿಗೊಳಿಸುವ ತರಬೇತಿಯನ್ನು ಪಡೆಯದೇ ಇರುವವರು, ಇಚ್ಛೆಯ ಬಲವನ್ನು ಹೊಂದಿಲ್ಲದೇ ಇರುವವರು ಸಹ ತ್ವರಿತ ಗತಿಯಲ್ಲಿ ಆಧ್ಯಾತ್ಮಿಕ ದರ್ಶನವನ್ನು ಸಾಕ್ಷಾತ್ಕರಿಸಿಕೊಂಡಿದ್ದಾರೆ. ಏಕೆಂದರೆ, ಅವರು ಪ್ರಾಮಾಣಿಕರಾಗಿದ್ದು, ಅನುಗ್ರಹದಲ್ಲಿ ನಂಬಿಕೆಯನ್ನು ಹೊಂದಿದ್ದರು. ಇತಿಹಾಸವು ಕಂಡ ಆಧ್ಯಾತ್ಮಿಕ ದರ್ಶನ ಮತ್ತು ಸಾಮಾನ್ಯ ಆಧ್ಯಾತ್ಮಿಕ ಅನುಭವಗಳನ್ನು ಏತಕ್ಕಾಗಿ ಚರ್ಚಿಸಬೇಕು ಮತ್ತು ನಿರಾಕರಿಸಬೇಕು ಎಂಬ ಗೊಂದಲದ ವಿವಾದಗಳೇ ನನಗೆ ಅರ್ಥವಾಗುತ್ತಿಲ್ಲ. ಇಲ್ಲಿ ಶಕ್ತಿ ಎಂಬುದು ಆಧ್ಯಾತ್ಮಿಕ ದರ್ಶನದ ಸಾಕ್ಷಾತ್ಕಾರಕ್ಕೆ ಅತ್ಯವಶ್ಯಕವಾದ ಅಂಶವಾಗಿದೆ. ಈ ಶಕ್ತಿಗೂ ಮೀರಿದ ಅಂಶವೆಂದರೆ ಪ್ರಾಮಾಣಿಕತೆ, ಕೊನೆಗೆ ಇವೆಲ್ಲಕ್ಕೂ ಅತೀತವಾದ ಅಂಶವೆಂದರೆ ಅದು ದೈವೀ ಕೃಪೆಯಾಗಿದೆ. ಉದಾಹರಣೆಗೆ ಓರ್ವ ವ್ಯಕ್ತಿಯು ಪ್ರಾಮಾಣಿಕನಾಗಿದ್ದರೆ ಅವನು ದೀರ್ಘ ವಿಳಂಬ ಮತ್ತು ಅಗಾಧ ತೊಂದರೆಗಳ ನಡುವೆಯೂ ಸಾಗಿ ಔನ್ನತ್ಯವನ್ನು ಮುಟ್ಟುತ್ತಾನೆ. ಹಾಗಾಗಿಯೇ ಗೀತೆಯಲ್ಲೂ ಅದರ ಉಲ್ಲೇಖವಿದೆ, ಅದನ್ನೇ ನಾನು ಪದೇ ಪದೇ ತಿಳಿಸುತ್ತಿರುತ್ತೇನೆ.

“ನಾನು ನಿನ್ನನ್ನು ಎಲ್ಲಾ ಪಾಪ ಮತ್ತು ಕೆಟ್ಟತನದಿಂದ ಪಾರುಮಾಡುತ್ತೇನೆ, ದುಃಖಿಸಬೇಡ.”

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/172 – ಶ್ರೀ ಅರವಿಂದರು**

## ಶ್ರೀ ಅರವಿಂದರ
## 'ಗೀತಾ ಪ್ರಬಂಧಗಳು'

**– ಅನುವಾದ: ಜಾನ್ವಿ**

**30**

### ಅಧ್ಯಾಯ – 23
### ನಿರ್ವಾಣ ಮತ್ತು ಜಾಗತಿಕ ಕರ್ಮ (23/1)

ತನ್ನ ಸಮಗ್ರ ಸತ್ತೆಯನ್ನು ಯೋಗ ಸಾಧನೆಯಲ್ಲಿ ತೊಡಗಿಸುವುದರ ಮೂಲಕ ವ್ಯಕ್ತಿಯು (ಜೀವಾತ್ಮ) ಪರಮಾತ್ಮನ ಜೊತೆ ಸಂಪೂರ್ಣ ಏಕತೆ ಸಾಧಿಸುವುದು ಸಾಧ್ಯ ಎಂಬುದು ಗೀತೆಯ ಬೋಧನೆಯ ಸಾರ. ಆದರೆ ಅದು ಕೇವಲ ಸಂಕುಚಿತವಾದ ಜ್ಞಾನ ಮಾರ್ಗವನ್ನು ಮಾತ್ರ ಬೋಧಿಸುವುದಿಲ್ಲ; ಏಕೆಂದರೆ ಜ್ಞಾನ ಮಾರ್ಗವು ಅಕ್ಷರ ಬ್ರಹ್ಮನ ಜೊತೆಗೆ ಮಾತ್ರ ಏಕತೆಯನ್ನು ಹೇಳುವುದು. ಗೀತೆಯು ಇದನ್ನು ಒಪ್ಪುವುದಿಲ್ಲ. ಅದು ಜ್ಞಾನ ಮತ್ತು ಕರ್ಮಗಳನ್ನು ಪರಿಣಾಮಕಾರಿಯಾಗಿ ಸಮನ್ವಯ ಮಾಡಿದ ಮೇಲೆ, ಅದರ ಜೊತೆಗೆ ಪ್ರೇಮ, ಭಕ್ತಿಗಳನ್ನು ಜೋಡಿಸುತ್ತದೆ. ಈ ಸಂಯುಕ್ತ ಮಾರ್ಗವೇ ಪರಮ ರಹಸ್ಯದ ದಾರಿ ಎಂದು ಗೀತೆ ಸಾರುತ್ತದೆ. ಕೇವಲ ನಿರ್ವಿಕಾರ, ಅಕ್ಷರ ಬ್ರಹ್ಮನ ಜೊತೆ ಮಾತ್ರ ಏಕತೆಯನ್ನು ಹೇಳಿದರೆ, ಅದು ಪರಮೋಚ್ಚ ರಹಸ್ಯ ಮಾರ್ಗವಾಗಲಾರದು; ಏಕೆಂದರೆ ಸಾಧನೆಯ ಒಂದು ಹಂತದಲ್ಲಿ ಪ್ರೇಮ ಮತ್ತು ಭಕ್ತಿಗೆ ಬೇಕಾಗಿರುವ ಆಂತರಿಕ ಆಧಾರವು ನಾಶವಾಗುವಂತೆಯೇ ಕರ್ಮ ಯೋಗಕ್ಕೆ ಅವಶ್ಯವಿರುವ ಆಂತರಿಕ ಆಧಾರವೂ ನಷ್ಟವಾಗುವುದು. ಕೇವಲ ಅಕ್ಷರ ಬ್ರಹ್ಮನ ಜೊತೆಗಿನ ತಾದಾತ್ಮ್ಯವು ಕ್ಷರ ಪುರುಷನ ಪರಿಕಲ್ಪನೆಯನ್ನೇ ನಿರರ್ಥಕಗೊಳಿಸುವುದು, ಕೇವಲ ಕ್ಷರ ಪುರುಷನ ನಿಮ್ನ ಕಾರ್ಯಗಳನ್ನು ಮಾತ್ರವಲ್ಲ ಅದರ ಮೂಲ ಅಸ್ತಿತ್ವವನ್ನೇ ಅದು ಪ್ರಶ್ನಿಸುವುದು. ಕ್ಷರ ಪುರುಷನ ಅಜ್ಞಾನಮಯ ಕಾರ್ಯಗಳನ್ನು ಮಾತ್ರವಲ್ಲ ಅದು ಅವನ ಜ್ಞಾನಮಯ ಕರ್ಮಗಳನ್ನು ಕೂಡ ನಿರಾಕರಿಸಿ ಬಿಡುವುದು. ಅಕ್ಷರ ಬ್ರಹ್ಮನ ಜೊತೆಗಿನ ಏಕತೆಯೇ ಪರಮ ಸಿದ್ಧಿ ಎಂದು ಹೇಳಿದರೆ ಜೀವಾತ್ಮ ಮತ್ತು ಪರಮಾತ್ಮ ಇವರ ನಡುವಿನ ಪ್ರಜ್ಞಾಯುಕ್ತ ಸಮತೆ ಮತ್ತು ಕಾರ್ಯಗಳನ್ನು ಸಂಪೂರ್ಣವಾಗಿ ಅಲ್ಲಗಳೆದಂತಾಗುವುದು. ಇದೇ ನಿಜವಾಗಿ ಕ್ಷರ ಮತ್ತು ಅಕ್ಷರ ಬ್ರಹ್ಮ ಇವರ ನಡುವಿನ ಲೀಲೆ; ಈ ಲೀಲೆಗೆ ಆಗ ಅರ್ಥವೇ ಉಳಿಯುವುದಿಲ್ಲ. ಏಕೆಂದರೆ ಕ್ಷರ ಪುರುಷನ ಕರ್ಮಗಳೆಲ್ಲವೂ ಅಜ್ಞಾನಮಯವಾಗಿ ಬಿಡುವುವು, ಅಲ್ಲಿ ದೈವೀ ಅಂಶವು

ಕಿಂಚಿತ್ತೂ ಇಲ್ಲವೆಂದು ಹೇಳಿದಂತಾಗಿ ಬಿಡುವುದು, ಸಂಪೂರ್ಣ ವ್ಯವಹಾರವೇ ಮಿಥ್ಯೆಯಾಗಿಬಿಡುವುದು. ಇದಕ್ಕೆ ವಿಪರೀತವಾಗಿ ಯೋಗ ಸಾಧನೆಯ ಮೂಲಕ ಪುರುಷೋತ್ತಮನ ಜೊತೆ ಒಂದಾಗುವುದೆಂದರೆ, ಅವನ ಜೊತೆಗೆ ನಮಗಿರುವ ಏಕತೆಯ ಜ್ಞಾನವನ್ನು, ಆನಂದವನ್ನು ಅನುಭವಿಸುವುದು – ಇದನ್ನು ನಮ್ಮ ಸ್ವಯಂ ಅಸ್ತಿತ್ವವುಳ್ಳ ಆತ್ಮ ಸ್ಥಾಯಿಯಲ್ಲಿ ಹಾಗೂ ಸ್ವಲ್ಪ ಮಟ್ಟಿಗಿನ ಭೇದದೊಂದಿಗೆ ನಮ್ಮ ಪ್ರಕ್ರಿಯೆ ಆತ್ಮ ಸ್ಥಾಯಿಯಲ್ಲಿ ಎಂದು ಅರ್ಥ – ಸಕ್ರಿಯ ಆತ್ಮ ಸ್ಥಾಯಿಯಲ್ಲಿ ನಿಂತು ಈಶ್ವರೀ ಆನಂದವನ್ನು ಅನುಭವಿಸುವುದು ದೈವೀ ಪ್ರೇಮ, ಭಕ್ತಿಯ ನಿಜವಾದ ಉದ್ದೇಶ ಮತ್ತು ಆಶಯ. ಇದು ದೈವೀ ಪ್ರಕೃತಿಯು ಪರಿಪೂರ್ಣವಾಗಿ ಸ್ಥಾಪಿತವಾದಾಗ ಮಾತ್ರ ಸಾಧ್ಯವಾಗುವುದು. ಇದನ್ನೇ ಪರಮಾತ್ಮನ ದರ್ಶನ ಅಥವಾ ಸಾಕ್ಷಾತ್ಕಾರ ಎಂದು ಕರೆಯುವುದು, – ಮುಕ್ತನಾದ ಜೀವಾತ್ಮನಿಗೆ ಈ ರೀತಿ ಕರ್ಮ ಮತ್ತು ಭಕ್ತಿ ಸಿದ್ಧಿಸುವುದಲ್ಲದೇ ಇದು ಅವನ ಸಂಪೂರ್ಣ ಸತ್ತೆಯಲ್ಲಿ ಅನಿವಾರ್ಯವಾಗಿ ನೆಲೆಗೊಂಡು ದೈವೀ ಕರ್ಮ ಮತ್ತು ದೈವೀ ಪ್ರೇಮಗಳ ಮಧುರ ಸಮ್ಮಿಶ್ರಣದ ಪ್ರಕಟನೆಯಾಗುವುದು.

ಆದರೆ ಪರಮಾತ್ಮನ ಜೊತೆ ಏಕತೆ ಸಾಧಿಸುವ ಏಕೈಕ, ದೃಢವಾದ ಹಾಗೂ ನೇರವಾದ ದಾರಿಯೆಂದರೆ ಅಕ್ಷರ ಬ್ರಹ್ಮನ ಸಾಕ್ಷಾತ್ಕಾರ; ಭಗವಂತನ ಅಥವಾ ಆತ್ಮ ಸಾಕ್ಷಾತ್ಕಾರವಾದ ನಂತರವೇ ಕರ್ಮ ಮತ್ತು ಭಕ್ತಿಗಳ ಸಂಗವು ದೈವೀ ಅರ್ಥವನ್ನು ಪಡೆಯಲು ಸಾಧ್ಯವಾಗುವುದು. ಆದ್ದರಿಂದಲೇ ಗೀತೆಯು ಆತ್ಮ ಸಾಕ್ಷಾತ್ಕಾರವನ್ನು ಅಥವಾ ಅಕ್ಷರ ಬ್ರಹ್ಮನ ಸಾಕ್ಷಾತ್ಕಾರವನ್ನು ಒತ್ತು ನೀಡಿ ಹೇಳುತ್ತದೆ. ಆದರೆ ಗೀತೆಯ ಈ ನಿಲುವೇ ಅದನ್ನು ಅಪಾರ್ಥಮಾಡಿಕೊಳ್ಳಲು ಎಡೆಮಾಡಿಕೊಟ್ಟಿದೆ. ಗೀತೆಯು ಎಲ್ಲೆಲ್ಲಿ ಈ ಅಕ್ಷರ ಬ್ರಹ್ಮನ ಸಾಕ್ಷಾತ್ಕಾರವನ್ನು ಕುರಿತು ಹೇಳುವುದೋ ಅವನ್ನಷ್ಟೇ ಎತ್ತಿಕೊಂಡು, ಗೀತೆಯ ಉಳಿದ ಸಮಗ್ರ ವೈಚಾರಿಕ ಪ್ರಸ್ತುತಿಯನ್ನೇ ನಿರ್ಲಕ್ಷಿಸಿಬಿಟ್ಟರೆ, ಗೀತೆಯು ಕೇವಲ ನಿಷ್ಕ್ರಿಯ ಬ್ರಹ್ಮನ ಜೊತೆಗಿನ ಏಕತೆಯನ್ನು ಮಾತ್ರ ಹೇಳುವುದು, ಅಕ್ಷರ ಬ್ರಹ್ಮನಲ್ಲಿ ಲೀನವಾಗಿಬಿಡುವುದೇ ಅಂತಿಮ ಗುರಿ ಎಂದು, ನಂತರದ ಕರ್ಮಗಳೇನಾದರೂ ಇದ್ದರೆ ಅವು ನಿಶ್ಚಲ ಬ್ರಹ್ಮನಲ್ಲಿ ಸೇರಿ ಹೋಗುವ ಪ್ರಾಥಮಿಕ ಹಂತ ಅಥವಾ ಹೆಜ್ಜೆಗಳೆಂದೂ ನಾವು ನಿರ್ಣಯಕ್ಕೆ ಬಂದು ಬಿಡಬಹುದಾದ ಸಾಧ್ಯತೆ ಇರುವುದು. ಗೀತೆಯ 5ನೆಯ ಅಧ್ಯಾಯದ ಕೊನೆಯಲ್ಲಿ ಹಾಗೂ ಇಡೀ 6ನೆಯ ಅಧ್ಯಾಯದ ತುಂಬೆಲ್ಲ ಅಕ್ಷರ ಬ್ರಹ್ಮನ ಜೊತೆ ಏಕಾತ್ಮ ಹೊಂದುವುದನ್ನು ಬಹು ಗಟ್ಟಿಯಾಗಿ, ವಿಸ್ತಾರವಾಗಿ ಹೇಳಲಾಗಿದೆ. ಅಲ್ಲಿ ಹೇಳಲಾದ ಯೋಗವನ್ನು

ಗಮನಿಸಿದಾಗ ಮೊದಮೊದಲು ನಮಗೆ ಕರ್ಮ ಯೋಗದ ಜೊತೆ, ಕರ್ಮಗಳ ಜೊತೆ ಹೊಂದಾಣಿಕೆಯಾಗುವುದಿಲ್ಲವೆಂದೆನಿಸುವುದು. ಅಲ್ಲಿ ನಿರ್ವಾಣ ಎಂಬ ಶಬ್ದವನ್ನು ಪದೇ ಪದೇ, ಅನೇಕ ಸಲ ಉಪಯೋಗಿಸಿರುವುದನ್ನು ಗಮನಿಸಬೇಕು, ಸಾಮಾನ್ಯವಾಗಿ ಯೋಗಿಯು ಈ "ನಿರ್ವಾಣ" ಸ್ಥಿತಿಯನ್ನೇ ತಲುಪುವುನು ಎಂದು ಹೇಳಲಾಗಿದೆ.

ಈ ಬ್ರಹ್ಮ ನಿರ್ವಾಣ ಸ್ಥಿತಿಯ ಪ್ರಮುಖ ಚಿಹ್ನೆ ಎಂದರೆ ಆತ್ಮ ವಿಲಯನ, ಅಸ್ತಿತ್ವದ ಕೊನೆ ಹಾಗೂ ಪರಮ ಶಾಂತಿಯ ಪ್ರಸಾದ ಶಾಂತಿಂ ನಿರ್ವಾಣ. ಪರಮಾಮ್ (5/21). ಇದನ್ನು ಸ್ಪಷ್ಟಪಡಿಸಿ ಹೇಳುವುದಾದರೆ, ಇದು ಬುದ್ಧನ ನಿರ್ವಾಣವಲ್ಲ, ಬುದ್ಧನ ಪರಿಕಲ್ಪನೆಯಾದ ನಿರ್ವಾಣದಲ್ಲಿ "ಆತ್ಮದ ಅಸ್ತಿತ್ವವನ್ನೇ ಅಲ್ಲಗಳೆದು ಅಲ್ಲಿ ಒಂದು ರೀತಿಯ ಸಮಗ್ರ ನಿರಾಕರಣೆಯ ಮೂಲಕ ನಿರ್ವಾಣ ಸ್ಥಿತಿಯನ್ನು ಪಡೆಯುವುದಾಗಿದೆ". ಈ ನಿರಾಕರಣೆ ಆನಂದದಾಯಕವಾಗಿರುವುದು ನಿಜವಾದರೂ ಇದು ವೇದಾಂತದ ಬ್ರಹ್ಮ ನಿರ್ವಾಣಕ್ಕಿಂತ ಭಿನ್ನವಾಗಿದೆ. ವೇದಾಂತದಲ್ಲಿ ಯಾವಾಗಲೂ "ಬ್ರಹ್ಮ ನಿರ್ವಾಣ"ವೆಂಬ ಪದವನ್ನೇ ಬಳಸಲಾಗುತ್ತಿದ್ದು, ಇಲ್ಲಿ ಬ್ರಹ್ಮನ ಅಂಶಿಕ ಅಸ್ತಿತ್ವವು ತನ್ನ ಪರಿಪೂರ್ಣ, ಸಂಪೂರ್ಣ ಅಸ್ತಿತ್ವದಲ್ಲಿ ಕೂಡಿಕೊಳ್ಳುವ ಅವಸ್ಥೆ ಅಭಿಪ್ರೇತವಾಗಿದೆ. ಇಲ್ಲಿ ಬ್ರಹ್ಮ ಎಂದರೆ ನಿಶ್ಚಿತವಾಗಿಯೂ ಅಕ್ಷರ, ಅವಿಕಾರ್ಯ ಸತ್ತೆಯಾಗಿದ್ದು, ನಮ್ಮ ಬಾಹ್ಯ ಸತ್ತೆಯು ಪ್ರಕೃತಿಯ ಎಲ್ಲ ಚಲನೆಗಳಲ್ಲಿ ತೊಡಗಿ–ಕೊಂಡಿದ್ದರೂ ಆಂತರಿಕ ಸತ್ತೆ(ಜೀವಾತ್ಮ)ಯು ಇವುಗಳಿಂದ ವಿಮುಖವಾಗಿ, ಕಾಲ ದೇಶಗಳ ಗಣತಿಯನ್ನು ಮೀರಿ ಅಕ್ಷರ ಬ್ರಹ್ಮನ ಜೊತೆ ಒಂದಾಗುವ ಅವಸ್ಥೆಯಾಗಿದೆ. ನಾವಿಲ್ಲಿ ತೀರ ಲಕ್ಷ್ಯವಹಿಸಿ ನೋಡಬೇಕಾಗಿರುವುದೇನೆಂದರೆ, ಗೀತೆಯು ಇಲ್ಲಿ ಯಾವ ಅರ್ಥವನ್ನು ಸೂಚಿಸುತ್ತಿದೆ? ವಿಶೇಷವಾಗಿ ಈ ಅವಸ್ಥೆಯಲ್ಲಿ ಅದು ಹೇಳುವ ಶಾಂತಿಯು ಪೂರ್ಣತಃ ನಿಷ್ಕ್ರಿಯ ಅವಸ್ಥೆಯ ಶಾಂತಿಯೇ? ಅಕ್ಷರ ಬ್ರಹ್ಮನಲ್ಲಿ ಒಂದಾಗುವುದೆಂದರೆ ಕ್ಷರ ಪುರುಷನ ಎಲ್ಲ ಜ್ಞಾನ ಹಾಗೂ ಪ್ರಜ್ಞೆ, ಜೊತೆಗೆ ಅವನ ಎಲ್ಲ ಕರ್ಮಗಳ ಲಯ ಎಂದರ್ಥವೇ? ನಿರ್ವಾಣ ಮತ್ತು ಅದಕ್ಕೆ ಸಂಬಂಧಿಸಿದಂತೆ ಶೂನ್ಯ ಅಸ್ತಿತ್ವ ಹಾಗೂ ಕಾರ್ಯಗಳನ್ನು ಈ ಪ್ರಾತ್ಯಕ್ಷಿಕ ಜಗತ್ತಿನ ಮಟ್ಟಿಗೆ ಅಸಮಂಜಸ, ಅಸಮರ್ಪಕ ಎಂಬ ಭಾವನೆ ನಮ್ಮಲ್ಲಿ ಸಹಜವಾಗಿ ಇದೆ ಮತ್ತು ನಾವು ಅದಕ್ಕೆ ಗಟ್ಟಿಯಾಗಿ ಜೋತುಬಿದ್ದಿದ್ದೇವೆ. ನಿರ್ವಾಣ ಎಂಬ ಶಬ್ದವೊಂದೇ ಸಾಕು ಎಲ್ಲವನ್ನೂ ನಿರಾಕರಿಸಿಬಿಡುವುದು ಎಂಬ ನಿಲುವನ್ನು ತಾಳಿದ್ದೇವೆ. ಆದರೆ ಬೌದ್ಧ ಮತವನ್ನು ಆಪ್ತವಾಗಿ ಪರಿಶೀಲಿಸಿದರೆ, ಈ ರೀತಿಯ ಅಸಮಂಜಸತೆಯು

ಬೌದ್ಧರಿಗಾದರೂ ಒಪ್ಪಿಗೆ ಇದೆಯೇ, ಇಲ್ಲವೇ ಎಂಬುದು ನಮಗೆ ಗೊತ್ತಾಗುತ್ತದೆ. ಗೀತೆಯನ್ನು ಕೂಡ ಹತ್ತಿರದಿಂದ ಗಮನಿಸಿದಾಗ ಈ ಅಸಮಂಜಸತೆ, ನಿರ್ವಾಣ ಶಬ್ದದಿಂದ ನಾವು ಅರ್ಥೈಸಿಕೊಳ್ಳುವ ನಿಷ್ಕ್ರಿಯತೆಯ ಭಾವವು ವೇದಾಂತದ ಬೋಧನೆಯಲ್ಲಿ ಇಲ್ಲವೆಂಬುದು ಅರಿವಾಗುತ್ತದೆ.

ಬ್ರಹ್ಮಜ್ಞನ, ಬ್ರಾಹ್ಮೀ ಸ್ಥಿತಿಯಲ್ಲಿ ನೆಲೆಸಿದವನ (ಬ್ರಹ್ಮವಿತ್ ಬ್ರಾಹ್ಮಣಿಸ್ಥಿತಃ) ಪೂರ್ಣ ಸಮದೃಷ್ಟಿಯನ್ನು ವಿವರಿಸಿದನಂತರ ಮುಂದಿನ 9 ಶ್ಲೋಕಗಳಲ್ಲಿ ಬ್ರಹ್ಮ ಯೋಗ, ಬ್ರಹ್ಮ ನಿರ್ವಾಣ, ವ್ಯಕ್ತಿಗತ ಆತ್ಮವನ್ನು ಬ್ರಹ್ಮನಲ್ಲಿ ಲೀನಗೊಳಿಸುವುದು ಇವೆಲ್ಲವನ್ನು ಗೀತೆಯು ತನ್ನದೇ ಆದ ರೀತಿಯಲ್ಲಿ ತನ್ನದೇ ಆದ ದೃಷ್ಟಿಕೋನವನ್ನು ಮಂಡಿಸುತ್ತದೆ (5/21–29). ಇವುಗಳ ಪೈಕಿ ಮೊದಲ ಶ್ಲೋಕ ಹೀಗಿದೆ: ಬಾಹ್ಯ ಸ್ಪರ್ಶ ವಿಷಯಗಳಲ್ಲಿ ಯಾರಿಗೆ ನಿರಾಸಕ್ತಿಯುಂಟಾಗಿದೆಯೋ, ಅವನಿಗೆ ತನ್ನ ಅಂತರಂಗದಲ್ಲಿ, ತನ್ನ ಆತ್ಮದಲ್ಲಿ ಇರುವ ಶಾಶ್ವತವಾದ ಸುಖದ ಪ್ರಾಪ್ತಿಯಾಗುತ್ತದೆ. ಅಂಥ ವ್ಯಕ್ತಿಯು ಅನಶ್ವರ ಸುಖವನ್ನು ಅನುಭವಿಸುತ್ತಾನೆ. ಏಕೆಂದರೆ ಅವನು ಬ್ರಹ್ಮ ಯೋಗ ಮುಕ್ತನಾಗಿರುತ್ತಾನೆ, ಅವನು ಬ್ರಹ್ಮನಲ್ಲಿ ಏಕತ್ವ ಹೊಂದಿರುತ್ತಾನೆ (5/21). ಗೀತೆಯು ಹೇಳುತ್ತದೆ: ಬಯಕೆಗಳು, ಕ್ರೋಧ ಮತ್ತು ಆವೇಶಗಳಿಂದ ಮುಕ್ತನಾಗ–ಬೇಕಾದರೆ ನಿಸ್ಸಂಗತ್ವ, ನಿರಾಸಕ್ತ ಬೇಕೆಬೇಕು, ನಿಜವಾದ ನಿಸ್ಸಂಗತ್ವವಿಲ್ಲದೇ ನಿಜವಾದ ಸುಖ ದೊರೆಯಲಾರದು. ಆ ಸಂತೋಷವನ್ನು, ಆ ಸಮತೆಯನ್ನು ಸಾಧಕನು ತನ್ನ ಶರೀರದಲ್ಲಿ ಧಾರಣ ಮಾಡಬೇಕು. ನಿಮ್ನ ಪ್ರಕೃತಿಯ ಯಾವುದೇ ರೀತಿಯ ವಿಕಾರಗಳಿಗೆ, ತೊಂದರೆಗಳಿಗೆ ಕಿಂಚಿತ್ತು ಸಹ ದಾಸನಾಗಿರಬಾರದು, ಅವುಗಳ ಬಂಧನವನ್ನು ಸಂಪೂರ್ಣವಾಗಿ ಕಿತ್ತೆಸೆಯಬೇಕು; ಶರೀರವನ್ನು ತ್ಯಾಗಮಾಡಿದರೆ ಸಾಕು ಪರಿಪೂರ್ಣ ಮೋಕ್ಷ ಸಿಕ್ಕೀತು ಎಂಬ ಭ್ರಮೆಯಲ್ಲಿ ಬೀಳಬಾರದು. ಪರಿಪೂರ್ಣವಾದ ಆಧ್ಯಾತ್ಮಿಕ ಮೋಕ್ಷವನ್ನು ಈ ಭೂಮಿಯ ಮೇಲಿನ ಜೀವನದಲ್ಲಿಯೇ ಸಾಧಿಸಬೇಕು, ತನ್ನ ಮಾನವೀಯ ಜೀವನದಲ್ಲೇ ಸಾಧಿಸಿ ಅನುಭವಿಸಬೇಕು – ಪ್ರಾಕ್ ಶರೀರ ವಿಮೋಕ್ಷಣಾತ್ (5/23) ಯಾರು ಈ ಆಂತರಿಕ ಸಂತೋಷವನ್ನು ಹೊಂದಿರುವುರೋ, ಆಂತರಿಕ ಶಾಂತಿ ಮತ್ತು ಸಮಾಧಾನ ಮತ್ತು ಆಂತರಿಕ ಬೆಳಕು (ಜ್ಞಾನ) ಹೊಂದಿರುವುರೋ ಅಂಥ ಯೋಗಿಗಳು ಬ್ರಹ್ಮನೇ ಆಗಿಬಿಡುವುರು, ಬ್ರಹ್ಮ ನಿರ್ವಾಣವನ್ನು ಹೊಂದುವುದು (5/24). ಇಲ್ಲಿ ಸ್ಪಷ್ಟವಾಗಿ ಹೇಳಿದಂತೆ ನಿರ್ವಾಣ ಎಂದರೆ ಅಹಂಕಾರದ ನಾಶ, ಉನ್ನತವಾದ ಆಧ್ಯಾತ್ಮಿಕ, ಅಂತರಾತ್ಮನಲ್ಲಿ ಲೀನನಾಗುವುದು. ದೇಶ ಕಾಲಗಳಿಂದ

ಆಚೆಗಿರುವ, ಕಾರ್ಯಕಾರಣಗಳ ಸಂಕೋಲೆಗಳಿಂದ ದೂರವಾಗಿರುವ, ಜಗತ್ತಿನ ವಿಕಾರಗಳಿಂದ ಮುಕ್ತವಾಗಿರುವ, ಸ್ವಯಂ ಆನಂದದಲ್ಲಿ, ಆತ್ಮಾನಂದದಲ್ಲಿ, ಆತ್ಮ ಜ್ಞಾನದಿಂದ ಶಾಶ್ವತ ಶಾಂತಿಯನ್ನು ಹೊಂದಿ ಅದರಲ್ಲಿ ಏಕೀಭವಿಸುವುದು ಎಂದರ್ಥ ಅಂಥ ಯೋಗಿಯಾದವನಲ್ಲಿ ಅಹಂ ಇರುವುದಿಲ್ಲ. ಮನಃ ಪ್ರಾಣ ಶರೀರಗಳ ಸಂಕುಚಿತ ವ್ಯಕ್ತಿತ್ವದಲ್ಲಿ ಅವನು ಬಂಧಿತನಾಗಿರುವುದಿಲ್ಲ, ಅವನು ಬ್ರಹ್ಮನೇ ಆಗುವುನು. ತನ್ನ ಪ್ರಜ್ಞೆಯಲ್ಲಿ ಅವನು ಅಕ್ಷರ ಬ್ರಹ್ಮನ ಜೊತೆ ಒಂದಾಗಿರುತ್ತಾನೆ. ಅವಿಕಾರಿಯಾದ ಈ ಬ್ರಹ್ಮ ತತ್ತ್ವ ಅವನ ಅಂತರಂಗದಲ್ಲಿಯೇ ಸಹಜವಾಗಿ ನಿತ್ಯ ಇರುವಂಥದು; ಅದನ್ನು ಗುರುತಿಸಿ ಅದರ ಜೊತೆ ಒಂದಾಗುವುದೇ ಬ್ರಹ್ಮ ನಿರ್ವಾಣ ಸ್ಥಿತಿಯಾಗಿದೆ.

ಈ ನಿರ್ವಾಣ ಸ್ಥಿತಿಯು ಪ್ರಾಪಂಚಿಕ ಜ್ಞಾನ, ಸಂಪರ್ಕದಿಂದ ದೂರವಾಗಿ ಸಮಾಧಿಯ ಗಾಢ ನಿದ್ರೆಯಲ್ಲಿ ಅಥವಾ ಯೋಗ ನಿದ್ರೆಯಲ್ಲಿ ಪ್ರಾಪ್ತಿಯಾಗುವುದೇ? ಅಥವಾ ಪ್ರಕೃತಿಯ ವ್ಯವಹಾರದಾಚೆಗಿರುವ ಸರ್ವ ನಿರಪೇಕ್ಷ ಆತ್ಮ self ನಲ್ಲಿ (ಬ್ರಹ್ಮನಲ್ಲಿ) ವಿಲೀನಹೊಂದಿ ನಷ್ಟವಾಗಿ ಹೋಗಿಬಿಡುವ ಪ್ರಕ್ರಿಯೆಯ ಪೂರ್ವ ತಯಾರಿಯೇ? ನಿರ್ವಾಣವನ್ನು ಪ್ರವೇಶಿಸುವ ಪೂರ್ವದಲ್ಲಿ ಈ ರೀತಿಯ, ಪ್ರಕೃತಿಯ ಕಾರ್ಯಗಳಿಂದ ನಿರಂತರ ದೂರವಾಗಿರುವ ಪರಮ ಆತ್ಮವನ್ನು ಹೊಂದಿ ಲಯವಾಗಿ ಹೋಗುವುದು ಅವಶ್ಯವಿದೆಯೇ? ಅಥವಾ ಗೀತೆಯ ಸಂದರ್ಭ ಸೂಚಿಸುವಂತೆ ನಿರ್ವಾಣವು ಜಾಗತಿಕ ಪ್ರಜ್ಞೆಯ ಜೊತೆ ಜೊತೆಗೆ ಸಹಜವಾಗಿ ಇರಬಹುದಾದ ಅವಸ್ಥೆಯೇ? ನಿರ್ವಾಣದಲ್ಲಿ ವಿಶ್ವ ಪ್ರಕೃತಿಯ ಕಾರ್ಯಗಳಿಗೆ ಸ್ಥಾನವಿದೆಯೇ? ಮೇಲ್ನೋಟಕ್ಕೇನೇ ಸ್ಪಷ್ಟವಾಗಿ ಗೊತ್ತಾಗುವಂತೆ ನಿರ್ವಾಣದಲ್ಲಿ ವಿಶ್ವ ಪ್ರಜ್ಞೆ ನಾಶವಾಗಬೇಕೆಂದೇನಿಲ್ಲ. ಏಕೆಂದರೆ ಮುಂದಿನ ಶ್ಲೋಕಗಳಲ್ಲಿ ಗೀತೆ ಹೀಗೆ ವಿವರಿಸುತ್ತದೆ; ಬ್ರಹ್ಮ ನಿರ್ವಾಣವನ್ನು ಹೊಂದಿದ ಋಷಿಗೆ ಪಾಪ ಪುಣ್ಯಗಳಿರುವುದಿಲ್ಲ, ಅವನು ಅಪಹೃತ ಪಾಪ್ಮಾ ಆಗಿರುತ್ತಾನೆ. ಅವನಲ್ಲಿ ಸಂಶಯ, ಸಂದೇಹಗಳ ಗಂಟು ಬಿಚ್ಚಿ ಹೋಗಿರುವುದು, ಅವನಲ್ಲಿ ತನ್ನ ಅಸ್ತಿತ್ವದ ಮೇಲೆ ವಿಜಯ ಸಿದ್ಧಿಸಿರುವುದು. ಅವನಲ್ಲಿ ಪ್ರಪಂಚದ ಸಕಲ ಜೀವಿಗಳ ಬಗ್ಗೆ ವಿಶೇಷ ಪ್ರೀತಿ ಇರುವುದು, ಅವನು "ಸರ್ವಭೂತಹಿತೇ ರತಾಃ" ಅಂದರೆ ಸಕಲ ಜೀವರಾಶಿಗಳಿಗೆ ಒಳ್ಳೆಯದನ್ನೇ ಮಾಡುವವನಾಗಿರುತ್ತಾನೆ (5/25). ಇದರ ಅರ್ಥವೇನೆಂದರೆ ಯಾರು ಈ ರೀತಿ ಪಾಪದೂರ ಬ್ರಹ್ಮ ನಿರ್ವಾಣ ಸ್ಥಿತಿಯನ್ನು ಹೊಂದಿರುವುರೋ ಅವರು ಸರ್ವಭೂತ ಹಿತೇ ರತಾಃ ಸಕಲ ಜೀವರಾಶಿಗಳನ್ನು ಪ್ರೀತಿಯಿಂದ ಕಾಣುವುರು ಮತ್ತು ಸಮಗ್ರ ವಿಶ್ವದ ಹಿತ ಚಿಂತನೆ ಮಾಡುವುರು, ಅಂಥವರು ನಿಶ್ಚಯವಾಗಿ ನಿರ್ವಾಣ ಸ್ಥಿತಿಯನ್ನೇ ಪಡೆದಿರುತ್ತಾರೆ. ಇದರ ಮುಂದಿನ

ಶ್ಲೋಕದಲ್ಲಂತೂ ಇದನ್ನೇ ಸ್ಪಷ್ಟವಾಗಿ ಹಾಗೂ ಖಚಿತವಾಗಿ ಹೇಳಿರುವುದನ್ನು ಕಾಣಬಹುದು. "ಆತ್ಮ ಸಂಯಮನ, ಆತ್ಮ ಪ್ರಭುತ್ವವನ್ನು ಯೋಗದ ಮೂಲಕ ಸಾಧಿಸಿರುವ ಯತಿಗಳು ಆಶೆ, ಬಯಕೆ, ಕಾಮನೆಗಳಿಂದ ಮುಕ್ತರಾಗಿರುತ್ತಾರೆ, ಅವರಲ್ಲಿ ಕ್ರೋಧ ಇರುವುದಿಲ್ಲ, ತಮ್ಮ ಮೇಲೆ ಅವರಿಗೆ ಪ್ರಭುತ್ವ ಸಿದ್ಧಿಸಿರುತ್ತದೆ. ಅವರಿಗೆ ಸುತ್ತಲೆಲ್ಲೂ ಬ್ರಹ್ಮ ನಿರ್ವಾಣ ಸ್ಥಿತಿಯೇ ಕಾಣುವುದು, ಅವರನ್ನದು ಸುತ್ತುವರಿದಿರುವುದು. ಅವರು ಬ್ರಹ್ಮ ನಿರ್ವಾಣ ಸ್ಥಿತಿಯಲ್ಲಿಯೇ ಇರುತ್ತಾರೆ. ಅವರಿಗೆ ಆತ್ಮ ಜ್ಞಾನವು ಪ್ರಾಪ್ತವಾಗಿರುತ್ತದೆ" (5/26). ಆತ್ಮ ಜ್ಞಾನ ಮತ್ತು ಆತ್ಮ ಜಯ ಸಾಧಿಸುವುದೆಂದರೆ ನಿರ್ವಾಣವನ್ನು ಹೊಂದುವುದು ಎಂಬ ಸ್ಪಷ್ಟ ಅರ್ಥ ಇದರ ಮೇಲಿಂದ ಹೊರಡುವುದು. ಇದು ನಿರ್ವಾಣದ ಪರಿಕಲ್ಪನೆಯ ವಿಸ್ತೃತವಾದ ವಿಸ್ತರಣೆಯಾಗಿದೆ. ಒಟ್ಟಾರೆಯಾಗಿ ಗೀತೆಯು ನಿರ್ವಾಣದ ಸ್ಥಿತಿಯನ್ನು ಹೀಗೆ ವಿವರಿಸುತ್ತದೆ; ಎಲ್ಲ ರೀತಿಯ ಭಾವನೆ, ಆವೇಶಗಳಿಂದ ಮುಕ್ತನಾಗಿರುವುದು, ಈ ಮುಕ್ತಿಯ ಮೇಲೆ ಅವಲಂಬಿತವಾದ ಸಮಾನ ಮನಃಸ್ಥಿತಿಯ ಆತ್ಮ–ಜಯ, ಸರ್ವ ಭೂತಗಳಲ್ಲಿ ದಯೆ, ಸಮತ್ವದ ಭಾವನೆ, ಸರ್ವರಲ್ಲಿ ಸಮಾನ ಪ್ರೀತಿ, ಇವೆಲ್ಲ ನಿರ್ವಾಣದ ಲಕ್ಷಣಗಳಾಗಿವೆ. ಎಲ್ಲ ರೀತಿಯ ಸಂದೇಹ, ಅಸ್ಪಷ್ಟತೆ ಹಾಗೂ ಅಜ್ಞಾನದ ಚಲನೆಗಳು ಸಮೂಲ ನಷ್ಟವಾಗಿ ಹೋಗುವುದು. ಸರ್ವತ್ರ ಏಕತೆಯನ್ನು ಸ್ಥಾಪಿಸುವ ಪರಮಾತ್ಮನ ಅನುಸಂಧಾನವನ್ನು ವಿರೋಧಿಸುವ ಎಲ್ಲ ಕ್ರಿಯೆಗಳು ಸಂಪೂರ್ಣ ನಾಶವಾಗಿ ಹೋಗುವವು. ಗೀತೆಯು ಇಂಥ ನಿರ್ವಾಣವನ್ನು ಪುರಸ್ಕರಿಸುತ್ತದೆ; ನಿರ್ವಾಣದ ಆಧ್ಯಾತ್ಮಿಕ ಸತ್ವವನ್ನು ಅದು ಹೀಗೆ ಪ್ರಸ್ತುತಪಡಿಸುತ್ತದೆ.

ಈ ದೃಷ್ಟಿಯಿಂದ ನೋಡಿದರೆ, ನಿರ್ವಾಣವು ವಿಶ್ವಾತ್ಮಕ ಪ್ರಜ್ಞೆ ಮತ್ತು ಜಾಗತಿಕ ಕರ್ಮಗಳಿಗೆ ಅನುರೂಪವಾಗಿದೆ, ಪೂರಕವಾಗಿದೆ ಎಂಬುದು ಸ್ಪಷ್ಟವಾಗುತ್ತದೆ. ನಿರ್ವಾಣವನ್ನು ಸಾಧಿಸಿದ ಋಷಿಗಳು ಬದಲಾವಣೆ ಹೊಂದುತ್ತಲೇ ಈ ಕ್ಷರ ಜಗತ್ತಿನಲ್ಲಿ ದೈವೀ ಕರ್ಮಗಳನ್ನು ಮಾಡುತ್ತ ಪರಮಾತ್ಮನೊಂದಿಗೆ ಆತ್ಮೀಯ ಸಂಬಂಧದಿಂದ ಬದುಕಿರುವುದನ್ನು ನೋಡಬಹುದು. ಅವರು, ಸರ್ವಭೂತ ಹಿತೇರತಾಃ ಸಕಲ ಜೀವ ರಾಶಿಗಳಿಗೆ ಕಲ್ಯಾಣವನ್ನು ಮಾಡುವುದರಲ್ಲೇ ತಮ್ಮ ಜೀವನ ಸವೆಸಿದರು. ಅವರಾರೂ ಕ್ಷರ ಪುರುಷನ ಅನುಭವವನ್ನು ತಿರಸ್ಕರಿಸಲಿಲ್ಲ, ತ್ಯಾಗ ಮಾಡಲಿಲ್ಲ. ಬದಲಾಗಿ ಅವುಗಳನ್ನು ದೈವೀಕೃತಗೊಳಿಸಿದರು. ಗೀತೆಯು ಹೇಳುವಂತೆ "ಕ್ಷರ" ಎಂದರೆ ಜೀವ ಜಗದಲ್ಲಿನ ಎಲ್ಲ ಭೂತಗಳು (5/15, 16) ಸಕಲ ಭೂತಗಳಿಗೆ ಕಲ್ಯಾಣವನ್ನುಂಟು ಮಾಡುವುದೇ ನಿಜವಾಗಿ ದಿವ್ಯ ಕರ್ಮವು. ಪ್ರಕೃತಿಯ ಬದಲಾವಣೆ ಹೊಂದುತ್ತಲೇ ಇರುವ ಸಂಸಾರದಲ್ಲಿ (ಕ್ಷರ ಪ್ರಕೃತಿ) ದಿವ್ಯ

ಕರ್ಮಗಳನ್ನು ಮಾಡುವುದು ಬ್ರಹ್ಮನಲ್ಲಿ ಸ್ಥಿತವಾಗಿರುವವನಿಗೆ ವಿಸಂಗತವಲ್ಲ. ವಿಶೇಷ ಹೇಳಬೇಕೆಂದರೆ ಅದು ಅನಿವಾರ್ಯ, ಅದು ಆಂತರಿಕ ಸಾಕ್ಷಾತ್ಕಾರದ ಬಾಹ್ಯ ಪರಿಣಾಮ, ಏಕೆಂದರೆ ಬ್ರಹ್ಮನಲ್ಲೇ ನಿರ್ವಾಣವಿದೆ, ಆಧ್ಯಾತ್ಮಿಕ ಪ್ರಜ್ಞೆ ಇದೆ, ಅದರೊಳಗೆ ನಾವು ನಮ್ಮ ಅಹಂ–ಪ್ರಜ್ಞೆಯನ್ನು ಕಳೆದುಕೊಳ್ಳುತ್ತೇವೆ; ಇದು ಕೇವಲ ನಮ್ಮೊಳಗೆ ಮಾತ್ರ ವೈಯಕ್ತಿಕ ಅಸ್ತಿತ್ವವುಳ್ಳದ್ದಲ್ಲ, ಇದು ಸಮಸ್ತ ಸೃಷ್ಟಿಯಲ್ಲಿದೆ, ಇದು ಕೇವಲ ಮೇಲೆ, ಎಲ್ಲದರಿಂದ ಬೇರೆಯಾಗಿ, ವಿಶ್ವದ ಆಗುಹೋಗುಗಳಿಗೆ ಅತೀತವಾಗಿ ಇರುವಂಥದ್ದಲ್ಲ. ಇದು ಸಮಸ್ತ ಸೃಷ್ಟಿಯನ್ನೇ ವ್ಯಾಪಿಸಿಕೊಂಡಿದೆ, ಸಮಸ್ತ ಜೀವರಾಶಿಗಳನ್ನು ತನ್ನೊಳಗೆ ಸಮಾಹಿಸಿಕೊಂಡಿದೆ, ಲೋಕಲೋಕಾಂತರಗಳನ್ನೆಲ್ಲ ಆವರಿಸಿಕೊಂಡು ಸಮರಸವಾಗಿದೆ. ಆದ್ದರಿಂದ ನಿರ್ವಾಣ ಅಂದರೆ ಸೀಮಿತವಾದ ಪ್ರತ್ಯೇಕ ಭೇದಕಾರಕ ಪ್ರಜ್ಞೆಯ ವಿನಾಶ ಎಂದೇ ಅರ್ಥ ಮಾಡಬೇಕು; ಮಾಯೆಯು ತನ್ನ ತ್ರಿಗುಣಗಳ ಮೂಲಕ ಅಸ್ತಿತ್ವದ ಬಾಹ್ಯದಲ್ಲಿ ತರುವ ವಿಭಜನೆಯ ಕೊನೆ ಎಂದು ಅರ್ಥ ಮಾಡಬೇಕು. ನಿರ್ವಾಣವು ಎಲ್ಲವನ್ನೂ ಒಂದುಗೂಡಿಸುವ ಏಕಾತ್ಮ ಪ್ರಜ್ಞೆಗೆ ಕರೆದೊಯ್ಯುವ ದಾರಿ ಎಂದೂ ಅರ್ಥ ಮಾಡಬೇಕು. ಏಕಾತ್ಮ ಪ್ರಜ್ಞೆಯೇ ನಿಜವಾಗಿ ಅಸ್ತಿತ್ವದ ಹೃದಯ, ಅದರ ಆಧಾರ; ಈ ಏಕಾತ್ಮ ಪ್ರಜ್ಞೆಯೇ ಅಸ್ತಿತ್ವದ ನಿಜವಾದ, ಸನಾತನ ಮತ್ತು ಅಂತಿಮ ಸತ್ಯವಾಗಿದೆ. ನಿರ್ವಾಣವನ್ನು ಸಿದ್ಧಿಸಿಕೊಂಡು ಅದರೊಳಗೆ ಪ್ರವೇಶಿಸಿದಾಗ, ಅದು ಕೇವಲ ನಮ್ಮೊಳಗೆ ಮಾತ್ರ ಅಲ್ಲ, ನಮ್ಮ ಸುತ್ತಲೆಲ್ಲ ಆವರಿಸಿಕೊಂಡಿದೆ ಎಂಬುದು ವೇದ್ಯವಾಗುವುದು. ಈ ಬ್ರಾಹ್ಮೀ ಪ್ರಜ್ಞೆಯು ನಮ್ಮಲ್ಲಿ ರಹಸ್ಯವಾಗಿರುವುದು ಮಾತ್ರವಲ್ಲ ವಾಸ್ತವವಾಗಿ ನಾವೇ ಬ್ರಾಹ್ಮೀ ಪ್ರಜ್ಞೆಯಲ್ಲಿ ವಾಸವಾಗಿದ್ದೇವೆ. ನಮ್ಮಂತ ರಂಗದಲ್ಲಿರುವ ನಿಜವಾದ ನಮ್ಮ ಆತ್ಮ (self) ಅದುವೇ, ನಮ್ಮ ಪ್ರತ್ಯಗಾತ್ಮನ ಸರ್ವೋಚ್ಚ ಪ್ರಭು ಪರಮಾತ್ಮ ಅದುವೇ; ಅದು ನಮ್ಮಂತರಂಗದಲ್ಲೂ ಇದೆ, ಬಾಹ್ಯದಲ್ಲೂ ಇದೆ, ಸಮಸ್ತ ಸೃಷ್ಟಿಯ ಪ್ರಭು ಅದುವೇ ಆಗಿದೆ. ಈ ಸತ್ತೆಯಲ್ಲಿ ಅಥವಾ ಆತ್ಮ ಚೈತನ್ಯದಲ್ಲಿ ಇರುವುದೆಂದರೆ ನಾವು ಸಕಲ ಜೀವರಾಶಿಗಳಲ್ಲಿ ಇದ್ದ ಹಾಗೆ; ನಾವು ಕೇವಲ ನಮ್ಮ ಅಹಂ ವ್ಯಕ್ತಿತ್ವಕ್ಕೆ ಮಾತ್ರ ಸೀಮಿತರಾಗಿ ಇರುವುದಿಲ್ಲ. ಸಮಸ್ತ ವಿಶ್ವದ ಜೊತೆ, ಸೃಷ್ಟಿಯ ಜೊತೆ ಒಂದಾಗಿರುತ್ತೇವೆ. ಸಮಸ್ತ ವಿಶ್ವವೇ ನಮ್ಮ ಪ್ರಕೃತಿಯಾಗಿ, ನಮ್ಮ ಸತ್ತೆಯಾಗಿ, ನಮ್ಮ ಸಕ್ರಿಯ ಪ್ರಜ್ಞೆಯ ಮೂಲವಾಗಿ, ನಮ್ಮ ಕಾರ್ಯಗಳ ಮೂಲ ಉದ್ದೇಶವಾಗಿರುತ್ತದೆ.

ಆದರೆ ಮುಂದಿನ ಎರಡು ಶ್ಲೋಕಗಳು ನಮ್ಮನ್ನು ಈ ರೀತಿಯ ನಿರ್ಣಯಕ್ಕೆ ಬರುವುದನ್ನು ತಡೆಯುತ್ತವೆ; ಅವು ನಿರ್ವಾಣಕ್ಕೆ ವಿರೋಧವನ್ನು ತೋರುತ್ತವೆಯೇ ಎಂದೆನಿಸುತ್ತದೆ. ನೋಡಿ, ಅವು ಹೀಗಿವೆ, ಎಲ್ಲ ಬಾಹ್ಯ ಸಂಪರ್ಕಗಳನ್ನು ಕಡಿದು

ಹಾಕಿ, ಹುಬ್ಬುಗಳ ನಡುವೆ ಸೃಷ್ಟಿಯನ್ನು ಕೇಂದ್ರೀಕರಿಸಿ ನಾಸಾಭ್ಯಂತರ ಚಾರಿಣಿಯಾದ ಪ್ರಾಣಾಪಾನ ವಾಯುವನ್ನು ಸಮ್ವಯಗೊಳಿಸಿ, ಮನಸ್ಸಾ, ಇಂದ್ರೀಯ ಮತ್ತು ಬುದ್ಧಿಯನ್ನು ಸದಾ ವಶದಲ್ಲಿಟ್ಟುಕೊಂಡು ಮೋಕ್ಷವನ್ನೇ ಪರಮ ಗುರಿಯಾಗಿರಿಸಿ–ಕೊಂಡು, ಕಾಮ, ಕ್ರೋಧ, ಬಯಕೆಗಳಿಂದ ಸಂಪೂರ್ಣ ಮುಕ್ತನಾಗಿರುವ "ಮುನಿಯು" ಮೋಕ್ಷವನ್ನು ಹೊಂದುತ್ತಾನೆ (5/27, 28). ಇಲ್ಲಿ ನಾವು ಕರ್ಮ ಯೋಗಕ್ಕಿಂತ ಹಾಗೂ ಜ್ಞಾನ ಯೋಗಕ್ಕಿಂತಲೂ ಸಹ ಭಿನ್ನವಾದ "ಯೋಗ"ವೊಂದನ್ನು ಹೇಳುತ್ತಿದ್ದಾರೆ ಎಂಬುದನ್ನು ತಕ್ಷಣ ನೋಡುತ್ತೇವೆ. ಈ ಯೋಗವು ಗುಣಧರ್ಮದಲ್ಲಿ ಏಕಾಗ್ರತೆಯನ್ನು ಹೊಂದಿದ್ದು ಮನೋ ದೈಹಿಕ ತಪಸ್ಸಿನ ರಾಜಯೋಗವನ್ನು ಹೇಳುತ್ತದೆ ಎಂಬುದು ಗೊತ್ತಾಗುತ್ತದೆ. ಈ ಯೋಗದಲ್ಲಿ ಮನದ ಎಲ್ಲ ಚಲನೆಗಳ ಮೇಲೆ ವಿಜಯ ಸಾಧಿಸಲಾಗುವುದು, ಚಿತ್ತವೃತ್ತಿ ನಿರೋಧ; ಇಲ್ಲಿ ಶ್ವಾಸೋಚ್ಛ್ವಾಸದ ಮೇಲೆ ನಿಯಂತ್ರಣ ಹೇಳಲಾಗುವುದು ಇದನ್ನೇ ಪ್ರಾಣಾಯಾಮ ಎಂದು ಕರೆಯುವುರು. ಇದರಲ್ಲಿ ಇಂದ್ರೀಯ ಮತ್ತು ಬಾಹ್ಯ ದೃಷ್ಟಿಯನ್ನು ಅಂತರಂಗದೆಡೆ ತಿರುಗಿಸಿ, ಅಲ್ಲಿಯೇ ಕೇಂದ್ರೀಕರಿಸಲಾಗುವುದು. ಈ ಎಲ್ಲ ಪ್ರಕ್ರಿಯೆಗಳು ಆಂತರಂಗಿಕ ಸಮಾಧಿ ಸ್ಥಿತಿಗೆ ಒಯ್ಯುವುವು. ಇವೆಲ್ಲವುಗಳ ಆತ್ಯಂತಿಕ ಉದ್ದೇಶವು ಮೋಕ್ಷವಾಗಿದೆ. ಮೋಕ್ಷವೆಂದರೆ ಸಾಮಾನ್ಯ ಅರ್ಥದಲ್ಲಿ ಕೇವಲ ಅಹಂ ಪ್ರಜ್ಞೆಯನ್ನು ಮಾತ್ರ ಅಲ್ಲ ಸಮಗ್ರ ಸಕ್ರಿಯ ಪ್ರಜ್ಞೆಯನ್ನು ತ್ಯಾಗ ಮಾಡುವುದು ಮತ್ತು ನಮ್ಮ ಪ್ರತ್ಯೇಕ ಅಸ್ತಿತ್ವವನ್ನು ಪರಮೋಚ್ಛ ಬ್ರಹ್ಮನಲ್ಲಿ ಸೇರಿಸಿ ಕರಗಿ ಹೋಗಿಬಿಡುವುದು ಎಂದು ಭಾವಿಸಲಾಗಿದೆ. ಆದರೆ ಗೀತೆಯು ಈ ರೀತಿಯ ತ್ಯಾಗವನ್ನು ಹೇಳುವುದೇ? ಬಹಿರ್ವ್ಯಾಪಾರದಲ್ಲಿ ತೊಡಗುವ ಮನವನ್ನೂ ನಿಯಂತ್ರಿಸಲು ಇಷ್ಟು ಕಠಿಣವಾದ, ವಿಶಿಷ್ಟವಾದ ಸ್ವಾತ್ಮಲಯ ಪ್ರಕ್ರಿಯೆಯನ್ನು ಹೇಳುವುದೇ? ಇದನ್ನೂ ನಾವು ವಿಚಾರ ಮಾಡಬೇಕು. ಇದೇ ಚರಮ ಸಂದೇಶವೇ? ಇದೇ ಗೀತೆಯ ಆತ್ಯಂತಿಕ ಕೊನೆಯ ಅಭಿಪ್ರಾಯವೇ? ಈ ಪ್ರಕ್ರಿಯೆಯನ್ನು ಗೀತೆಯು ಒಂದು ವಿಶೇಷ ಸಾಧನವನ್ನಾಗಿ, ಅಂತಿಮ ಸಿದ್ಧಿಯ ಅಥವಾ ನಿರ್ವಾಣದ ಒಂದು ದ್ವಾರವನ್ನಾಗಿ ಹೇಳುತ್ತದೆಯೇ ವಿನಃ ಏಕೈಕ ಆತ್ಯಂತಿಕ ಮಾರ್ಗ ಎಂದು ಹೇಳುವುದಿಲ್ಲ. ಇದು ವಿಶೇಷ ಪ್ರಕ್ರಿಯೆಯೂ ಹೌದು ಒಂದು ದಾರಿಯೂ ಹೌದು. ಆತ್ಯಂತಿಕ ಸಿದ್ಧಿಯನ್ನು ಗೀತೆಯು ನಿರ್ವಾಣ ಅಂದರೆ ಸಂಪೂರ್ಣವಾಗಿ ಪ್ರತ್ಯೇಕ ಅಸ್ತಿತ್ವವನ್ನು ಲಯಗೊಳಿಸುವ ಮೂಲಕ ಸಾಧಿಸಿಕೊಳ್ಳಲು ಹೇಳುವುದಿಲ್ಲ, ಬದಲಾಗಿ ಅತಿ ಚೇತನದ ಎತ್ತರಕ್ಕೆ ವೈಯಕ್ತಿಕ ಪ್ರಜ್ಞೆಯನ್ನು ಎತ್ತರಿಸುವುದರ ಮೂಲಕ ಸಾಧಿಸಬೇಕೆಂದು ಹೇಳುತ್ತದೆ. ಏಕೆಂದರೆ ಈ ಶ್ಲೋಕಗಳಲ್ಲಿ

ಹೇಳಿರುವುದೇ ಕೊನೆಯ ಮಾತು, ಆತ್ಯಂತಿಕವೆಂದು ಅರ್ಥವಲ್ಲ. ಇದೇ ಅಧ್ಯಾಯದ ಕೊನೆಯ ಶ್ಲೋಕದಲ್ಲಿ ಹೇಳಿದಂತೆ; ಎಲ್ಲ ಯಜ್ಞಗಳ ಮತ್ತು ತಪಸ್ಸಿನ ಭೋಕ್ತಾರನೂ ನಾನೇ, ಸರ್ವ ಲೋಕೇಶ್ವರನೂ, ಎಲ್ಲ ಜೀವಿಗಳ ಆತ್ಮನೂ ಆಗಿರುವ ನನ್ನನ್ನು ತಿಳಿದುಕೊಂಡಿರುವವನು ಶಾಂತಿಯನ್ನು ಪಡೆಯುತ್ತಾನೆ" (5/29). ಇಲ್ಲಿ ಕರ್ಮ ಯೋಗದ ಶಕ್ತಿಯನ್ನು ಪುನಃ ಒತ್ತುಕೊಟ್ಟು ಹೇಳಲಾಗಿದೆ. ಸಕ್ರಿಯ ಬ್ರಹ್ಮನ (ವಿರಾಟ್ ಪುರುಷನ) ಜ್ಞಾನವು ಬ್ರಹ್ಮ ನಿರ್ವಾಣ ಶಾಂತಿಗೆ ಅವಶ್ಯವಾಗಿರುವ ಅಂಶಗಳಲ್ಲೊಂದು ಎಂಬುದನ್ನು ಗಟ್ಟಿಯಾಗಿ ಹೇಳಲಾಗಿದೆ.

ನಾವೀಗ ಪುನಃ ಗೀತೆಯ ಸರ್ವ ಶ್ರೇಷ್ಠ ಪರಿಕಲ್ಪನೆಯಾದ ಪುರುಷೋತ್ತಮನ ವಿಚಾರಕ್ಕೆ ಮರಳೋಣ. ಪುರುಷೋತ್ತಮ ಎಂಬ ಪದವನ್ನು ಈ ಅಧ್ಯಾಯದ ಕೊನೆಯಲ್ಲಿ ಬಳಸಲಾಗಿದೆಯೇ ವಿನಃ ಮೊದಲು ಎಲ್ಲಯೂ ಉಲ್ಲೇಖಿಸಿಲ್ಲ. ಆದರೆ ಶ್ರೀಕೃಷ್ಣನು ಎಲ್ಲೆಲ್ಲಿ "ನಾನು" "ನನ್ನನ್ನು" ಎಂದು ಹೇಳುತ್ತಾನೋ ಅಲ್ಲೆಲ್ಲ ಈ ಪುರುಷೋತ್ತಮನನ್ನು ಹೇಳುತ್ತಿದ್ದಾನೆ ಎಂದು ತಿಳಿಯಬೇಕು. ಪುರುಷೋತ್ತಮನು ಕಾಲಾತೀತನಾದ ಅಕ್ಷರ ಪುರುಷನಾಗಿದ್ದಾನೆ. ನಮ್ಮೊಳಗೆ ಏಕೈಕ ಆತ್ಮ ತತ್ತ್ವವಾಗಿಯೂ ಇದ್ದಾನೆ, ಕ್ಷರ ಪುರುಷನಾಗಿ ಜಗತ್ತಿನ ಎಲ್ಲ ವಸ್ತುಗಳಲ್ಲಿ, ಇಡೀ ಅಸ್ತಿತ್ವವನ್ನೆಲ್ಲ ವ್ಯಾಪಿಸಿಕೊಂಡು ಇದ್ದಾನೆ. ಜಾಗತಿಕ ಎಲ್ಲ ಚಲನೆಗಳಲ್ಲೂ ಅವನಿದ್ದಾನೆ. ಮೌನ ಮತ್ತು ಶಾಂತಿಗಳ ಪ್ರಭುವಾಗಿ, ಎಲ್ಲ ಕಾರ್ಯಗಳ ಹಾಗೂ ಕ್ರಿಯಾ ಶಕ್ತಿಯ ಪ್ರಭುವಾಗಿದ್ದಾನೆ. ಆ ಪರಮ ಪುರುಷನೇ ರಥದ ದಿವ್ಯ ಸಾರಥಿಯಾಗಿ, ಮಹಾಭಾರತ ಯುದ್ಧದ ಸೂತ್ರಧಾರನಾಗಿದ್ದಾನೆ. ಅವನು ವಿಶ್ವಾತೀತನೂ ಸಮಸ್ತ ಸೃಷ್ಟಿಯ ಆತ್ಮನೂ. ಸರ್ವೇಶ್ವರನೂ ಆಗಿದ್ದಾನೆ. ಎಲ್ಲ ಯಜ್ಞಗಳ, ತಪಸ್ಸಿನ ಭೋಕ್ತಾರನೂ ಅವನೇ. ಅವನೇ ವಿಶ್ವ ನಿಯಾಮಕನು, ವಿಶ್ವದ ಪ್ರಭುವು. ಮುಕ್ತಿಯನ್ನು ಬಯಸಿ ಎಲ್ಲ ಕರ್ಮಗಳನ್ನು ತಪಸ್ಸಿನಂತೆ, ಯಜ್ಞದಂತೆ ಮಾಡುವ ಸ್ವಾಮಿಯೂ ಅವನೇ ಆಗಿದ್ದಾನೆ. ಅವ್ಯಕ್ತನಾಗಿರುವ ಆತನೇ ಈ ವಿಶ್ವದಲ್ಲಿ ಪ್ರಕಟರೂಪ ತಾಳಿದ್ದಾನೆ. ಅಂತೆಯೇ ಮುಕ್ತನಾದ ಮನವನಾದರೂ ಸಹ ಲೋಕ ಸಂಗ್ರಹಕ್ಕಾಗಿ, ಲೋಕದ ಸುಭದ್ರ ಆಡಳಿತ ಹಾಗೂ ಪ್ರಬಂಧಕ ವ್ಯವಸ್ಥೆಗಾಗಿ ಕರ್ಮಗಳನ್ನೂ ಮಾಡಿಯೇ ಮಾಡುತ್ತಾನೆ. ಅವನು ಸಮಸ್ತ ಸೃಷ್ಟಿಯ ಬಂಧು ಸ್ನೇಹಿತ. ತನ್ನೊಳಗೆ ಹಾಗೂ ಸುತ್ತಲಲ್ಲಿ ಎಲ್ಲೆಡೆ ನಿರ್ವಾಣವನ್ನು ಸಾಧಿಸಿಕೊಂಡ ಮುನಿಯು ಸರ್ವಭೂತೇ ಹಿತೇ ರತಃ ಸಕಲ ಜೀವಿಗಳ ಒಳಿತಿಗಾಗಿ ಕಾರ್ಯ ಮಾಡುತ್ತಾನೆ. ಮಹಾಯಾನ ಬೌದ್ಧ ಪಂಥವೂ ಸಹ ಲೋಕ ಸಂಗ್ರಹ ಕಾರ್ಯವನ್ನೇ ಸರ್ವ ಶ್ರೇಷ್ಠ ಲಕ್ಷಣ ಎಂದು ಸಾರುತ್ತದೆ. ತನ್ನ ವಿಶ್ವಾತೀತ

ಅವಿಕಾರ್ಯ ಆತ್ಮದಲ್ಲಿ ಪರಮಾತ್ಮನ್ನು ಸಾಕ್ಷಾತ್ಕರಿಸಿಕೊಂಡ ಸಾಧಕನು ಪ್ರಕೃತಿಯ ಎಲ್ಲ ಸಹಜ ಸಂಬಂಧಗಳನ್ನು ಒಪ್ಪಿಕೊಂಡು, ನಿರ್ವಾಣದ ಲೀಲೆಯಲ್ಲಿ ಮಾನವ ಪ್ರೇಮಕ್ಕೂ ಪರಮಾತ್ಮ ಪ್ರೇಮಕ್ಕೂ ಸಮಾನ ಸ್ಥಾನವಿರುವುದನ್ನು ಮನ್ನಿಸುತ್ತಾನೆ.

ಈ ಶ್ಲೋಕಗಳ ನಿಜವಾದ ಮಥಿತಾರ್ಥವು ಮುಂದಿನ ಅಧ್ಯಾಯದ ಶ್ಲೋಕಗಳನ್ನು ನೋಡುವುದರಿಂದ ಸ್ಪಷ್ಟವಾಗುತ್ತದೆ. 6ನೆಯ ಅಧ್ಯಾಯದಲ್ಲಿ 5ನೆಯ ಅಧ್ಯಾಯದ ಕೊನೆಯ ಶ್ಲೋಕಗಳ ವ್ಯಾಖ್ಯಾನವಿದೆ. ಈ ಪರಿಕಲ್ಪನೆಯನ್ನು ಅಲ್ಲಿ ವಿವರವಾಗಿ ವಿಸ್ತಾರವಾಗಿ ಹೇಳಿ ಬೆಳೆಸಿದ್ದಾರೆ. ಇದರಿಂದ ಗೀತೆಯು ಆ ಶ್ಲೋಕಗಳಿಗೆ ಮತ್ತು ಆ ಪರಿಕಲ್ಪನೆಗೆ ಎಷ್ಟು ಮಹತ್ವ ನೀಡುತ್ತದೆ ಎಂಬುದು ಗೊತ್ತಾಗುತ್ತದೆ. ಆದ್ದರಿಂದ ನಾವು 6ನೆಯ ಅಧ್ಯಾಯದ ಸಾರವನ್ನು ಇಲ್ಲಿ ಸಂಕ್ಷಿಪ್ತವಾಗಿ ನೋಡುವುದು ಯೋಗ್ಯವಾಗಿದೆ. ಹಾಗೆ ನೋಡಿದರೆ ಸನ್ಯಾಸದ ನಿಜವಾದ ಅರ್ಥವನ್ನು ಗೀತೆ ಅನೇಕ ಬಾರಿ ಹೇಳಿದೆ, ಅದನ್ನೇ ಇಲ್ಲಿ ಪುನಃ ಹೇಳಲಾಗಿದೆ. ಸನ್ಯಾಸವೆಂಬುದು ಆಂತರಿಕ ಕ್ರಿಯೆಯೇ ಹೊರತು ಬಹಿರಂಗದ ವ್ಯಾಪಾರವಲ್ಲ. "ಫಲಾಪೇಕ್ಷೆ ಇಲ್ಲದೇ ಕಾರ್ಯಂ ಕರ್ಮ ಎಂಬ ಭಾವದಿಂದ ಕರ್ಮ ಮಾಡುವವನೇ ನಿಜವಾದ ಸನ್ಯಾಸಿ, ಅವನೇ ಯೋಗಿ; ಯಜ್ಞಾಗ್ನಿಯಲ್ಲಿ ಆಹುತಿ ನೀಡಿ ಕರ್ಮ ವಿರತನಾಗಿರುವವನು ಸನ್ಯಾಸಿಯಲ್ಲ. ಜನರು ಸನ್ಯಾಸವೆಂದು ತಿಳಿದಿರುವುದು ನಿಜವಾಗಿ ಯೋಗವೇ ಹೊರತು ಕರ್ಮ ವಿಮುಖತೆಯಲ್ಲ. ಯಾರು ತನ್ನ ಮನಸ್ಸಿನಲ್ಲಿರುವ ಆಶೆ, ವಾಸನೆ, ಅವುಗಳ ಪೂರ್ತಿಯ ಸಂಕಲ್ಪವನ್ನು ತೊಡೆದು ಹಾಕಿಲ್ಲವೋ ಅವನು ಯೋಗಿಯಲ್ಲ" (6/1, 2). ಕರ್ಮಗಳನ್ನು ಮಾಡಲೇಬೇಕು ನಿಜ, ಆದರೆ ಅವುಗಳ ಹಿಂದೆ ಯಾವ ಉದ್ದೇಶವಿರಬೇಕು ಮತ್ತು ಯಾವ ಕ್ರಮ ವ್ಯವಸ್ಥೆ ಇರಬೇಕು ಎಂಬುದು ಮುಖ್ಯವಾಗುತ್ತದೆ. ಯೋಗವೆಂಬುದೊಂದು ಬೆಟ್ಟ ಇದ್ದ ಹಾಗೆ, ಅದನ್ನೇರುವುದೇ ಒಂದು ಯೋಗ, ಏರುವಾಗ ಯೋಗ ಸಾಧನೆ ಮಾಡಬೇಕು. ಏಕೆಂದರೆ ಕರ್ಮಗಳೇ "ಕಾರಣ" ಅಂದರೆ ಕಾರ್ಯ ಕಾರಣ ಪರಂಪರೆಯ ಆಧಾರ. ಕರ್ಮಗಳು ಸ್ವಯಂ–ಪರಿಪೂರ್ಣತೆಯ, ಮುಕ್ತಿಯ, ನಿರ್ವಾಣದ, ಬ್ರಹ್ಮ ನಿರ್ವಾಣ ಸ್ಥಿತಿಯ ಕಾರಣವಾಗಿದೆ. ಆಂತರಿಕ ಸನ್ಯಾಸದ ನಿರಂತರ ಅಭ್ಯಾಸದೊಂದಿಗೆ ಕರ್ಮಗಳನ್ನು ಮಾಡುವುದರಿಂದ ಯೋಗ ಸಂಸಿದ್ಧಿ ಲಭಿಸುವುದು. ಮೋಕ್ಷ, ವಾಸನಾಮಯ – ಮನಸ್ಸು ಹಾಗೂ ಅಹಂಭಾವ (ಜೀವ) ಮತ್ತು ನಿಮ್ಮ ಪ್ರಕೃತಿಗಳ ಚಲನೆಯ ಮೇಲೆ ವಿಜಯ ಸುಲಭವಾಗಿ ಸಿದ್ಧಿಸುವುವು.

(ಸಶೇಷ)

# ಪ್ರಜ್ಞಾನ, ವಿಜ್ಞಾನ ಮತ್ತು ವಿಜ್ಞಾನ ಘನಸತ್ತೆಯ ಸಮನ್ವಯಕಾರ ಶ್ರೀ ಅರವಿಂದರು

**– ಪುಟ್ಟು ಕುಲಕರ್ಣಿ**

ಅನುಭಾವಕ್ಕೆ ಯಾವುದೂ ಅಮೂರ್ತವಲ್ಲ; ಭವಕ್ಕೆ ಅಂಟಿಕೊಂಡಿರುವವರಿಗೆ ಮಾತ್ರ ಈ ಮೂರ್ತ ಮತ್ತು ಅಮೂರ್ತದ ವ್ಯತ್ಯಾಸ. ತಾನು "ದೃಷ್ಟಿಸಿದ" ಅಥವಾ ದರ್ಶಿಸಿದ ತನ್ನ ಸಹಜ, ನೈಜ ಅನುಭವಗಳು ತಾನೇ ತಾನಾಗಿ ಶಬ್ದ ರೂಪದಲ್ಲಿ ಅಭಿವ್ಯಕ್ತಗೊಳ್ಳುತ್ತಿರುವಾಗ, ಆ ಶಬ್ದದ ಹೃದಯವಾಗಿರುವ ಅರ್ಥವು ಗುಹ್ಯವಾಗಿರುವದಿಲ್ಲ. ಆದರೆ ಕೇವಲ ಓದುಗನಿಗೆ ಮಾತ್ರ ಅದೂ ಆ ಅಭಿವ್ಯಕ್ತಿಯನ್ನು ಶಬ್ದದ ಹಿನ್ನೆಲೆಯಲ್ಲಿ ಮಾತ್ರವೇ ಗ್ರಹಿಸುತ್ತಿರುವ ಲೌಕಿಕ ಮನಸ್ಸಿಗೆ ಇದು ಅಮೂರ್ತವಾಗಿ ಕಾಣುತ್ತದೆ. ಹೀಗಾಗಿ ಇಂದಿಗೂ ಈ ಅನುಭಾವದ ಕಾವ್ಯವು ನವೀನ ಮಾದರಿಯದಾಗಿಯೇ ಉಳಿದಿದೆ. ಶ್ರೀ ಅರವಿಂದರ ಅಭಿಪ್ರಾಯದಂತೆ, "ಒಂದು ನವೀನ ಮಾದರಿಯ ಕಾವ್ಯವು ಓದುಗನಲ್ಲಿ ನವೀನ ಯೋಚನಾ ವಿಧಾನವನ್ನೇ ಬಯಸುತ್ತದೆ; ಜೊತೆಗೆ ಲೇಖಕನಲ್ಲಿಯೂ ಸಹಿತ". ಕಾವ್ಯದಲ್ಲಿ ತತ್ತ್ವಜ್ಞಾನ ಇರಬೇಕೇ ಬೇಡವೆ ಎನ್ನುವ ಜಿಜ್ಞಾಸೆ ಕವಿಗೆ ಇರಲೇಬಾರದು. ಕವಿಯಾದವನು ಈ ತತ್ತ್ವಜ್ಞಾನದ ಪರಿಧಿಯ ಆಚೆ ಇರಬೇಕೆನ್ನುವ ಸಂಪ್ರದಾಯವನ್ನು ವಾಸ್ತವದಲ್ಲಿ ರಮ್ಯ ಸಂಪ್ರದಾಯವು ರೂಪಿಸಿತು. ಊರ್ಧ್ವ ಲೋಕದ, ಪರಾಕಾಶದಲ್ಲಿರುವ ವಿಷಯಗಳ ಕುರಿತು, ಅಧಿಮಾನಸ ಹಂತದಲ್ಲಿ ಸಮಸ್ಪಂದಿಯಾಗಬಲ್ಲ, ಎಂದರೆ ನಿರ್ಮಾಯ ಶೂನ್ಯದ ಅನುಭವಗಳನ್ನು ಅಭಿವ್ಯಕ್ತಗೊಳಿಸುವದು ಎಂದರೆ ಅನುಭಾವದ ವಿಷಯವಾಗುತ್ತದೆ.

ಭಾವದ ಆತ್ಮ ಕಾವ್ಯ. ಕಾವ್ಯದ ಆತ್ಮ ಪ್ರಕಾಶ. ಪ್ರಕಾಶದ ತುಡಿತ ಉತ್ಕ್ರಾಂತಿ. ಹೀಗಾಗಿ ಉತ್ಕ್ರಾಂತಿಯ ನಿಯತಿಯನ್ನು ಅಮೂರ್ತವೆನ್ನಲು ಬರುವದಿಲ್ಲ. ಈ ಹಿನ್ನೆಲೆಯಲ್ಲಿ ಅಭಿವ್ಯಕ್ತಗೊಳ್ಳುವ "ಭಾವ"ದ ಹಿನ್ನೆಲೆಯನ್ನು ಹಾಗೂ ಅದರ ಮೂಲವನ್ನು ಗಮನಿಸಲು ನಮಗೆ ಮೂರ್ತ ಸ್ವರೂಪದ ಉದಾಹರಣೆಗಳೆ ಬೇಕಾಗುತ್ತವೆ. ಇದು ಭವಿಗಳ ಸ್ಥಿತಿ. ಆದರೆ ಭವದಲ್ಲಿ ಇದ್ದೂ ಅದಕ್ಕೆ ಅಂಟಿಕೊಳ್ಳದೇ, ಅದರ ಗೂಢತೆಯನ್ನು ತಿಳಿದುಕೊಳ್ಳಲು ತವಕಿಸುವ, ಸ್ಪಂದಿಸುವ ಹೃದಯಕ್ಕೆ ಯಾವುದೂ ಅಮೂರ್ತವಾಗುವದಿಲ್ಲ. ಆಧುನಿಕ ವಿಜ್ಞಾನದಲ್ಲೂ ಸಹಿತ ಖಭೌತ ಶಾಸ್ತ್ರದ ಊಹೆಗಳು ಇದೇ ತೆರನಾದ ಅನುಭಾವದ ಹಂತದಲ್ಲಿಯೇ ರೂಪಣೆಗೊಂಡಿರುತ್ತವೆ.

ಕನ್ನಡದಲ್ಲಿ ಅಪರೂಪದ ಅಮೂರ್ತ ಕಾವ್ಯವನ್ನು ರೂಪಿಸಿದ ಹಿರಿಮೆ ಅಲ್ಲಮ ಪ್ರಭುವಿನದು. ಒಂದು ಭಾಷೆ–ಪ್ರಾಕೃತವೆಂದು ವಿಂಗಡಿಸಲ್ಪಟ್ಟು–ವರ್ಗೀಕರಿಸಲ್ಪಟ್ಟು – ಮತ್ತೆ ಇದರ ಆಯಾಮವು ಶಾಸ್ತ್ರೀಯ ವಿವೇಚನೆಗೆ ವಿಶ್ಲೇಷಣೆಗೆ ಇನ್ನೂ ನೇರ್ಪುಗೊಂಡಿಲ್ಲವೆನ್ನುವ ಸ್ಥಿತಿ ಇದ್ದಾಗಲೇ, ಅದರಲ್ಲೂ ಸಂಸ್ಕೃತವೇ ಎಲ್ಲ ಶಾಸ್ತ್ರೀಯ ಅಧ್ಯಯನಕ್ಕೆ ನಿಗದಿಗೊಳಿಸಲ್ಪಟ್ಟಾಗಲೇ – ಸಂಸ್ಕೃತಕ್ಕೆ ಸಮಸಮವಾಗಿ, ಯೋಗಿಕ ವಿಷಯಗಳನ್ನೂ ಸಹಿತ ಕನ್ನಡದಲ್ಲಿ ಪಡಿಮೂಡಿಸಿದ ಕೀರ್ತಿ ಅಲ್ಲಮ ಪ್ರಭುವಿಗಿದೆ. ಆದರೆ ಇಂದಿನವರೆಗೂ ಅಲ್ಲಮ ಒಬ್ಬ ನಿಗೂಢ ನಿಧಿ. ಅವನ ಶಬ್ದದ ಹಿಂದಿನ ಅರ್ಥವನ್ನು ಅದರ ಬೆಡಗನ್ನೂ ಅರ್ಥೈಸಿಕೊಳ್ಳಲು ಸೂಕ್ತ ಸೂತ್ರಗಳು ಸಿಕ್ಕಿಲ್ಲ. ವಚನಕಾರರಿಗೆ – ಶೂನ್ಯ ಸಿಂಹಾಸನಾಧೀಶನಾಗಿ, ಮಾರ್ಗದರ್ಶಿಯಾದ ಅಲ್ಲಮ ಸ್ವತಃ ಗೂಢ; ಗುಹ್ಯ. ಹೀಗಾಗಿಯೇ ಅವನ ಕಾವ್ಯನಾಮ "ಗುಹೇಶ್ವರ". ಗುಹೆ ಎಂದರೆ ಯೋಗದ ಪರಿಭಾಷೆಯಲ್ಲಿ ಹೃದಯ. ಈ ಗುಹ್ಯ–ಗೂಢ ಎನ್ನುವ ಶಬ್ದದ ಬಳಕೆ ಉಪನಿಷತ್ ಅವಧಿಯಲ್ಲಿಯೇ ಬಳಕೆಯಲ್ಲಿ ಇತ್ತು.

ವಿಜ್ಞಾನ ಪ್ರಪಂಚದಲ್ಲಿ ಶುದ್ಧ ವಿಜ್ಞಾನ ಮತ್ತು ಆನ್ವಯಿಕ ವಿಜ್ಞಾನಗಳ ಭಾಗವಿದ್ದಂತೆ, ಮತ್ತು ಶುದ್ಧ ವಿಜ್ಞಾನದಲ್ಲಿ ಮಂಡಿಸಲ್ಪಡುತ್ತಿರುವ ಊಹೆಗಳು ಪ್ರಜ್ಞಾನದ ಹಂತದಲ್ಲಿ ಅಂದರೆ ಚಿತ್ಸಾಗರದ ಅಲೆಗಳಾಗಿಯೇ ಇರುತ್ತವೆ. ಇದು ಆಯಾ ವಿಜ್ಞಾನಿ–ಸಂಶೋಧಕ – ಕಂಡುಕೊಂಡ ಅನುಭಾವವೇ ಆಗಿರುತ್ತದೆ. ಹಲವು ವಾಸ್ತವದ, ಸತ್ಯದ, ವಿಶ್ವ ಸತ್ಯವಾಗಿರುವ ಋತದ ಸ್ಪಂದನವನ್ನು ಆಧರಿಸಿಯೇ ಊಹೆಗಳು ರೂಪುಗೊಂಡಿರುತ್ತವೆ. ಈ ಊಹೆಗಳಿಗೆ ಬರುವ ಪ್ರತಿಕ್ರಿಯೆಯಲ್ಲಿ – ವಿಶ್ಲೇಷಣೆಯಲ್ಲಿ – ಟೀಕೆ–ಟಿಪ್ಪಣಿಗಳಲ್ಲಿ – ಒಂದು ಹಂತದವರೆಗೂ ಅದರ ಬಗೆಗೆ ಇರುವ ಅಪರಿಚಿತ ಮನೋಭಾವದಿಂದಾಗಿ ಸಂಶಯದ ದೃಷ್ಟಿಯಿಂದಲೇ ಕಾಣಲಾಗುತ್ತದೆ, ಇಲ್ಲವೇ ಕಡೆಗಣಿಸಲಾಗುತ್ತದೆ. ಆದರೆ ಈ ವೈಜ್ಞಾನಿಕ ಊಹೆ ಸತ್ಯವಾಗಿ ಪ್ರಕಟಗೊಂಡಾಗ – ಸಾಕ್ಷಾತ್ಕಾರಗೊಂಡಾಗ – ಅದೇ ಆನ್ವಯಿಕವಾಗಿ ಅನುಷ್ಠಾನಕ್ಕೆ ಬರುತ್ತದೆ. ಈ ರೀತಿಯ ಶೋಧನೆ–ಸಂಶೋಧನೆ ಭೌತಿಕ ಪ್ರಪಂಚದ ಬೇಕು–ಬೇಡಗಳನ್ನು ಅವಲಂಬಿಸಿ ರೂಪಾಂತರಗೊಳ್ಳುತ್ತಲೇ ಇರುತ್ತದೆ. ಇದು ಹಲವು ಹಂತದ ಸ್ವರೂಪಗಳ ಶ್ರೇಣಿಗಳ ಸೃಷ್ಟಿಗೆ ಕಾರಣವಾಗುತ್ತದೆ. ಆದರೆ "ಭಾವ" ಪ್ರಪಂಚದಲ್ಲಿ ಮಾತ್ರ, ಈ ಶುದ್ಧ ಚಿಂತನಗಳು "ಅನುಭಾವ"ವೆಂದು ವರ್ಗೀಕರಿಸಲ್ಪಟ್ಟು, ಪ್ರತಿ ಹಂತದಲ್ಲೂ "ವಿರೋಧದ ಮಸೆಗಲ್ಲಿಗೆ" ಸಿಲುಕುತ್ತವೆ. ಹಾಗೆ ನೋಡಿದರೆ "ಭವಕ್ಕೆ" ಸಿಲುಕಿದ ಜೀವಿಗೆ, ಅಮೂರ್ತದ ಬಗೆಗೆ ಏನೂ

ಗೊತ್ತಿರುವದಿಲ್ಲ – ವಿರೋಧವೊಂದನ್ನು ಬಿಟ್ಟು. ತನ್ನ ಸೀಮಿತ ಅನು"ಭವ"ವನ್ನೇ ಸರ್ವಸ್ವವೆಂದು ಅಲ್ಪ ತೃಪ್ತಿಯ ಕೂಪಕ್ಕೆ ಸಿಲುಕಿಕೊಳ್ಳುತ್ತಾನೆ.

ಆದರೆ, ಭವದಲ್ಲಿ ಬದುಕಿದ್ದರೂ, ಇದರ ಅಲ್ಪಕಾಲದ ಬಗೆಗೆ ಅರಿವಿದ್ದ ಸ್ಪಂದನಶೀಲ ಮನಸೊಂದು–ಆತ್ಮವೊಂದು, ತನಗೆ ನಿಯತಿ ಪ್ರಕಾರವಾಗಿ ದೊರೆತ ಪ್ರಜ್ಞೆಯ ಮೂಲಕವೇ ಅನುಭವ ಆಚೆ ಇರುವ ಅನುಭಾವದತ್ತ ತುಡಿಯುತ್ತದೆ. ಈ ಅನುಭಾವಕ್ಕೆ ಮೂಲ ಹೇತು ಏನು ಎನ್ನುವದರ ಸಂಶೋಧನೆಗೆ ತನ್ನನ್ನು ತೊಡಗಿಸಿಕೊಳ್ಳುತ್ತದೆ. ಈ ಅನುಭಾವಕ್ಕೆ ಮೂಲ ಹೇತುವಾದ ವಿಶ್ವ ಸತ್ಯವನ್ನು ಅರಿಯಲೆತ್ನಿಸಿದಾಗ, ದೃಷ್ಟಿವಿಸ್ತಾರದಿಂದಾಗಿ, ಔನತ್ಯ ಪ್ರಜ್ಞೆಯಿಂದಾಗಿ, ಜಿಜ್ಞಾಸೆಯ ಮನಸ್ಸಿನಿಂದಾಗಿ ಮತ್ತು ಇವೆಲ್ಲಕ್ಕೂ ಸ್ಪಂದನಗೊಳ್ಳುವ ಹೃದಯದ ಮಿಡಿತಗಳಿಂದಾಗಿ ತನಗೆ ಬರುವ ಎಲ್ಲ ಅನುಭವಗಳ ಮೂಲಕವೇ ಎಲ್ಲವನ್ನೂ ಮೂರ್ತ ಭಾವದಲ್ಲಿಯೇ ಆರಾಧಿಸಿ, ಸಾಕ್ಷಾತ್ಕರಿಸಿಕೊಳ್ಳುತ್ತದೆ. ಜೊತೆ ಜೊತೆಗೆ ಈ ಎಲ್ಲ ವಿಶ್ವ ಸತ್ಯಗಳನ್ನೂ ತನಗರಿವಿಲ್ಲದೇ ವಿಶ್ವಕ್ಕಾಗಿ ಪ್ರಕಟಗೊಳಿಸುತ್ತಾನೆ. ಆಗ, ಪ್ರಚಲಿತ ವ್ಯವಸ್ಥೆಯಲ್ಲಿ ಇರಬಹುದಾದ ಭಾಷೆ, ಪ್ರತಿಮೆ, ಪ್ರತೀಕ, ಕಲ್ಪನೆಗಳೆಲ್ಲ ಗೌಣವಾಗುತ್ತವೆ. ಅಲ್ಲಿ ನಿಯಮಿತದ ಚೌಕಟ್ಟು, ಬಂಧಗಳ ಬಂದಿಖಾನೆ ಇರುವದಿಲ್ಲ.

ಈ ರೀತಿಯ ಅಭಿವ್ಯಕ್ತಿಯಲ್ಲಿಯೇ ಉಪನಿಷತ್ತುಗಳ ರಚನೆಯಾದದ್ದು. ಇದೇ ತೆರನಾದ ಅಭಿವ್ಯಕ್ತಿಯಲ್ಲಿ ಅನುಭಾವದ ರಚನೆಗಳು ಕಾಳಿದಾಸನ ಕಾಲದಲ್ಲೂ ನಡೆದಿವೆ. ಅನುಭಾವದ ಅನುಭಾವದ ಅಭಿವ್ಯಕ್ತಿಗೆ ಇದೆ ತೆರನಾದ ಛಂದಸ್ಸು ವಿಶ್ವದಾದ್ಯಂತವೂ ಇರುವದು ಅಚ್ಚರಿಯ ಸಂಗತಿ ಅಷ್ಟೇ ಅಲ್ಲ ಸಂಶೋಧನೆಗೆ ವಿಷಯವಾಗಿದೆ. 2, 3, 4, 5, 6 ಸಾಲುಗಳಲ್ಲಿ ಪ್ರಕಟಗೊಳ್ಳುತ್ತಿದ್ದ, ಈ ಅನುಭಾವದ ಅಭಿವ್ಯಕ್ತಿಗಳು, ಮುಕ್ತತೆಯಲ್ಲಿಯೇ ಪರಮ ಸತ್ಯದ ಗರಿಮೆಯನ್ನು ಹೇಳುತ್ತಿವೆ. ಒಂದು ಸೋಜಿಗದ ಸಂಗತಿ ಎಂದರೆ, ಕಾಳಿದಾಸನ ನಂತರದಲ್ಲಿ – ಈವರೆಗೂ ದಾಖಲಾಗಿರುವ ಸಾಹಿತ್ಯಿಕ ರಚನೆಗಳಲ್ಲಿ – ಅದರಲ್ಲೂ ಪ್ರಜ್ಞೆಯ ಉತ್ಕ್ರಾಂತಿಯ ಪಥದಲ್ಲಿ – ಅದೂ ಪ್ರಾಕೃತವೆಂದು ಕಡೆಗಣಿಸಲ್ಪಟ್ಟ ಕನ್ನಡ ಭಾಷೆಯಲ್ಲಿ – ವಚನಗಳ ರಚನೆಯಲ್ಲಿ ಮತ್ತೆ ಈ ಛಂದಸ್ಸು ಸಫಲವಾದದ್ದನ್ನು ಕಾಣುತ್ತೇವೆ.

ವಚನಗಳ ಪ್ರಭಾವ, ಅದರ ಸಾಹಿತ್ಯಿಕ ಮಹತ್ವ, ಸಾಮಾಜಿಕ ಸ್ಥಾನಮಾನದ ಬಗೆಗೆ ಸಾಕಷ್ಟು ವಿಶ್ಲೇಷಣೆಗಳು ರೂಪುಗೊಂಡಿವೆ. ಆದರೆ, ಈ ವಚನಗಳ ರಚನೆಯ ಹಿನ್ನೆಲೆಯಲ್ಲಿ – ಅನುಭಾವಕ್ಕೆ ಮಾತ್ರ ಸೀಮಿತವಾದ ಛಂದಸ್ಸಿನ ವಿಷಯದಲ್ಲಿ – ಇನ್ನೂ ಸಂಶೋಧನೆಗಳು ನಡೆಯಬೇಕಾಗಿದೆ. ನಮಗೆಲ್ಲಾ ತಿಳಿದಿರುವಂತೆ

ವಚನಕಾರರೆಲ್ಲ ಕಾಯಕ ಯೋಗಿಗಳು. ಜೊತೆ ಜೊತೆಗೆ ಅನುಭವ ಮಂಟಪದಲ್ಲಿ ತನ್ನ ಅನುಭಾವದ ಅಭಿವ್ಯಕ್ತಿಗೆ ಸಮರ್ಪಿಸಿಕೊಂಡವರು. ಅದರಲ್ಲೂ ಕಾಯಕ ಯಾವುದಾದರೇನು, ಆತ್ಮಶೋಧನೆಯ ಮೂಲಕವೇ ಕಾಯ(ಕ)ಕ್ಕೊಂದು ಗೌರವವನ್ನೂ ರೂಪಿಸಿದವರು.

ಉಪನಿಷತ್ ಆಗಲಿ, ವಚನಗಳಾಗಲಿ, ದಾಸರ ಪದಗಳಾಗಲಿ, ಸರ್ವಜ್ಞನ ವಚನಗಳಾಗಲಿ, ತೀರ ಇತ್ತೀಚೆಗೆ ವರ್ಗೀಕರಿಸಲ್ಪಟ್ಟ ಅನುಭಾವಿ ಕವಿಗಳ ರಚನೆಯಲ್ಲಾಗಲಿ ಮತ್ತೆ ವಿಶಿಷ್ಟ ಸಂದರ್ಭಗಳಲ್ಲಿ ಮಾತ್ರ ಅಭಿವ್ಯಕ್ತಗೊಳ್ಳುವ ಕಾರಣಿಕದಂತಹ ಪ್ರಹೇಳಿಕೆಗಳಲ್ಲಾಗಲಿ, ಎಲ್ಲೆಡೆಗೂ ಇರುವದು ಈ ಅನುಭಾವವೇ ಆಗಿದೆ. ಆದರೆ ಯಾವಾಗ ವಿಶ್ವ ಧ್ವನಿಯಾಗಿ ಅವಕಾಶದಲ್ಲಿಯೇ ಅನುರಣನಗೊಂಡು ಸ್ಪಂದಿಸುತ್ತ ಸ್ಪಂದಿಸುತ್ತ ವಿಕಾಸವಾಗುತ್ತಿದ್ದ ಈ "ಶಬ್ದ" ಅಕ್ಷರದ ಪಂಜರದಲ್ಲಿ ಬಂದಿಯಾದಾಗ, ಮೂರ್ತ–ಅಮೂರ್ತಗಳ ಕಲ್ಪನೆಗೆ ನಾಂದಿ ಹಾಡಿರಬೇಕು. ಹೀಗಾಗಿ, ಪ್ರಕಟಗೊಂಡ ಶಬ್ದಕ್ಕೆ ಮೂರ್ತ ಅರ್ಥ ಬೇರೆ, ಅಮೂರ್ತ ಅರ್ಥ ಬೇರೆ ಎನ್ನುವ ಮಂಡನೆ ಪ್ರಾರಂಭವಾಯಿತು. ಅದರಲ್ಲೂ ಈ ಮೂರ್ತ ರೂಪದಲ್ಲಿ (ಅಕ್ಕರದಲ್ಲಿ) ಪ್ರಕಟಗೊಂಡ ಅಭಿವ್ಯಕ್ತಿಗಳೇ ಮುಂಚೂಣಿಗೆ ಬಂದು, ಆ ಅಮೂರ್ತ ರೂಪದ ಅಭಿವ್ಯಕ್ತಿಗಳನ್ನು, ಅವುಗಳ ಗಾಢ ಅನುಭ(ಭಾ)ವದ ಹಿನ್ನೆಲೆಯನ್ನು ಅರ್ಥೈಸಿಕೊಳ್ಳಲಾಗದೆ ಅಥವಾ ಮೂರ್ತ ರೂಪದ ಸೀಮಿತ ಬದುಕಿಗೆ ಈ ಶಬ್ದಗಳ ಆಂತರ್ಯವನ್ನರಿಯಲಾಗದ ಅಸಹಾಯಕತೆಯೋ, ಮತ್ತೂ ನಿಖರವಾಗಿ ಹೇಳುವದಾದಲ್ಲಿ ಈರ್ಷೆಯಿಂದಾಗಿ, ಈ ತೆರನ ಅಭಿವ್ಯಕ್ತಿಗಳನ್ನು ಕಡೆಗಣಿಸುತ್ತಲೇ ಬರಲಾಯಿತು. ಆದರೆ ಜನ ಸಾಮಾನ್ಯರ ಬದುಕಿನ ಉಸಿರಿನಲ್ಲಿ ಮಾತ್ರ ಈ ಅನುಭಾವಿಗಳು ದೈವತ್ವದ ಹಂತಕ್ಕೇ ಏರುತ್ತಲೇ ಬಂದರು.

ಅಮೂರ್ತದ ಅಭಿವ್ಯಕ್ತಿಯನ್ನು ಹುಚ್ಚು–ಭ್ರಮೆ ಎನ್ನುವ ಸಾಮಾನ್ಯ ಶಬ್ದದಿಂದ ಹಿಡಿದು ಬ್ರಹ್ಮೇತಿ ಎನ್ನುವ ಪರಿಷ್ಕೃತ ಶಬ್ದದಲ್ಲಿ ಮೂಲೆ ಗುಂಪಾಗಿಸಿದ್ದು ಆಧುನಿಕ ಮನಸ್ಸಿನ ಚಿಂತನೆಗಳು. ಅಮೂರ್ತವೆನ್ನುವದು ಅನುಭಾವದಲ್ಲಿ ಇಲ್ಲವೇ ಇಲ್ಲ ಎನ್ನುವ ಮಾತನ್ನು ಮಾತ್ರ ಜಾಣ ಮರೆವಿನಿಂದ ಹುದುಗಿಸಲಾಯಿತು. ಇಷ್ಟು ದೀರ್ಘ ಪೀಠಿಕೆಯ ಕಾರಣವೆಂದರೆ, ಇಲ್ಲಿ ಅಲ್ಲಮನಾಗಲಿ ಮತ್ತು ಶ್ರೀ ಅರವಿಂದರಾಗಲಿ ಇಬ್ಬರೂ ಹಿಮಾಲಯ ಪರ್ವತ ಸದೃಶ ವ್ಯಕ್ತಿತ್ವಗಳು; ಸಮುದ್ರದಷ್ಟೇ ಗಂಭೀರ; ಆಕಾಶದಷ್ಟೇ ವ್ಯಾಪ್ತ. ಅವರಿಗೆ ಯಾವುದೂ ಅಮೂರ್ತವಲ್ಲ, ಎಲ್ಲವೂ ಕರತಲಾಮಲಕ. ಉಸಿರಿನಷ್ಟೇ ಸಹಜ. 12ನೇ ಶತಮಾನದ ಅಲ್ಲಮನ ವಚನಗಳು

ಬೆಡಗಿನ ದೆಸೆಯಿಂದಾಗಿ ನಮ್ಮಿಂದ ದೂರ ಉಳಿದರೆ, 20ನೇ ಶತಮಾನದ ಶ್ರೀ ಅರವಿಂದರ ಅಭಿವ್ಯಕ್ತಿಗಳು ಇಂಗ್ಲೀಷ ಭಾಷೆಯ ದೆಸೆಯಿಂದ ನಮ್ಮಿಂದ (ಸಾಮಾನ್ಯರಿಂದ) ದೂರವುಳಿದವು. ಉಪನಿಷತ್ತಿನ ಸಂಸ್ಕೃತವಾಗಲಿ, ಅಲ್ಲಮ ಪ್ರಭುವಿನ ಬೆಡಗಾಗಲಿ, ಶ್ರೀ ಅರವಿಂದರ ಪ್ರತಿಪಾದನೆಯಾಗಲಿ, ತಮ್ಮ ನಿಗೂಢತೆಯಿಂದ, ಗೂಡಾರ್ಥದಿಂದ ಇನ್ನೂ ಜನ ಮಾನಸದಲ್ಲಿ ಪ್ರವೇಶ ಪಡೆದಿಲ್ಲ. ಅಲ್ಲಮನಿಗಂತೂ ಮಾತೆಂಬುದು ಜ್ಯೋತಿರ್ಲಿಂಗ. ಆ ವಿಶ್ವ ಚೈತನ್ಯವಾಗಿರುವ ಜ್ಯೋತಿರ್ಲಿಂಗವನ್ನೇ ಮಾತಾಗಿಸಿದ್ದು ಅನುಭಾವ. ಭವಿಗಳಿಗೆ ಇದು ಒಂದು ವಿಚಿತ್ರ ಅನುಭವ. ಹೀಗಾಗಿ ಈ ದಿಸೆಯಲ್ಲಿ ನಡೆಯುವದು ಅನುಭವವಾದರೆ, ಅದನ್ನು ಅರ್ಥೈಸಿಕೊಂಡು ಅದರಲ್ಲಿ ಲೀನವಾಗುವದು ಅನುಭಾವವಾಗುತ್ತಿದೆ.

**ಸೀಮಾತೀತ ಅನುಭಾವ ಸೀಮಿತ ಅನುಭಾವ;**

ಹಾಗಾದರೆ ಈ ತೆರನಾದ ಕಾವ್ಯಗಳನ್ನು ಹೇಗೆ ಅರ್ಥೈಸಿಕೊಳ್ಳಬೇಕು ಎನ್ನುವದನ್ನು ಗಮನಿಸಿದರೆ, ಕಾವ್ಯ ಸೌಂದರ್ಯವೆನ್ನುವದು ಕೇವಲ ಕಾವ್ಯದ ಮೇಲ್ಪದರಲ್ಲಿ ಕಾಣುತ್ತಿರುವ ಶಬ್ದಗಳ ಕಾಂತಿಯ ಹೊಳಪಿನಲ್ಲಿ ಇರುವದಿಲ್ಲ. ಅದು ಆ ಶಬ್ದದ ಆತ್ಮವಾಗಿರುತ್ತದೆ. ಆಕರ್ಷಣೀಯ ಪದ ಪುಂಜಗಳು ಓದುಗನಲ್ಲಿ ಒಂದು ತೆರನಾದ ಆಹ್ಲಾದದ ನಾದ ತರಂಗವನ್ನು ಸೃಷ್ಟಿಸುತ್ತದೆ. ಆದರೆ ಆ ನಾದ ತರಂಗವು ವಿಶ್ವ ಶ್ರುತಿಯೊಡನೆ ಸಮಸ್ಪಂದಿಯಾದಲ್ಲಿ–ಅದರಲ್ಲಿ ಲೀನವಾದಲ್ಲಿ – ಮಾತ್ರ ಅನುಭಾವ ಸಾಕ್ಷಾತ್ಕಾರಗೊಳ್ಳುತ್ತದೆ. ಭಾವದ ಆತ್ಮ ಕಾವ್ಯವಾದರೆ ಅನುಭಾವ– ಕಾವ್ಯದ ಆತ್ಮ ಪ್ರಕಾಶವಾಗಿರುತ್ತದೆ. ಇಲ್ಲಿ ಶಬ್ದ ಕೇವಲ ನಿಮಿತ್ತ ಮಾತ್ರ. ಈ ಸಂದರ್ಭದಲ್ಲಿ (ಯಾವುದೇ) ಭಾಷೆ ಸೂತ್ರದಂತೆ ಒಳಗೆ ಅಡಕವಾಗಿರುತ್ತದೆ. ಅದರಲ್ಲೂ ಈ ಪ್ರಕಾಶದ ತುಡಿತವು ಉತ್ಕ್ರಾಂತಿಯಾಗಿರುವಾಗ, ಈ ನಿಯತಿಯ ಸರಪಳಿಯ ಜೋಡಣೆಗೆ ತೊಡಗಿಕೊಳುವ ವ್ಯಕ್ತಿ ಸಹಜವಾಗಿಯೇ ದ್ರಷ್ಟಾರನಾಗುತ್ತಾನೆ. ತಾನು ನೆಲೆಸಿರುವ ಪ್ರದೇಶದ, ಭಾಷೆಯಲ್ಲಿ, ಸಂಕೇತಗಳ ಮೂಲಕ ಇಲ್ಲವೇ ಪ್ರತೀಕಗಳ ಮೂಲಕ ಅಭಿವ್ಯಕ್ತಗೊಳಿಸಲ್ಪಟ್ಟ ಆ ವ್ಯಕ್ತಿಯ ಅನುಭಾ(ಭ)ವಗಳು ಆಯಾ ಭೌಗೋಳಿಕ ಸ್ಥಿತಿಯಿಂದಾಗಿ ಅರ್ಥ ವ್ಯತ್ಯಾಸ ಪಡೆಯುತ್ತವೆ. ವಿಸ್ತಾರವೂ ಆಗುತ್ತವೆ. ಆಶ್ಚರ್ಯದ ಮಾತೆಂದರೆ, ನಾವು ಯಾವುದನ್ನು ಅಮೂರ್ತ, ಯೋಗಿಕ ಎಂದೆಲ್ಲಾ ವರ್ಗೀಕರಣ ಮಾಡಿ, ಜಿಜ್ಞಾಸೆಯಿಂದ ದೂರವಿಟ್ಟೆವೋ, ಅವೆಲ್ಲ ವಿಷಯಗಳು ಆಧುನಿಕ ಚಿಂತನದಲ್ಲಿ ಖಭೌತ ವಿಜ್ಞಾನದ ದೈನಂದಿನ ವಿಷಯಗಳಾಗಿವೆ. ಆಧುನಿಕ ವಿಜ್ಞಾನದ ಅದರಲ್ಲೂ ಶುದ್ಧ ವಿಜ್ಞಾನದಲ್ಲಿ

ಮಂಡಿಸಲ್ಪಡುವ ಊಹೆಗಳು, ಮೇಲ್ನೋಟಕ್ಕೆ ಅಮೂರ್ತವಾಗಿಯೇ ಕಾಣುತ್ತವೆ. ಆದರೆ ಅದರ ಪರಿಭಾಷೆಯನ್ನು ಅರ್ಥೈಸಿಕೊಂಡವರಿಗೆ ಅದು ಮೂರ್ತ ವಿಷಯವಾಗಿಯೇ ಕಾಣುತ್ತದೆ. ದಿನನಿತ್ಯದ ಬದುಕಿಗೂ ಹಾಗೂ ಜಗತ್ತಿನಲ್ಲಿ ನಡೆಯುತ್ತಿರುವ ಸಂಶೋಧನೆಗಳಿಗೂ ಒಂದು ಅವಿನಾಭಾವ ಸಂಬಂಧ ಇದ್ದೇ ಇರುತ್ತದೆ. ಸಾಹಿತ್ಯ ಅಥವಾ ಕಾವ್ಯ ಈ ಸಂಗತಿಗಳನ್ನು ಮುಂಚೆಯೇ "ಕಂಡು" ಸಮಾಜಕ್ಕೆ ಹೇಳಬೇಕೋ ಅಥವಾ ಅದರಿಂದಾಗುವ ವಿಪ್ಲವಗಳ ನಂತರದಲ್ಲಿ ಸಮಾಧಾನ ಹೇಳಬೇಕೊ ಎನ್ನುವ ವಿಚಾರದಲ್ಲಿ ಯಾವಾಗಲೂ ಜಿಜ್ಞಾಸೆ ಇದೆ.

ಈ ಹಿನ್ನೆಲೆಯಲ್ಲಿ 12ನೇ ಶತಮಾನದಲ್ಲಿದ್ದ ಅಲ್ಲಮನ ವಚನಗಳಲ್ಲಿ ಇರುವ ವಿಶ್ವ ಸತ್ಯ(ಖಭೌತ ವಿಷಯಗಳಾಗಲೀ)ವಾಗಲಿ, ಮನುಷ್ಯನ ಬದುಕನ್ನು ರೂಪಿಸುತ್ತಿರುವ ಮೌಲ್ಯಗಳ ಸಂಘರ್ಷದ ಕುರಿತಾಗಲಿ ಇರುವ ಸಾರ್ವಕಾಲಿಕ ಸತ್ಯಗಳನ್ನು ತಿಳಿದುಕೊಳ್ಳುವದರ ಜೊತೆಗೆ 21 ನೇ ಶತಮಾನದ ಶ್ರೀ ಅರವಿಂದರು ಸಹಿತ ಅದೇ ವಿಷಯವನ್ನು ಭಾರತೀಯ ವ್ಯವಸ್ಥೆಯ ಆಚೆ ಇರುವ ಒಂದು ಭಾಷೆಯಲ್ಲಿನ ಪ್ರತಿಪಾದನೆಯೊಡನೆ ತುಲನಾತ್ಮಕವಾಗಿ ಅಧ್ಯಯನ ಮಾಡಬೇಕಾಗಿದೆ. ಅಲ್ಲಮನು ಬೆಡಗಿನ ಶಬ್ದಗಳಲ್ಲಿ ನಿಗೂಢತೆಯನ್ನು ಕಡೆದಿರಿಸಿದ್ದರೆ, ಶ್ರೀ ಅರವಿಂದರ ಅದೇ ಮಾದರಿಯಲ್ಲಿ ಇಂಗ್ಲೀಷಿನಲ್ಲಿ, ಭೂಮಂಡಲದ ಮಿತಿಯಲ್ಲಿ (ಕೇವಲ ಭಾರತ ಮಾತ್ರವಲ್ಲ) ಮನುಷ್ಯ ಪ್ರಜ್ಞೆ ಹೇಗೆ ಪರಿಪೂರ್ಣವಾಗುವತ್ತ ನಡೆಯುತ್ತಿದೆ, ಅದೂ ಆಕಾಶದ ವ್ಯಾಪ್ತಿಯ, ಪರಾಕಾಶಕ್ಕೂ ಮಿಕ್ಕಿದ, ಜೊತೆಗೆ ಅಲ್ಲಮನ ಕಾಲದ ಜ್ಞಾನವು ಈಗ ಪ್ರಜ್ಞಾನವಾದ ಹಂತದ ಬಗೆಗೆ ಅಧ್ಯಯನಗಳು ನಡೆಯಬೇಕಿದೆ.

**ನಾಭಿ ಮಧ್ಯೇ ದಿವಾಕರಃ –**

ಬೆಡಗಿನ ಬೆಡಗಾಗಿ ಒಡಪಿನೋಪಾದಿಯಲ್ಲಿ ಗೂಢತೆಯ ತುರೀಯಾ–ವಸ್ಥೆಯಲ್ಲಿ, ಗುಹೇಶ್ವರನ ಅಂಕಿತದಲ್ಲಿ ಅಭಿವ್ಯಕ್ತಗೊಳಿಸಿರುವ ಅಲ್ಲಮನ "ನಾಭಿ ಮಧ್ಯೆ ದಿವಾಕರಃ" ಎನ್ನುವದಕ್ಕೆ ಶ್ರುತಿ ಆಧಾರವಿದೆ. ಇದೊಂದು ಸವಿಸ್ತಾರವಾಗಿ ಅಧ್ಯಯನ ಬಯಸುವ ಸೂತ್ರ ಯೋಗದ ಪರಿಭಾಷೆಯಲ್ಲಿ, ಆಧ್ಯಾತ್ಮದ ವ್ಯಾಪ್ತಿಯಲ್ಲಿ, ಖಭೌತದ ವಾಸ್ತವದಲ್ಲಿ ಜೊತೆಗೆ ಲೌಕಿಕ ವ್ಯವಹಾರಗಳಲ್ಲಿ ಈ ಸೂತ್ರ ಅತ್ಯಂತ ಪ್ರಮುಖವಾಗಿದೆ. ವೇದ–ಶಾಸ್ತ್ರ–ಪುರಾಣಗಳೆಲ್ಲವನ್ನೂ ವಿಮರ್ಶಾತ್ಮಕವಾಗಿ ವಿಶ್ಲೇಷಿಸಿದ ಅಲ್ಲಮಪ್ರಭು ಉಪನಿಷತ್ತುಗಳನ್ನು (ಶ್ರುತಿಗಳನ್ನು) ಗೌರವಿಸುತ್ತಾನೆ. "ಅರಿದೆ ಅರಿದೆ ಎಂದೆನ್ನುವ ಆಗಮ ಅಗಲಕ್ಕೆ ಹರಿಯಿತ್ತಯ್ಯಾ (1041)" ಎನ್ನುವ ಮೂಲಕ ತನ್ನ ನಿಜದ ನಿಲುವನ್ನು ಪ್ರಕಟ ಪಡಿಸುವಲ್ಲಿ ನಿಚ್ಚಳವಾಗಿ ತನ್ನ ಅಭಿವ್ಯಕ್ತಿ ಶ್ರುತಿಯಾಧಾರಿತ

(ಉಪನಿಷತ್ ಆಧಾರಿತ) ಎಂದು ತಾನು ಕಂಡುಕೊಂಡ, ಸಾಕ್ಷಾತ್ಕರಿಸಿಕೊಂಡ ವಿಶ್ವ ಸತ್ಯಗಳನ್ನು ಹೇಳುತ್ತಾನೆ. "ನೀನೆತ್ತ ನಾನೆತ್ತಲೆಂದು ಬೊಮ್ಮ ಬಕ್ಕಟ ಬಯಲು ಗುಹೇಶ್ವರಾ" ಎನ್ನುತ್ತ, ಈ ಅದ್ವೈತದ ಸ್ವರೂಪವನ್ನು ಅರಿಯಲು ದಾರಿ ತೋರುತ್ತಾನೆ. ಅದಕ್ಕೆ "ಕಾಯದ ಕಣ್ಣು ಮುಚ್ಚಿ ಜ್ಞಾನದ ಕಣ್ಣು ತೆರೆದು ನೋಡಲ್ಕೆ ಅಲ್ಲಿ ಒಂದು ನಿರಾಕಾರವುಂಟು, ಆ ನಿರಾಕಾರದಲ್ಲಿ ನಿರ್ಣಯಿಸಿ ನೋಡಲ್ಕೆ ನಿಶ್ಶೂನ್ಯವುಂಟು, ಆ ನಿಶ್ಶೂನ್ಯದಲ್ಲಿ ನೋಡಲ್ಕೆ, ಕತ್ತಲೆಯಲ್ಲ, ಬೆಳಕಲ್ಲ, ಬಚ್ಚ ಬರಿಯ ಬಯಲು ಗುಹೇಶ್ವರಾ" ಎನ್ನುವ ಈ ವಚನ ಲೌಕಿಕಾರ್ಥದಲ್ಲಿ ಒಂದು ಬೆಡಗಾಗದರೆ ಯೋಗಿಕಾರ್ಥದಲ್ಲಿ ಇನ್ನೊಂದು ಬೆಡಗಾಗಿ ಹೊಳೆಯುತ್ತದೆ.

ಇದೆ ಸೂತ್ರವಾಕ್ಯ(ನಾಭೀ ಮಧ್ಯೇ ದಿವಾಕರಃ)ವು ಯೋಗದಲ್ಲಿ ಮತ್ತೂ ವ್ಯಾಪಕಾರ್ಥವನ್ನು ಹೊಂದಿದೆ. ಯೋಗದ ಪರಿಭಾಷೆಗೆ ತನ್ನದೇ ಆದ ಗತಿ–ವಿಧಾನಗಳಿವೆ. ಇಲ್ಲಿನ "ರಹಸ್ಯ"ವನ್ನು "ಗೂಢ"ವಾಗಿಯೇ ಇರಿಸಲಾಗಿದೆ.

"ನಾಭಿ ಮಂಡಲದ ಉದಯವೇ ಉದಯ।
ಮಧ್ಯ ನಿರಾಳದ ನಿಲುವಿನ ಪರಿಯ ನೋಡಾ।
ಪವನಶೂಲದ ಮೇಲೆ ಪರಿಣಾಮವಯ್ಯಾ ಊರ್ಧ್ವಮುಖದಲ್ಲಿ
ಉದಯವಾಯಿತ್ತ ಕಂಡೆನು।
ಮಿಂಚುವ ತಾರಕಿ! ಇದೇನೋ ಗುಹೇಶ್ವರಾ? (258)"

ಎಂದು ಹೇಳುತ್ತಾ – ಅದರ ವಿವರಗಳನ್ನು ಮತ್ತೂ ವಿಷದವಾಗಿ;

"ನಾಭಿಮಂಡಲದೊಳಗೆ ಈರೈದು ಪದ್ಮಗಳ।
ಸದಮದಗಜ ಮಸ್ತಕದೊಳಗೆ ತೋರುತ್ತದೆ.

'ಅ'ಕಾರ 'ಉ'ಕಾರ ಮಕಾರ ಸ್ಥಾನದ ತ್ರಿಕೂಟ ಸ್ಥಾನದ/ಸಮರಸದ ಸುಖದಲ್ಲಿ ಬೆಳೆದ ಕಂದ–ಮೂಲಾದಿಗಳ ಹೊಸ ರಸದ ಅಮೃತವನು ಓಸರಿಸಿ/ದಣಿಯದ ತೃಪ್ತಿಯಿಂದ ಸುಖಿಯಾದೆನು ಗುಹೇಶ್ವರಾ (244).

ಹೀಗೆ ಉಪನಿಷತ್ ಕಾಲದ ಗೂಡಾರ್ಥದಲ್ಲಿದ್ದ ವಿಶ್ವ ಸತ್ಯವನ್ನು ಜನ ಸಾಮಾನ್ಯರಿಗೂ ಅರ್ಥವಾಗುವಂತೆ ಪ್ರತೀಕಕ್ಕಿಳಿಸಿದ ಅಪ್ರತಿಮ ಪ್ರತಿಭೆ ಅಲ್ಲಮನದು. ತನ್ನ ಕಾಲದ ವಸ್ತುಗಳನ್ನೇ ರೂಪಕಕ್ಕೆ ತಂದು "ನಾಭಿಮಂಡಲದ" ಸರ್ವಸ್ವವನ್ನೂ ವಿವರಿಸಿದ್ದಾನೆ. ಆದರೆ ಅಲ್ಲಮನ ನಂತರದಲ್ಲಿ, ಅಲ್ಲಮ ಮಾತ್ರ ಚಿಂತನ ವಲಯದಿಂದ ದೂರವೇ ಉಳಿದು ಬಿಟ್ಟ, ಚಂಚಲತೆಯಿಲ್ಲದ, ನಿತ್ಯ ಶಾಶ್ವತ ಸತ್ಯದ ಅಭಿವ್ಯಕ್ತಿಯು

ಆಯಾ ಯುಗಕ್ಕೆ ತಕ್ಕಂತೆ ಭಾಷಾ ರೂಪವನ್ನು ಪಡೆದುಕೊಂಡು ಪ್ರಕಟಗೊಳ್ಳುತ್ತದೆ. ಇದು ಮನುಷ್ಯ ಪ್ರಜ್ಞೆಯ ವಿಕಸನಕ್ಕೆ ಸಾಕ್ಷಿಯೂ ಹೌದು. 12ನೇ ಶತಮಾನದ ನಂತರದಲ್ಲಿ ಇಡೀ ಭಾರತ ಸಾಂಸ್ಕೃತಿಕವಾಗಿ ಎದುರಿಸಿದ ಆಘಾತಗಳಿಂದಾಗಿ, ಈ ತೆರನಾದ ಚಿಂತನ ವಿಧಾನಗಳು ಮೂಲೆ ಗುಂಪಾದವು. ಪರಕೀಯ ದಾಳಿಗಳಂತೂ ಇವುಗಳನ್ನು ಕತ್ತಲೆಗೆ ತಳ್ಳಿದವು. ಈ ರೀತಿಯ ಶುದ್ಧ (ವಿ)ಜ್ಞಾನದ, ಅದರಲ್ಲೂ ಶ್ರುತಿ ಪ್ರಾಮಾಣ್ಯದ ಜ್ಞಾನ ಶಾಖೆಗಳಂತೂ ಸಂಪೂರ್ಣವಾಗಿ ಕಡೆಗಣಿಸಲ್ಪಟ್ಟವು. ಆದರೆ ಋತದ ನಿರಂತರತೆಯು ಮತ್ತೆ ಮರುಜನ್ಮ ಪಡೆದು ಮತ್ತೊಂದು ರೂಪದಲ್ಲಿ ಪ್ರಕಟಗೊಳ್ಳಲು ತವಕಿಸುತ್ತದೆ ಎನ್ನುವದನ್ನು ಸಿದ್ಧ ಮಾಡಿದ ಅಭಿವ್ಯಕ್ತಿ ಶ್ರೀ ಅರವಿಂದರದು. ಮತ್ತೆ ಪರಿಪೂರ್ಣವಾಗುವತ್ತ ತವಕಿಸುತ್ತಿರುವ ಮಾನವ ಪ್ರಜ್ಞೆಯ ಅವಸ್ಥಾಂತರವನ್ನು ದ್ರಷ್ಟಾರರಾಗಿಯೇ ಕಂಡ ಶ್ರೀ ಅರವಿಂದರಲ್ಲಿ ಮತ್ತೆ ಈ "ನಾಭಿ ಮಧ್ಯೆ ದಿವಾಕರಃ"ವು ನವೀನ ಅವತಾರದೊಂದಿಗೆ, ಅದೂ ಇಂಗ್ಲೀಷಿನಲ್ಲಿ ಪ್ರಕಟಗೊಂಡಿದೆ.

ಶ್ರೀ ಅರವಿಂದರ ಭಾಷೆಯೂ ಬೆಡಗಿನ ಸ್ವರೂಪದ್ದೇ ಆಗಿದೆ. ಅದೂ ಅನುಭಾವದ ನೆಲೆಯಲ್ಲಿ ಮನುಷ್ಯ ಪ್ರಜ್ಞೆಯು ಋತ–ಚೇತನದ ಹಂತಕ್ಕೆ ಸಾಗಲೆಳಸಲು ನಡೆದಿರುವ ಪ್ರಯತ್ನದ ಬಗೆಗೆ ಹಾಗೂ ಅದರ ಪಥದ ಬಗೆಗೆ ತಮ್ಮ ಮಹಾಕಾವ್ಯ "ಸಾವಿತ್ರಿ"ಯಲ್ಲಿ ವಿವರವಾಗಿ ತೋರಿಸಿದ್ದಾರೆ. ಅಷ್ಟೇ ಅಲ್ಲದೇ, ಪ್ರಜ್ಞೆಯ ಮೂಲ, ಬೆಳವಣಿಗೆ, ಅದು ವಿಚಲನೆಗೊಂಡದ್ದು, ಆದರೂ ಅದು ಸೇರಬೇಕಾದ ಗಮ್ಯ ನೆಲೆಯ ನಿರ್ದಿಷ್ಟತೆಯನ್ನು ನಿಖರವಾಗಿ ತೋರಿಸಿದ್ದಾರೆ. ಅವರೂ ಸಹಿತ "ನಾಭಿ ಮಧ್ಯೆ ದಿವಾಕರಃ" ಎನ್ನುವದನ್ನೇ ಹೇಳುತ್ತಿರುವದು;

ಅರಿವಿನಾ ಶೂನ್ಯ ಸ್ಥಿತಿಯಲ್ಲಿ ಉಳಿದು ತಾ ತೊರೆದು ಮರೆತು ಅದನು
ತನ್ನೊಡಲಲಿದ್ದ ಆ ಭವ್ಯ ಚಿರದ "ದ್ವಿದಳಾದಾಕ್ಷರಗಳನ್ನು"
"ನಾಭಿ ಮಧ್ಯದಲಿ ಇಹ ದಿವಾಕರ"ನು ಗೂಡಾರ್ಥ ಲೋಕಗಳನು
ಸಂಧಿಸುವ ಸಮಯ ಅನುಮತಿಯು ಇರದೆ ವಿಚಲನೆಯ ನೀಡಿ ತಾನು

**(ಸಾವಿತ್ರಿ 1–4 ಬ–9)**

ಇಲ್ಲಿ two-gaint letters ಮತ್ತು "middle -sign" ಎರಡೂ ಬೆಡಗಿನ ಶಬ್ದಗಳು. ಈ ಲೇಖನದ ವ್ಯಾಪ್ತಿಯಲ್ಲಿ "middle-sign" ಎಂದರೆ ನಾಭಿ ಕೇಂದ್ರವೆಂದೇ ಅರ್ಥವಿದೆ. ಶ್ರೀ ಅರವಿಂದರೂ ಹೇಳುತ್ತಿರುವುದು ಅಲ್ಲಮ ಹೇಳುತ್ತಿರುವ "ನಾಭೀ ಮಂಡಲದ ಉದಯ" ವನ್ನು. ಅಂದರೆ ಅಲ್ಲಮ ಕಂಡ (12ನೇ ಶತಮಾನದ) ಘಟನೆ ಮತ್ತೆ 21ನೇ ಶತಮಾನದಲ್ಲಿ ಅವತರಿಸುತ್ತಿದೆ.

ಇದರಿಂದ ಹೊರಬರುವ ಪರಿಯನ್ನು ಅಲ್ಲಮ ತೋರಿಸುತ್ತ, "ಸ್ವರವಿಡಿದು ಶಬ್ದ ಸಮರಸವಾದ ಪರಿ ಎಂತು ಹೇಳಾ (861)" ಎನ್ನುವ ಅಂತರಾರ್ಥ ಅರಿಯಬೇಕಿದೆ ನಮ್ಮ ಮಾತು ಬರಿಯ ಮಾತಲ್ಲ. "ಮಾತೆಂಬುದು ಜ್ಯೋತಿರ್ಲಿಂಗ ಸ್ವರವೆಂಬುದು ಪರತತ್ತ್ವ (1234)" ಎನ್ನುವ ಅಲ್ಲಮನ ಭಾವವನ್ನೇ ಶ್ರೀ ಅರವಿಂದರ Vowel and Consonant ದಲ್ಲಿ ಕಾಣಬಹುದು;

ನಾವೆ ರೂಪಿಸಿದ ನಮ್ಮ ಶಾಸನದಿ ಅಪರಿಮಿತ ಶೂನ್ಯ ಸ್ಥಾನ
ಅನಿವಾರ್ಯವಾಗಿ ಅದನೀಗ ಭರಿಸಿ, ಮುನ್ನಡೆಗೆ ಇಹುದು ತಾಣ,
ನಿಸ್ಸೀಮದಾತ್ಮದಾ ಮುಕ್ತ ಸ್ವರದಿ ಸರಮಾಲೆಯೊಡನೆ ಬೇಗ
ಸುಪ್ತವಾಗಿರುವ ಸಾಂತದಾ ಸೋಟ ವ್ಯಂಜನದ ಜೊತೆಗೆ ಈಗ

**(1–4–ಬ–17)**

ಪುನಃ ಸಂಲಗ್ನಗೊಳಿಸೆ ಸಮರಸದ ಪರಿಪೂರ್ಣ ರೂಪವರಳಿ
ವಿಭಜನೆಯ ಚಿಹ್ನೆ ಮಧ್ಯದಲಿ ಇದ್ದು ಸಂಯೋಗ ರೂಪ ತಾಳಿ
ಸಾಂತದಾ ಜೊತೆಗೆ ಮನಸಿನಾ ಜೋಡು ಸಂಪರ್ಕ ಕೊಂಡಿಯಾಗಿ
ಆರೋಹಗೊಳುವ ಆತ್ಮಕಿದೆ ಸೂಕ್ಷ್ಮ ಭೂಕಂಠ ಸೇತುವಾಗಿ

**(1–4–ಬ–18)**

ವಿಶ್ವ ಸತ್ಯದ ದರ್ಶನಕ್ಕೆ ಪಥಗಳು ಬೇರೆ ಬೇರೆ ಇದ್ದರೂ ಗುರಿ ಒಂದೇ. ಅಲ್ಲಮನಿಗಿಂತಲೂ ಮೊದಲು ಇದ್ದ ಸಂಸ್ಕೃತದ ಅಭಿವ್ಯಕ್ತಿಗಳಿರಲಿ, 12ನೇ ಶತಮಾನದ ಅಲ್ಲಮ ಅಭಿಲಾಷೆಯಿರಲಿ ಮತ್ತೆ 21ನೇ ಶತಮಾನದ ಶ್ರೀ ಅರವಿಂದರ ಕಾಣ್ಕೆಯ ವಿಷಯವಿರಲಿ, ಎಲ್ಲವೂ ತೋರುತ್ತಿರುವದು ಆ ಊರ್ಧ್ವದೆಡೆಯಲ್ಲಿ ಇರುವ ಚಿಜ್ಜ್ಯೋತಿಯ ಸಾಕ್ಷಾತ್ಕರವನ್ನು. ಅಲ್ಲಮನು ಅದು ಇರುವ ತಾಣವನ್ನು ತೋರಿದರೆ, ಶ್ರೀ ಅರವಿಂದರು ಅಲ್ಲಿಂದ ಅಧಿರೋಹಣಗೊಂಡು ಬರುತ್ತಿರುವ ಪ್ರಜ್ಞೆಯ ಕುರಿತು ಹೇಳುತ್ತ, ಆ ಊರ್ಧ್ವವನ್ನು ತಲುಪುವ ವಿಧಾನದ ಬಗೆಗೆ ತಿಳಿಸುತ್ತಾರೆ.

ಆದಿಯಕ್ಕರಕೆ ಪರಮದಕ್ಕರವು ಸೇರಿ ಸಮರಸದ ನಾದ,
ಆಗಲ್ಲಿ ಪ್ರಕೃತಿ ಚೈತನ್ಯ "ಒಂದು", ಅಮೃತದಾ ಸ್ಪಂದ ಮೋದ.
ಆಧಾರದಲ್ಲಿ ಆ ಊರ್ಧ್ವದಲ್ಲಿ ಇದೆ ಆದಿ–ಅಂತ್ಯ ಬಿಂದು
ಆ ಎರಡು ತಾಣ ಮಾಯಕದಿ ಸತತ, ಯೋಜನೆಯ ಆತ್ಮವಿಂದು.

**(ಸಾವಿತ್ರಿ 1–4–ಬ–20)**

# ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್

## ಪ್ರಕಟವಾಗಿರುವ ಪುಸ್ತಕಗಳ ಪಟ್ಟಿ

| ಕ್ರಮ ಸಂಖ್ಯೆ | ಕೃತಿ ಹೆಸರು |
|---|---|
| 1 | ಸಮಗ್ರ ಶಿಕ್ಷಣ |
| 2 | ಶ್ರೀ ಅರವಿಂದರು ದಿವ್ಯ ಜೀವನ |
| 3 | ಶ್ರೀ ಅರವಿಂದರು ಭಾರತೀಯ ಧರ್ಮ ಪರಂಪರೆ ಮತ್ತು ಭಗವಾನ್ ಶ್ರೀ ಅರವಿಂದರ ದರ್ಶನ |
| 4 | ಶ್ರೀ ಮಾತಾರವಿಂದರ ಪೂರ್ಣಯೋಗ |
| 5 | ಪ್ರಾರ್ಥನಾ ಪದ್ಯಗಳು |
| 6 | ರವಿ ಬೆಳಗಿದ ಪಥ (ಶ್ರೀಮಾತೆಯವರ ವಚನವೇದ ಸಂಕಲನ) |
| 7 | ನವ್ಹೆಂಬರ್ 24, 1926 ಅಧಿಮಾನಸ ಪ್ರಜ್ಞೆಯ ಅವರೋಹಣ ಶ್ರೀ ಅರವಿಂದರ ಹಾಗೂ ಶ್ರೀಮಾತೆಯವರ ದೃಷ್ಟಿಯಲ್ಲಿ ಸಿದ್ಧಿದಿನದ ಮಹತ್ವ |
| 8 | ಶ್ರೀ ಅರವಿಂದರು (ಒಂದು ಸಂಕ್ಷಿಪ್ತ ಪರಿಚಯ) |
| 9 | ಶ್ರೀಮಾತೆ (ಒಂದು ಸಂಕ್ಷಿಪ್ತ ಪರಿಚಯ) |
| 10 | ಕೇಂಬ್ರಿಜ್‌ನ ಸುಗಂಧಿತ ಪುಷ್ಪ (ಮಾನವತೆಗೆ ಶ್ರೀ ಅರವಿಂದರ ಕೊಡುಗೆ) |
| 11 | ಅತಿಮಾನಸ ಹಾಗೂ ಹೊಸ ಜಗತ್ತೊಂದರ ಜನನ (ಶ್ರೀಮಾತೆ ಹಾಗೂ ಶ್ರೀ ಅರವಿಂದರ ಬರಹಗಳ ಸಂಕಲನ) |
| 12 | ಭಾರತ ಮತ್ತು ಭರತಮಾತೆಯ ದೈವನಿಯತಿ |
| 13 | ಆದರ್ಶ ಶಿಕ್ಷಕ |
| 14 | ಪೂರ್ಣಯೋಗ |
| 15 | ಶ್ರೀ ಅರವಿಂದರ ಧರ್ಮ ಹಾಗೂ ರಾಷ್ಟ್ರೀಯತ್ವ |
| 16 | ಶ್ರೀಮಾತೆಗೆ 72 (ಬಾಹತ್ತರ) ಕವನಗಳ ಅರ್ಪಣೆ |

| ಕ್ರಮ ಸಂಖ್ಯೆ | ಕೃತಿ ಹೆಸರು |
|---|---|
| 17 | ಶಿಕ್ಷಣ ಕುರಿತು ಶ್ರೀಮಾತಾರವಿಂದರ ವಿಚಾರಧಾರೆ |
| 18 | ಶ್ರೀ ಅರವಿಂದ ದರ್ಶನ |
| 19 | ಶ್ರೀಮಾತೆ ಭಾರತಮಾತೆ |
| 20 | ದುರ್ಗಾಸ್ತೋತ್ರ |
| 21 | ಚಿಂತನಗಳು ಮತ್ತು ಸೂಕ್ತಿಗಳು |
| 22 | ಯೋಗ ಸಮನ್ವಯ |
| 23 | ಶ್ರೀ ಅರವಿಂದಾಶ್ರಮ |
| 24 | ಪ್ರಸೂತಿ ಪೂರ್ವದ ಶಿಕ್ಷಣ ಶೋಭಾಯಮಾನ ಭವಿಷ್ಯತ್ತಿನೆಡೆಗೆ |
| 25 | ಮಗುವನ್ನು ಪೋಷಿಸುವುದು ಹೇಗೆ? |
| 26 | ಸುಪ್ರಮಾನಸದ ಶ್ರೀಮಾತೆ |
| 27 | ಸಾವಿತ್ರಿ (ಶ್ರೀ ಅರವಿಂದರ ಮಹಾಕಾವ್ಯದ ಸಾರಾಂಶ) |
| 28 | ಪೂರ್ಣಯೋಗದ ಪಥದಲ್ಲಿ |
| 29 | ಬೆಳಕಿನ ಕಿರಣಗಳು |
| 30 | 24th November 1926 (Descent of Overmental Consciousness) |
| 31 | ಶ್ರೀ ಅರವಿಂದರ ಸಾವಿತ್ರಿ |
| 32 | ಮಾನುಷ ಚಕ್ರ |
| 33 | ಚೈತ್ಯ ಪುರುಷ |
| 34 | ಭವಾನಿ ಭಾರತಿ |
| 35 | ಶಿಕ್ಷಣ |
| 36 | ಯೋಗಾರಂಭ |
| 37 | ಶ್ರೀ ಅರವಿಂದರ ಸಾವಿತ್ರಿ |
| 38 | ಶ್ರೀ ಅರವಿಂದರು |



ಫೋಟೋ: ಇಮೇಜಿಂಗ್ ಸಾವಿತ್ರಿ

ಜ್ಞಾತಕ್ಕೆ ದೊರೆತ ಅವಕಾಶವನ್ನು ಅವನಾತ್ಮವೀಗ ಮೀರಿ
ನಿಸ್ಸೀಮವವನ ಚಿಂತನವು ನೆರೆಯ ಬ್ರಹ್ಮಾಂಡ–ದೃಷ್ಟಿ ತೋರಿ;
ವಿಶ್ವತೇಜದಾ ಜ್ಯೋತಿ–ಕಾಂತಿಗಳು ಈಗವನ ಅಕ್ಷಿಯಾಗಿ,
ಪ್ರಾಣದಲಿ ಮತ್ತೆ ಪ್ರಜ್ಞೆಯಲಿ ಸ್ವರ್ಣವರ್ಣದಾ ವಹನವಾಗಿ; ॥ 1–5–ಕ–6 ॥
ಮರ್ತ್ಯ–ದೇಹದಲಿ ಇರುವ ಇವನೆಡೆಗೆ ಶಕ್ತಿಯವತರಣ ಧಾರೆ,
ಶಾಶ್ವತದ ನೆಲೆಯ ಆನಂದ ಘನದ ಆರ್ಣವಗಳಿಂದ ಧಾರೆ;
ಅನಿರ್ವಚನೀಯ ನವ್ಯಾನುಭೂತಿಯಲ್ಲೀಗ ಮತ್ತೆ ಸಾಂತ
ಅವನೀಗ ಪೂರ್ಣ ಪೂರ್ಣಾನುಭೂತಿ ವಿಸ್ಮಿತದಿ ನಿತ್ಯ ಶಾಂತ. ॥ 1–5–ಕ–79 ॥

**– ಪುಟ್ಟು ಕುಲಕರ್ಣಿ**
**(ದಳ 1 ರೇಣು 4 ಪುಟ 57)**

**RNI No. 22511/1971**
No. of Pages **64 + 4 (Cov. Page)**
KAR Reg No.: RNP/KA/BGS/368/2024-2026
Licensed to post without prepayment License No.PMG BG/WPP-409/2024-2026
Kannada Monthly Magazine
Date of Publication on 7th of Every Month
Permitted to Post 10th of Every Month. Reg. Valid till: 31-12-2026
Licensed to Post at BG PSO, Mysuru Road, Bengaluru - 560 026



ಫೋಟೊ: ಇಮೇಜಿಂಗ್ ಸಾವಿತ್ರಿ

ಎನ್ನಾತ್ಮ ದುಃಖ ಪರಿಪಕ್ವ ಪಾಕ ಮೌಕ್ತಿಕದಿ ಶಕ್ತಿ ರೂಪ
ಸಮರ್ಪಣೆಗೊಂಡ ಹೃದಯವದು ತಾನು ತಲ್ಲೀಯ ಭಾವದಲ್ಲಿ
ಆತ್ಮಾನುಬಂಧದನುಬಂಧದಲ್ಲಿ ಆರೋಹ ಪ್ರಕೃತಿಯಲ್ಲಿ
ಅನಂತಾನಂತ ಕಾಲದಲಿ ಸತತ ತಾ ಅರಳುತಿದು ಹೀಗೆ
ಆ ದೇವ-ಪಾದ-ಪದ್ಮಗಳ ಸೇರಿ ಏಕತ್ರವಾಗುವೆಡೆಗೆ.

**– ಪುಟ್ಟು ಕುಲಕರ್ಣಿ**
**(ದಳ 2 ರೇಣು 12 ಪುಟ 278)**

Ed. Sri Puttu Parashuram Kulkarni, Pub: Dr. Ajit Sabnis
Ptd. by M/s. Seshaasai e-forms Pvt. Ltd.,
on behalf of Sri Aurobindo Complex Trust, ‘Sri Aurobindo Marg’,
J.P. Nagar I Phase, Bengaluru - 560 078. Phone: 080 - 22449882.